1957

ಕಲಾತಪಸ್ವಿ

ಪಂ. ಮೂ. ರುದ್ರಮುನಿಸ್ವಾಮಿ

ವಿವೇಕ ಸಾಹಿತ್ಯಮಾಲೆ
ಬೆಂಗಳೂರು—4.

ಂಯ

ಪಿ,

A B Krishnaraj
17.6.57

ಕಲಾತಪಸ್ವಿ

*

ಪಂ. ಮೂ. ರುದ್ರಮುನಿಸ್ವಾಮಿ.

ವಿವೇಕ ಸಾಹಿತ್ಯಮಾಲೆ
ಮಂಗಳೂರು–೩.

1957

ಬೆಲೆ: ಒಂದು ರೂಪಾಯಿ.

ಸಂಪಾದಕರು:
ರಾಮ ಮೊಳೆಯಾರ ವಿದ್ವಾನ್.

ಮುದ್ರಕರು:
ವಿಜಯ ಮುದ್ರಣಾಲಯ ಮಂಗಳೂರು-1.

ಎರಡು ಮಾತು

ಕಲಾತಪಸ್ವಿ ನಮ್ಮ ೨೩ನೆಯ ಪ್ರಕಟಣೆಯಾಗಿದ್ದು ಐದನೆಯ ವರುಷದ ಒಂದನೆಯ ಕುಸುಮವಾಗಿ ಚಂದಾದಾರರ ಕೈಸೇರುತ್ತಿದೆ. ಈ ಮೊದಲಿಂದಲೂ ಚಂದಾದಾರರಾಗಿದ್ದು ಹೊಸ ವರ್ಷದಲ್ಲಿ ಕಾಲಿಡುವಂತೆಸಗಿದ ನಮ್ಮ ಆಪ್ತ ಬಂಧುಗಳೆಲ್ಲರನ್ನೂ ಈ ಹೊತ್ತಿನಲ್ಲಿ ಸ್ಮರಿಸಿಕೊಳ್ಳುವೆವು.

ತಮ್ಮ ಅಮೂಲ್ಯವಾದ "ಕಲಾತಪಸ್ವಿ"ಯನ್ನು ಮಾಲೆಯಲ್ಲಿ ಪೋಣಿಸಲು ಅನುಮತಿಯಿತ್ತ ಗೌ|| ಪಂ. ಮೂ. ರುದ್ರಮುನಿಸ್ವಾಮಿಗಳಿಗೆ ಋಣಿಗಳಾಗಿರುವೆವು.

ಶೀಘ್ರದಲ್ಲೀ ಅಂದವಾಗಿ ಮುದ್ರಿಸಿಕೊಟ್ಟ ವಿಜಯ ಪ್ರೆಸ್ಸಿನ ಗೌ|| ರಾಮಚಂದ್ರ ರಾಯರಿಗೂ, ನಮ್ಮ ಹಿತೈಷಿಗಳಿಗೂ ಕೃತಜ್ಞತೆಯನ್ನರ್ಪಿಸುವೆವು.

—ಸಂಪಾದಕ.

ಮುಂದಿನ ಕುಸುಮ

"ಕವಿರತ್ನಾಕರ ಸಿದ್ಧ"

(ರತ್ನಾಕರ ವರ್ಣಿಯ ಜೀವನ ಚರಿತ್ರೆ ಕಾದಂಬರಿ ರೂಪದಲ್ಲಿ)

(ರಾ. ಮೊ. ವಿಶ್ವಾಮಿತ್ರ)

ಪರಿವಿಡಿ

ಸಂಶೋಧನೆ

ಕಣದಲ್ಲಿ ಎತ್ತುಗಳ ಕೊರಳು ಹರಿದು ಗೂಟಕ್ಕೆಬಿಗಿದು, ಮೇವು ಹಾಕಿ ಶಿವಣ್ಣ ನಿಟ್ಟುಸಿರುಬಿಟ್ಟ. ಹೊಟ್ಟೆಯಲ್ಲಿ 'ಡೊಂಬರಾಟ' ನಡೆದಿತ್ತು. ಮನೆಗೆ ಹೋಗಿ ರೊಟ್ಟಿ-ಹಿಂಡಿ ತಿಂದು ಹಸಿವಿನ ಜ್ವಾಲೆಯನ್ನು ನೀಗಿಸಿ ಕೊಳ್ಳಬೇಕೆಂದರೆ ಮನಸ್ಸು ಬಾರದು. ನಗರದಿಂದ ಬಂದ ತನಗೆ ಪ್ರಶ್ನೆಗಳ ಸುರಿಮಳೆಯೇ ಆಗಬಹುದು.

"ದಲ್ಲಾಳಿ ಅಂಗಡಿಯ ಪುಟ್ಟಪ್ಪ ಹಣ ಎಷ್ಟು ಕೊಟ್ಟಾರು?"

"ಔಷಧಿ ತಂದೆಯಾ?"

"ಡಾಕ್ಟರರು ಎಲ್ಲಿ?"

"ಹಣ್ಣು, ಬ್ರೆಡ್ಡು ತಂದಿರಬಹುದೂಂತ ಕಾಣುತ್ತದೆ, ಅಲ್ವೆ?"

ಇಂಥ ಪ್ರಶ್ನೆಗಳ ಮಾಲೆಯೇ ತನ್ನನ್ನು ಆಶ್ರಯಿಸಿದಾಗ ತಾನೇನು ಉತ್ತರಿಸಬೇಕು. ಶಿವಣ್ಣ ಮನದಲ್ಲಿಯೇ ತಳಮಳಗೊಂಡ.

ಬೆಳೆ ಬಂದಾಗ ಪುಟ್ಟಪ್ಪನ ದಲ್ಲಾಲಿ ಅಂಗಡಿಗೆ ಆತ ಮಾಲು ಹೊಡೆಯುತ್ತಿದ್ದುದೇನೋ ನಿಜ. ಪುಟ್ಟಪ್ಪ, ತಂದೆ ಬಸಪ್ಪ ಇವರೀರ್ವರ ವ್ಯವಹಾರ ಸುಮಾರು ದಶಕದಿಂದ ನಡೆದುಕೊಂಡು ಬಂದಿದೆ. ಇದನ್ನು ನಿಲ್ಲಿಸದೆ ಸಂಪ್ರದಾಯದಂತೆ ಬಸಪ್ಪನ ಮಗ ಶಿವಣ್ಣನೂ ಸಹ ಅಲ್ಲಿಗೆ ಮಾಲು ಹೊಡೆಯುತ್ತಿದ್ದ. ಆರ್ಥಿಕ ಮುಗ್ಗಟ್ಟು ಬಂದಾಗ ಮುಂಗಡ ವಾಗಿ ಹಣ ಇಸಕೊಂಡು, ಲೆಕ್ಕ ಹಚ್ಚಿಸಿ ತಂದೇ ತರುತ್ತಿದ್ದ; ಮಾಲು ಕೈಗೆ ಬರುತ್ತದೆ, ಇನ್ನೇನು ಪೈರು ಕೊಯ್ಲಿಗೆ ಬಂದಿದೆ ಎನ್ನುವಾಗ ಪುಟ್ಟಪ್ಪ ಸಂತೋಷದಿಂದ ಹಣಕೊಟ್ಟು ನಾಲ್ಕು ರೂಪಾಯಿ ಹೆಚ್ಚೇ ಲೆಕ್ಕ ಬರೆಯು ತ್ತಿದ್ದ !

......ಆದರೆ ಈಗ ಬೇಸಿಗೆಯ ಕಾಲ. ಒಂದೆರಡು ಹದಮಳೆ ಬಂದ ಮೇಲೆ ಬಿತ್ತನೆ. ಮತ್ತೆ ಪೈರು ಕೈಗೆ ಬಂದರೂ ಬಂತು ಇಲ್ಲದಿದ್ದರೂ ಇಲ್ಲ! ಇಂಥ ಸಮಯದಲ್ಲಿ ಪುಟ್ಟಪ್ಪನ ಕೈಹಣ ಕೊಡಲು ಹಿಂದಾಗುತ್ತಿತ್ತು. ಸುಳ್ಳು ನೆವ, ಇಲ್ಲಸಲ್ಲದ ಅಡಚಣೆಗಳನ್ನು ಕೇಳಿದ ಕೂಡಲೆ ಧಾರಾಳವಾಗಿ ಪೂರ್ವಭಾವಿ ಯೋಚಿಸದೆ ಹೇಳುತ್ತಿದ್ದ.

ಶಿವಣ್ಣ ಅನುಮಾನದಿಂದಲೇ ಹೋಗಿ ಕೇಳಿದ.

"ಅಪ್ಪನಿಗೆ ಕಾಯಿಲೆಯಾಗಿದೆ ಅಣ್ಣ. ಕುಳಿತುಕೊಳ್ಳುವಂತಿಲ್ಲ, ಮೇಲೆಕೇಳುವಂತಿಲ್ಲ."

"ಯಾವಾಗಿನಿಂದ?"

"ಸುಮಾರು ಎರಡೂವರೆ ತಿಂಗಳಾಯಿತು. ಅದಕ್ಕೋಸ್ಕರ ದುಡ್ಡು ಇಸಕೊಂಡು ಬಾ ಎಂದು ಹೇಳಿ ಕಳುಹಿದ, ಅಪ್ಪ."

"ಅಯ್ಯೋ! ನಿನ್ನೆಯಾದರೂ ಬಂದಿದ್ದರೆ ಏನಾದರೂ ಮಾಡಬಹುದಾಗಿತ್ತು. ಇನ್ನೂರು ರೂಪಾಯಿಗೆ ಚೆಕ್ಕಿತ್ತು; ನಿನ್ನೆ ಪಕ್ವಾಸಾಗೆ ಕೊಟ್ಟೆ. ಛೇ! ಎಂತಹ ಕೆಲಸವಾಯಿತಲ್ಲೋ ನನ್ನ ಹತ್ತಿರ ನಿಜವಾಗಲೂ ಬಿಡಿಗಾಸಿಲ್ಲ."

—ಇನ್ನು ಡಾಕ್ಟರರನ್ನು ಬಂಡಿಯಲ್ಲಿ ಕರೆದುಕೊಂಡು ಬರುವ ಮಾತು ತಿರುಕನ ಕನಸಾಯಿತು. 'ಬಂದದಾರಿಗೆ ಸುಂಕವಿಲ್ಲ' ಎಂದುಕೊಂಡು ಬರಿಗೈಯಲ್ಲಿ ಹಿಂದಿರುಗಿದ, ಶಿವಣ್ಣ.

ಮನೆಯನ್ನು ಆತಸಮೀಪಿಸುತ್ತಿದ್ದಂತೆ ತಂದೆಯ ಕೆಮ್ಮು ತಮಟೆಯ ಶಬ್ದದಂತೆ ಕೇಳಿಸಿಕೊಳ್ಳುತ್ತಿತ್ತು.

ತಂದೆಗೆ ಏನಾಗಿದೆಯೋ ತಿಳಿಯದು! ಹಗಲೆಲ್ಲಾ ಮೈ ಕಾವೇರುತ್ತಿತ್ತು......ರಾತ್ರಿಯೆಲ್ಲಾ ಕೆಮ್ಮು, ಹಳ್ಳಿಯ ಮದ್ದು ಏನೂ ಮಾಡದೆ ಹೋಗಿತ್ತು. ಬಿತ್ತನೆಗೆ ಬೀಜ ತರಲು ಹಣವಿಲ್ಲ. ಮೇಲಾಗಿ ತಂದೆಗೆ ಒಂದು ಹಣ್ಣು ತರಲು ಕಾಸಿಲ್ಲ. ಇಂಥದನ್ನೆಲ್ಲಾ ಸಹಿಸಿಕೊಂಡು ತಾನು ಜೀವಂತವಾಗಿದ್ದೇನಲ್ಲಾ ಎಂದು ಕೊಂಡು ಮನೆಯೊಳಗೆ ಕಾಲಿಟ್ಟ.

"ಈಗ ಬಂದೆಯಾ ಶಿವಣ್ಣ?"

ಪ್ರಶ್ನಿಸಿದವರ ಗುರುತು ಹತ್ತಲಿಲ್ಲ. ಮಂದ ಚಿಮಿಣಿ ದೀಪದ ಬೆಳಕಿನಲ್ಲಿ ಆ ವ್ಯಕ್ತಿ ಕುಳಿತಿತ್ತು. ಯಾಂತ್ರಿಕವಾಗಿ ಗೊಂದಲದ ಧ್ವನಿಯಲ್ಲಿ ನುಡಿದ:

"ಇದೇ ಈಗ......"

ತಾಯಿ ಜಗ್ಗನೆ ನೀರು ತಂದುಕೊಟ್ಟಳು. ಕೈಕಾಲು ತೊಳೆದುಕೊಳ್ಳುತ್ತಾ ಕೇಳಿದ: "ಅವ್ವಾ, ಯಾರೇ ಅವರೂ......?"

"ಚಂದ್ರಶೇಖರಯ್ಯನವರು......"

ಚಂದ್ರಶೇಖರಯ್ಯ...... ಹಿಂದೊಮ್ಮೆ ತಮ್ಮ ಮನೆಗೆ ಬಂದಿದ್ದುದು ಉಂಟು. ಆತ ಸಾಹಿತ್ಯಪ್ರೇಮಿಯಂತೆ, ಹಳೆಗನ್ನಡದ ಕಾವ್ಯಗಳ ಮೇಲೆ ಹೆಚ್ಚಿನ ಆಸ್ಥೆ ಇಟ್ಟುಕೊಂಡವನಂತೆ. ಉತ್ತಮೋತ್ತಮ ಗಮಕಿಯೆಂದೂ ಜನಗಳು ಆಡಿಕೊಳ್ಳುತ್ತಾರೆ.

ಚಂದ್ರಶೇಖರಯ್ಯ ಇತ್ತೀಚೆಗೆ ಹಳ್ಳಿಗಳೆಡೆ ತಿರುಗುತ್ತಿದ್ದ. ತಾಡ ಓಲೆಗಳ ಸಂಗ್ರಹದಲ್ಲಿ ನಿರತನಾಗಿದ್ದ. ಅನೇಕ ಅಪ್ರಕಟಿತ ಕಾವ್ಯಗಳು ದೇವರ ಜಗುಲಿಯ ಮೇಲೆ ಕೊಳೆಯುತ್ತಿವೆ. ಅವುಗಳನ್ನು ಸಂಗ್ರಹಿಸಿ, ಸಂಶೋಧನೆ ಮಾಡಿ ಜನರಿಗೆ ಆ ಉತ್ತಮ ಕಾವ್ಯಗಳ ರಸಾಸ್ವಾದನೆಯನ್ನು ಸವಿಯಲು ಅನುವು ಮಾಡಿಕೊಡುವುದಕ್ಕಿಂತ ಹೆಚ್ಚಿನ ಸಾಹಿತ್ಯಸೇವೆ ಬೇರೊಂದಿಲ್ಲ ಎಂದು ಕೊಂಡೇ ಕಾಲುನಡಗೆಯಲ್ಲಿ ಚಂದ್ರಶೇಖರಯ್ಯ ಹಳ್ಳಿಗಳನ್ನು ತಿರುಗುತ್ತಿದ್ದ. ಇತ್ತೀಚಿಗೆ ಕೆಲವನ್ನು ಸಂಗ್ರಹಿಸಿಯೂ ಇದ್ದ. ಕೆಲವು ನೂತನ ಕಾವ್ಯಗಳಾಗಿದ್ದುವು. ಹಲವು ಪ್ರಕಟಿತ ಕಾವ್ಯಗಳ ಪ್ರತಿಗಳಾಗಿದ್ದುವು.

ಬಸಪ್ಪನ ಮನೆಯಲ್ಲಿ ಒಂದು ಅಂತಹ ತಾಡ ಓಲೆ ಗ್ರಂಥ ಇದೆಯೆಂದು ತಿಳಿದು ಹಿಂದೊಮ್ಮೆ ಬಂದುಕೊಡಲು ಕೇಳಿದ್ದ. ಸಂಭಾವನೆಯ ಆಸೆಯನ್ನೂ ತೋರಿಸಿದ್ದ.

"ಹಣಕ್ಕೆ ದೇವರನ್ನು ಮಾರುವುದೇ?......ಪಾಪ ಪಾಪ! ಹಿಂದಿನಿಂದ ಹಿರಿಯರು ದೇವರ ಜಗುಲಿಯ ಮೇಲಿಟ್ಟು ಪೂಜೆ ಮಾಡುತ್ತಾ ಬಂದಿದ್ದಾರೆ."

ಆತನ ವಿಚಾರ ಸರಣಿ ಈ ರೀತಿ ಹರಿಯುತ್ತಿತ್ತು.

ಶಿವಣ್ಣನ ತಂದೆ ಬಸಪ್ಪ ಹಬ್ಬ ಹರಿದಿನಗಳಲ್ಲಿ ಹೇಳುತ್ತಿದ್ದ, "ತಮ್ಮಾ, ಚೆನ್ನಾಗಿ ವಿಭೂತಿ ಹಚ್ಚಬೇಕು."

ವಿಭೂತಿಯ ಘಟ್ಟಿಗೆ ನೀರು ಹಚ್ಚಿ ಮೂರು ಬೆಟ್ಟಿನಿಂದ ಆ ತಾಡ ಓಲೆಯ ಕಟ್ಟಿಗೆ ಸವರಿ, ಗಂಧಪತ್ರೆ ಇಟ್ಟು ಸಾಷ್ಟಾಂಗ ನಮಸ್ಕಾರ ಮಾಡುತ್ತಿದ್ದ ಶಿವಣ್ಣ. ಹೀಗೆ ಬಸಪ್ಪನೂ ಮಾಡುತ್ತಿದ್ದುದೂ ಇತ್ತು.

......ಮನೆಗೆ ಮಹಾಲಕ್ಷ್ಮಿ ಇದ್ದಂತೆ! ಸಾಕ್ಷಾತ್ ಸರಸ್ವತಿ ಇದ್ದಂತೆ ಇತ್ತು ಆ ತಾಡ ಓಲೆ; ಅಂತಹ ಓಲೆಯನ್ನು ಕೊಡಬಹುದೆ?......

"ನೀವು ಕೇಳಬಾರದು, ನಾವು ಕೊಡಬಾರದು."

"ಬಸಪ್ಪ ನಿನಗೆ ಗೊತ್ತಿಲ್ಲ. ತಿಳಿದೂ ತಿಳಿದೂ ಹೀಗೆ ಮಾತಾಡು ತ್ತೀಯಲ್ಲ" ಎಂದು ಚಂದ್ರಶೇಖರಯ್ಯ ಹೇಳಿದಾಗ ಬಸಪ್ಪ ನುಡಿದಿದ್ದ,

"ನಮ್ಮನೆಯೊಳಗೆ ಹೀಗೆ ಪೂಜೆ ಮಾಡುವುದು ಹಿಂದಿನಿಂದ ನಡೆದು ನೇಮವಾಗಿ ಹೋಗಿದೆ."

ಊರಿನ ಶ್ಯಾನುಭೋಗ, ಗೌಡರಿಂದ ಹೇಳಿಸಿದ ಮೇಲೂ ಪ್ರಯೋಜನ ವಾಗಿರಲಿಲ್ಲ. ಚಂದ್ರಶೇಖರಯ್ಯ ನಿರಾಶನಾಗಿ ಹಿಂದಿರುಗಿದ್ದ. ಪುನಃ ಅದೇ ಚಂದ್ರಶೇಖರಯ್ಯ ಏಕೋ ಏನಿತೋ ಇಂದು ಬಂದಿದ್ದಾನೆ.

ಶಿವಣ್ಣ ಕೈಕಾಲು ತೊಳೆದುಕೊಂಡು ಬಂದು ತಂದೆಯ ಬದಿಗೆ ಕುಳಿತು ಕೈಮುಟ್ಟಿ ನೋಡಿದ.

"ಈಗಿನ್ನೂ ಜ್ವರ ಇಳಿದಿದೆ."

—ಶಿವಣ್ಣನ ತಮ್ಮ ಹೇಳಿದ.

"ಪುಟ್ಟಪ್ಪನವರು ಕೊಡಲಿಲ್ಲಾಂತ ಕಾಣುತ್ತದೆ... ಹ್ಣು!" ಬಸಪ್ಪ ಮೆಲು ಧ್ವನಿಯಲ್ಲಿ ಹೇಳಿ ಮುಲುಕಿದ; ತಂದೆಯ ಊಹೆ ನಿಜವಿತ್ತು. ನಿಜವಾಗದೆ ಏನು! ತಾನು ಬರಿಯ ಕೈಯಲ್ಲಿ ಬಂದಿರುವುದರಿಂದ ಡಾಕ್ಟರರು ಇಲ್ಲದ್ದರಿಂದ ಯಾರಾದರೂ ಊಹಿಸಬಹುದಿತ್ತು. ಶಿವಣ್ಣ ಕ್ಷಣಹೊತ್ತು ತನ್ನ ಯೋಚನೆಯಲ್ಲಿ ಮುಳುಗಿದ್ದನು. ಸ್ವಲ್ಪ ಹೊತ್ತಿನ ಅನಂತರ ತನ್ನ ಆಳವಾದ ಯೋಚನೆಯ ಸುಳಿವಿನಿಂದ ಚೇತರಿಸಿಕೊಳ್ಳುತ್ತಾ,

"ಚಂದ್ರಶೇಖರಯ್ಯನವರು ಯಾವಾಗ ಬಂದಿರಿ?" ಎಂದನು.

"ಮಧ್ಯಾಹ್ನ ಬಂದೆ. ಯಾರೋ ಬಸಪ್ಪನವರಿಗೆ ಕಾಯಿಲೆ ಅಂತ ಸಾಯಂಕಾಲ ಹೇಳಿದರು. ಹಾಗೇ ನೋಡಿಕೊಂಡು ಹೋಗೋಣಾಂತ ಬಂದದ್ದಾಯಿತು."

"ಮಗಾ! ದೇವರು ನಮ್ಮ ಮೇಲೆ ಕಣ್ಣು ತೆರೆಯೋಲ್ಲ. ಇಂತಹ ಕಷ್ಟ ಕಾಲದಲ್ಲೂ ಪುಟ್ಟಪ್ಪನವರು ಸಹಾಯ ಮಾಡಲಿಲ್ಲ ಯಾರಿಗೆ ಅಂದರೇನು ಬರುತ್ತೆ...ನಾವು ಪಡೆದು ಬಂದದ್ದನ್ನು ಅನುಭವಿಸಬೇಕು. ಆ ತ್ಹಾಡೋಲೆಗೆ ಹದಿನೈದು ಕೊಡುತ್ತೇನೆ ಅಂದಿದ್ದರು ಆ ಬಾರಿ ಬಂದಾಗ—ಒಂದೈದು ಹೆಚ್ಚುಕೊಟ್ಟು ಪುಣ್ಯ ಕಟ್ಟಿಕೊಂಡರೆ......." ಎಂದು ಮುಂದುವರಿಸುವ ಮಾತನ್ನು ಚಂದ್ರಶೇಖರಯ್ಯ ತಡೆದು ಹೇಳಿದ,

"ಬಸವಣ್ಣ! ಸಾಹಿತ್ಯಕ್ಕೆ ಬೆಲೆಕಟ್ಟಲು ನಾನು ನೀನು ಯಾರು?! ಹಿಂದಿನ ಕವಿಶ್ರೇಷ್ಠರು ತಮ್ಮ ಚಿರಂತನ ಧ್ಯಾನ, ಸಾಧನೆಯಿಂದ ಸೃಷ್ಟಿಸಿದ ಸಾಹಿತ್ಯವನ್ನು ಎಲ್ಲರೂಪಾಲುಗಾರರಾಗಿ ಉಣ್ಣುವುದಕ್ಕೆ ನೀನೀಗ ಕೊಡು ತ್ತಿದ್ದೀಯೆ. ನಾನೀಗ ಕೊಡುತ್ತಿರುವುದು ನಿಮಿತ್ತಮಾತ್ರದಪುಡಿಗಾಸು. ದೇವರು ಇಂತಹ ಸಂದಿಗ್ಧ ಸಮಯವೊಡ್ಡಿ, ನಿನಗೆ ಪ್ರೇರೇಪಿಸಿ ಕೊಡ ಹಚ್ಚಿದ್ದಾನೆ. ಇದರಿಂದ ನಿನ್ನ ಸಂಸಾರಕ್ಕೂ ನಿನಗೂ ಖಂಡಿತ ಶ್ರೇಯಸ್ಸು." ಮಾತುಗಳು ನೇರವಾಗಿ ಹೃದಯಾಂತರಾಳದಿಂದ ತರಂಗವಾಗಿ ಬರುತ್ತಿದ್ದುವು. ವಾಣಿ ಘಂಟೆಯಂತೆ ಸ್ಪಷ್ಟವಾಗಿತ್ತು.

ಬಸಪ್ಪ ಚಂದ್ರಶೇಖರಯ್ಯನ ಯಥಾರ್ಥ ಮಾತಿಗೆ ತಲೆದೂಗಿ, "ಏನೊ! ನನಗಂತೂ ನಮ್ಮನೆ ಭಾಗ್ಯದಲಕ್ಷ್ಮಿದೇವಿ ಹೋದ ಹಾಗೆ ಭಾಸವಾಗುತ್ತದೆ. ಕಡೆಗೊಂದುಬಾರಿ ಪೂಜೆ ಮಾಡಿ ಕಾಯಿ ಒಡೆದು ಕಳಿಸಿಕೊಡು ಶಿವು" ಎಂದು ಎದ್ದು ಕುಳಿತುಕೊಂಡ.

ಶಿವಣ್ಣ ಪೂಜೆ ಮಾಡಿ ಪ್ರಸಾದ ವಿನಿಯೋಗಮಾಡಿದ. ಚಂದ್ರ ಶೇಖರಯ್ಯ ಕೊನೆಗೊಮ್ಮೆ ಮನೆಯವರಿಗೆಲ್ಲಾ ವಂದಿಸಿ ನಿಧಾನವಾಗಿ ಹೊರಟ. ಮುಗ್ಧಹೃದಯಿ ಬಸಪ್ಪನ ಕಣ್ಣಿನಂಚಿನಿಂದ ಅಶ್ರು ತೊಟ್ಟಿಕ್ಕಿತು. ಶಿವಣ್ಣ ಶೂನ್ಯ ಬಡಿದವರಂತೆ ನಿಂತುಕೊಂಡಿದ್ದ. ಮನಸ್ಸು ಮಾತ್ರ ಇಪ್ಪತ್ತು ರೂಪಾಯಿಗಳಲ್ಲಿ ಏನೆಲ್ಲಮಾಡಬಹುದೆಂದು ಕಲ್ಪನೆಯ ಹರ್ಮ್ಯ ಕಟ್ಟುತ್ತಿತ್ತು!

* * * *

ಚಂದ್ರಶೇಖರಯ್ಯ ಇಂತೀಪರಿಯ ಸಂಶೋಧನೆಗಳಿಗೆ ತೊಡಗಿ ಕೆಲವು ವರ್ಷಗಳು ಸಂದವು. ಇದೀಗ ತಾಡ ಓಲೆಗಳು ಸಾಕಷ್ಟು ಸಂಗ್ರಹ ವಾಗಿದ್ದುದರಿಂದ ಅವುಗಳ ಪರಿಶೀಲನೆ ಹಾಗೂ ಸಂಪಾದನೆಗಾಗಿ ಹೆಚ್ಚು ವೇಳೆಯನ್ನು ವ್ಯಯಮಾಡುತ್ತಿದ್ದ. ಇದಕ್ಕಾಗಿ ತಾನು ತನ್ನ ವ್ಯಾಸಂಗ ಕೋಣೆಯಲ್ಲಿರುವಾಗ ಯಾರನ್ನೂ ಒಳಗಡೆ ಬಿಡಬಾರದೆಂದು ಪತ್ನಿ ಸಿದ್ಧಮ್ಮನಿಗೆ ಅಣತಿಮಾಡಿದ್ದ.

ಇತ್ತೀಚಿಗೆ ತಾಡ ಓಲೆಗಳ ಮೇಲಿನ ಮೋಹ ಕೊಂಚ ಕಡಮೆ ಯಾಗಿತ್ತೆಂದು ಹೇಳಬಹುದು. ನಿತ್ಯವೂ ಒಂದೇ ತೆರನ ಅಡುಗೆ ಹೇಗೆ ರುಚಿಸುವುದಿಲ್ಲವೋ ಹಾಗೆ! ಅಂತೆಯೇ ಶಿಲಾಶಾಸನಗಳ ಸಂಶೋಧನೆಯತ

ಮನಸ್ಸು ಹಾಕಿದ್ದ. ಹಾಗೆಂದು ತಾಡ ಓಲೆಗಳ ಸಂಗ್ರಹ ಅಥವಾ ಅವುಗಳ ನಿರತ ವ್ಯಾಸಂಗವನ್ನು ನಿಲ್ಲಿಸಿದ್ದ ಎಂದರ್ಥವಲ್ಲ.

ಬೇರೆ ಬೇರೆ ಕ್ಷೇತ್ರದಲ್ಲಿ ಏನೇನು ಆಹಾರ ನಿಮಗೆ ದೊರೆಯಬಹುದೆಂಬ ಆಕಾಂಕ್ಷೆ ಶಿಲಾಶಾಸನಗಳ ಶೋಧನೆಗೆ ಎಡೆಮಾಡಿ ಕೊಟ್ಟಿತ್ತು. ಅದಕ್ಕಾಗಿ ಪ್ರಸಿದ್ಧ ಕ್ಷೇತ್ರಗಳು, ಗುಡ್ಡಗಾಡು, ವಾಸ್ತುಶಿಲ್ಪಗಳ ವೀಕ್ಷಣೆಗೆಂದು ಒಮ್ಮೆ ಹೋದವನು ನಿರಾಶನಾಗಿ ಊರಿಗೆ ಹಿಂತಿರುಗಿ ಬಂದಿದ್ದ. ಏಕೆಂದರೆ ಶಾಸನಗಳಲ್ಲಿನ ಹಳೆಗನ್ನಡವನ್ನಾಗಲಿ, ಬ್ರಾಹ್ಮೀಲಿಪಿಯನ್ನಾಗಲಿ ಓದುವ ಕಲೆ ಅಭ್ಯಾಸವಿಲ್ಲದ ಆತನಿಗೆ ದೊರೆಯುವುದಾದರೂ ಹೇಗೆ? ಸರಿ, ಬ್ರಾಹ್ಮೀಲಿಪಿಯನ್ನು ಕಲಿಯಲು ಹೈದರಾಬಾದಿನ ಪ್ರಾಜ್ಞರೊಬ್ಬರ ಬಳಿ ಇದ್ದು ಕಲಿತದ್ದಲ್ಲದೆ ಶಿಲಾಶಾಸನಗಳ ಬಳಿ ಅವರನ್ನು ಕರೆದುಕೊಂಡೊಯ್ದು, ಅವರ ಮುಂದೆಯೇ ಓದಿ ತನಗೆ ಅಭ್ಯಾಸವಾಗಿದೆಯೋ ಇಲ್ಲವೋ ಎಂದು ಖಚಿತಮಾಡಿಕೊಂಡ.

ಊರಿಗೆ ಹಿಂದಿರುಗಿದ ಅನಂತರ ತಾನೆ ಸ್ವಯಂ ಕೆಲವು ಹಳ್ಳಿಗಳಿಗೆ ಹೋಗುವುದು ಅವುಗಳ ಪರಿಶೀಲನೆ ಮಾಡುವುದು ಇತ್ಯಾದಿ ಕಾರ್ಯಕ್ರಮಗಳನ್ನು ಯಥಾವತ್ತಾಗಿ ಇಟ್ಟುಕೊಂಡಿದ್ದ. ತನಗೆ ಗುರುತು ಪರಿಚಯದವರು ಯಾರೇ ಬರಲಿ, ಚಂದ್ರಶೇಖರಯ್ಯ ಪ್ರಶ್ನೆ ಹಾಕುತ್ತಿದ್ದ.

"ನಿಮ್ಮೂರಿನಲ್ಲಿ ತಾಡೋಲೆಗಳಿವೆಯೆ ?"

"ಹಾಗಂದರೆ ಏನು ಸ್ವಾಮಿ ?" ಅವರು ಕೇಳಬೇಕು. ಪ್ರಶ್ನೆಗೆ ಪ್ರಶ್ನೆ.

"ದೇವರ ಜಗುಲಿಯ ಮೇಲೆ ತಾಳೆಗರಿ ಇಟ್ಟುಕೊಂಡು ಪೂಜೆ ಮಾಡುತ್ತಾರಲ್ಲಾ."

"ದೇವಿ ಪುರಾಣ, ರೇಣುಕ ಸಾಂಗತ್ಯ !"

"ಹೌದು ! ಆ ಪುರಾಣಗಳನ್ನು ಏನು ತಾಳೆಗರಿಯಲ್ಲಿ ಬರೆದಿದ್ದಾರಲ್ಲಾ ಅವಕ್ಕೆ ತಾಡ ಓಲೆ ಅಂತಾರೆ. ತಾಡ ಪತ್ರ ಅಂತಾರೆ."

"ನಮ್ಮೂರೊಳಗೆ ಇದ್ದ ಹಾಗಿಲ್ಲ ಸ್ವಾಮಿಯವರೆ."

"ಶಿಲಾಶಾಸನ ?"

"ಲಿಂಗಮುದ್ರೆಕಲ್ಲಾ !......"

"ಲಿಂಗಮುದ್ರೆಕಲ್ಲು ಇರುತ್ತದಲ್ಲಾ ಹಾಗೆ! ದೇವರ ಗುಡಿಯ ಮುಂದೆ ಕಲ್ಲುಗಳನ್ನು ನಿಲ್ಲಿಸಿರುವುದಿಲ್ಲವೆ. ಅವುಗಳ ಮೇಲೆ ಏನೇನೋ ಬರೆದಿರುತ್ತಾರಲ್ಲಾ......"

ಹೀಗೆ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಹಾಕಿಅವರ ಕುತೂಹಲ ಕೆರಳಿಸಿ ಶೋಧನೆಮಾಡುತ್ತಿದ್ದ. ಅವರು ಉಂಟು ಎಂದು ಹೇಳಿದಾಗ ಚಂದ್ರಶೇಖರಯ್ಯನವರ ಸವಾರಿ ದಯಮಾಡಿಸುತ್ತಿತ್ತು.

ಹಾಗೆ ಹೋಗಿ ಶೋಧನೆಮಾಡಿದ ಶಿಲಾಶಾಸನಗಳಲ್ಲಿ ತಾನು ಕಂಡದ್ದಾದರೂ ಏನು? ಬುದ್ಧ, ಜೈನ ಮತಗಳ ತತ್ವಗಳು, ಹಿಂದಿನ ರಾಜಾಧಿರಾಜರು ತಾವು ಸಾಧಿಸಿದ್ದ ದೇಶದ ಎಲ್ಲೆ, ದೇಶದ ರಾಜ್ಯಾಡಳಿತ ವಿವರಗಳು, ಆಗಿನ ಜನರ ರೀತಿ ನೀತಿಗಳು ಕೆತ್ತಿರುತ್ತಿದ್ದವು. ಇನ್ನು ಕೆಲವು ಶಾಸನಗಳಲ್ಲಿ ಸಮರದಲ್ಲಿ ಮಡಿದು ವೀರ ಸ್ವರ್ಗಪಡೆದವರ, ದೇವಾಲಯಗಳನ್ನು ನಿರ್ಮಿಸಿದವರ, ಸಾಹಸ ಕಾರ್ಯಗಳನ್ನು ಮಾಡಿದವರ ಕಥೆಗಳನ್ನು ವಿವರಿಸಿದ್ದಿತು.

ಇಂತಹ ವಿಚಾರಾತ್ಮಕ ಸಂಶೋಧನೆಗಳೊಂದಿಗೆ ಸಾಹಿತ್ಯಕ ವಿಷಯಗಳನ್ನು ಘಂಟೆಗಟ್ಟಳೆ ತನ್ನಲ್ಲೇ ಲೀನನಾಗಿ ಯೋಚಿಸುತ್ತಿದ್ದ. ಆ ಯೋಚನೆಗಳಾದರೋ ಕನ್ನಡನಾಡ ಹಿತಚಿಂತನೆಯ ಬಗೆಗೆ, ನುಡಿಯ ಪ್ರಗತಿಯ ಬಗೆಗೆ ಇರುತ್ತಿದ್ದುವು. ಒಂದು ದಿನ ಕನ್ನಡದ ಕೀರ್ತಿಶೇಷ ಪ್ರತಿಭಾವಂತ ಕವಿ 'ಹೃದ್ಯಮಪ್ಪ ಗದ್ಯದೋಳ್' ಹೇಳಿದ ಮುದ್ದಣನ ಜೀವನ ವೃತ್ತಾಂತವನ್ನು ಮೆಲುಕಾಡಿಸುತ್ತಾ ಕುಳಿತಿದ್ದ. ಕವಿಯ ದುರಂತ ಜೀವನ ಕಣ್ಣು ಕಟ್ಟಿದ್ದರಿಂದಲೋ ಏನೋ ಕಣ್ಣಾಲಿಗಳು ಅಶ್ರುವಿನಿಂದ ಆವೃತವಾಗಿದ್ದವು. ಒಮ್ಮೆಲೆ ಕದ ನೂಕಿಕೊಂಡು ಹೊಸಳ್ಳಿ ರೇಣುಕ ಪಾಟೀಲರು ಬಂದರು. ತನ್ನ ಹೆಂಡತಿ ತನ್ನ ಆಜ್ಞೆಯನ್ನು ಪಾಲಿಸಲಿಲ್ಲವಲ್ಲ ಎಂದು ವ್ಯಥೆಗೊಂಡರೂ ರೇಣುಕ ಪಾಟೀಲರ ಮುಗುಳ್ನಗೆಯನ್ನು ನೋಡಿ ಚಂದ್ರಶೇಖರಯ್ಯ ಮರೆತನು. ದಿವಾನಖಾನೆಯಲ್ಲಿ ಕೂಡಿಸಿ ತನಗೆ ತಿಳಿಸಿದ್ದರೆ ಅಲ್ಲಿಗೆ ಹೋಗಿ ಮಾತಾಡುತ್ತಿದ್ದೆ ಎಂದು ನೆನೆಯುವುದನ್ನು ಮರೆಯಲಿಲ್ಲ ತನ್ನ ಗಾಢವಾದ ಯೋಚನೆಯಿಂದ ಎಚ್ಚೆತ್ತು ಪ್ರಶ್ನಿಸಿದ.

"ಆರೋಗ್ಯವೆ ರೇಣುಕ ಪಾಟಿಲರೆ?"

"ಇಷ್ಟರ ಮಟ್ಟಿಗೆ"

"ಬಡವರ ಮನೆಗೆ ಭಾಗ್ಯದೇವಿ ಬಂದಂತಾಯ್ತು!"

"ನೀವು ಸರಸ್ವತಿ ಪುತ್ರರು ಸ್ವಾಮಿ. ಸರಸ್ವತಿ ಇದ್ದಲ್ಲಿ ಲಕ್ಷ್ಮಿಯನ್ನು ಕಂಡುಗೊತ್ತೆ?!" ಎಂದು ಹಾಸ್ಯವಾಗಿ ಹೇಳಿದರು ಪಾಟೀಲರು.

ಉಭಯತರೂ ಪ್ರಾಸ್ತವಿಕ ಮಾತು ನಡೆಸಿದ್ದಂತೆ ಪತ್ನಿ ಸಿದ್ದಮ್ಮ ಸಾಯಂಕಾಲದ ಕಾಫಿಯನ್ನು ಎರಡು ಬೆಳ್ಳಿಯ ಲೋಟದಲ್ಲಿ ತಂದಿಟ್ಟು ಹೋದಳು.

ರೇಣುಕ ಪಾಟೀಲರು ಕೈಕಾಲು ತೊಳೆದುಕೊಂಡು ಬಂದು ಕಾಫಿ ಸೇವಿಸಿದರು. ಚಂದ್ರಶೇಖರಯ್ಯ ಇಷ್ಟಾದರೂ ಕಾಫಿಯನ್ನು ಸೇವಿಸಿರಲಿಲ್ಲ. ಒಂದೊಂದೆ ಗುಟುಕನ್ನು ನಿಧಾನವಾಗಿ ಎಳೆದುಕೊಳ್ಳುತ್ತಾ ಹೇಳಿದ:

"ಮತ್ತೇನು ವಿಶೇಷ ಪಾಟೀಲರೆ?"

"ನಮ್ಮೂರಿಗೆ ಒಂದು ಮಾಧ್ಯಮಿಕ ಶಾಲೆ ಬೇಕೆಂದು ಸಂಬಂಧ ಪಟ್ಟವರಲ್ಲಿ ತಿಳಿಸಿದ್ದೆವು. ಅವರು ಊರಿನವರು ಪಾಲು ಹಾಕಿದರೆ ಸಾಧ್ಯ ಎಂದಿದ್ದರು. ಈಗ ಊರಿನವರೆಲ್ಲರಿಂದ ಹಣ ಸಂಗ್ರಹವಾಗಿದೆ. ಇದ್ದ ವಿಚಾರವನ್ನು ಇಂಗ್ಲೀಷಿನಲ್ಲಿ ಬರೆಸಿ ಹಾಕಿದರೆ ಉತ್ತಮ ಎಂತ ಬಂದೆ."

"ಕನ್ನಡದಲ್ಲಿ ಆಗದೆ?"

"ಇಂಗ್ಲೀಷಿಗೆ ಸ್ವಾಮಿ ಬೆಲೆ ಕೊಡೋದು."

"ಆ ಕಾಲ ಹೋಯಿತು. ಪಾಟೀಲರೆ. ಜನ ಜಾಗೃತರಾಗಿದ್ದಾರೆ. ಈಗಂತೂ ನಮ್ಮ ಚೆಲುವ ಕನ್ನಡನಾಡು ಉದಯವಾಗಿದೆ. ಇನ್ನು ಕನ್ನಡ ನಾಗಾಲೋಟದಿಂದ ಪಸರಿಸುತ್ತೆ" ಎಂದು ಅವರ ಮಾತನ್ನು ಮೀರದೆ ಆಂಗ್ಲಭಾಷೆಯಲ್ಲಿ ಬರೆದುಕೊಟ್ಟ.

ರೇಣುಕ ಪಾಟೀಲರು ಬೀಡಿ ಹತ್ತಿಸುತ್ತಾ, "ತುಂಬಾ ಉಪಕಾರ ಮಾಡಿದಿರಿ. ನಾನು ಬರಲು ಅಪ್ಪಣೆ ಕೊಡಿ" ಎಂದರು.

"ಇದಕ್ಕೆಲ್ಲಾ ಉಪಕಾರ ಎಂಬ ದೊಡ್ಡ ಶಬ್ದವನ್ನು ಯಾಕೆ ತರುತ್ತೀರಿ. ಅದಿರಲಿ, ನಿಮ್ಮೂರಿನಲ್ಲಿ ತಾಡೋಲೆಗಳೇನಾದರೂ ಇವೆಯೋ?"

"ಇಲ್ಲಾ ದೇವರು, ಅಲ್ಲಿ ಇಲ್ಲಿ ಕೇಳಿ ನೋಡಿದೆ ನೀವು ಹಿಂದೊಮ್ಮೆ ಹೇಳಿದ್ದಿರಲ್ಲ.........ಶಿಲಾಶಾಸನ ಅಂತ......ಅದೇನೋ ಕೆರೆ ಏರಿಯ ಮೇಲೆ ಗುಡಿಯ ಹತ್ತಿರ ಇದೆ. ಒಮ್ಮೆ ಬನ್ನಿ ಹೀಗೆ ಅಡ್ಡಾಡಿಕೊಂಡು".

"ಎರಡು ಮೂರು ಶಾಸನಗಳಿವೆಯಾ?"

"ಇಲ್ಲ. ಒಂದೇ ಕಲ್ಲು ಉದ್ದನೆಯದು......ಅದರ ಮೇಲೆ ಏನೂ ಬರೆದ ಹಾಗಿಲ್ಲ."

"ಅಂದರೆ, ಬರೆದದ್ದು ಅಳಿಸಿಹೋಗಿದೆ ಅಂತ ಅರ್ಥವೇ ?"

"ಅದೇನೋ! ನನಗೇನು ಗೊತ್ತು ಹಳ್ಳೀಮುಕ್ಕನಿಗೆ. ಒಂದು ದಿನ ಅಗತ್ಯ ಬರಬೇಕು."

ಸೋಮವಾರ ಪ್ರಾತಃಕಾಲ ಸ್ನಾನ ತೀರಿಸಿಕೊಂಡು ಕಾಲು ನಡಗೆಯಲ್ಲಿ ಹೊಸಳ್ಳಿಗೆ ಹೋದ. ರೇಣುಕ ಪಾಟೀಲರು ತಮ್ಮೆಲ್ಲ ಕೆಲಸಗಳನ್ನು ಬದಿಗೊತ್ತಿ ಕಾದು ಕುಳಿತಿದ್ದರು. ಪುನಃ ಫಲಹಾರವಾಯಿತು. ಮಾಧ್ಯಮಿಕ ಶಾಲೆ ಮಂಜೂರಾಗಿದೆಯಂತೆ! ನಂಬಲರ್ಹವಾದ ಕಡೆಯಿಂದ ತನಗೆ ತಿಳಿದು ಬಂದಿದೆಯಂತೆ. ಹೀಗೆ ಪಾಟೀಲರು ಹೇಳಿದರು.

ಸಾಯಂಕಾಲ ಕಾಫಿ ತೀರಿಸಿಕೊಂಡು ಶಿಲಾಶಾಸನದ ಪರೀಕ್ಷೆಗೆ ಪಾಟೀಲರೂ ಚಂದ್ರಶೇಖರಯ್ಯನೂ ಹೊರಟರು. ಕೆರೆ ಏರಿಯ ಮೇಲೆ ಈಶ್ವರನ ದೇವಸ್ಥಾನ. ದೇವಸ್ಥಾನದ ಎಡ ಪಾರ್ಶ್ವದಲ್ಲಿ ಒಂದು ಬಿಲ್ಪಪತ್ರೆಯ ಮರದ ಕೆಳಗೆ ಶಿಲಾಶಾಸನವಿತ್ತು. ಶಿಲಾಶಾಸನವನ್ನು ಕುತೂಹಲದಿಂದ ನೋಡಿದರು.

ಚಂದ್ರಶೇಖರಯ್ಯ ಪರೀಕ್ಷೆ ಮಾಡಿದ ಮೇಲೆ ಮೂಕನಂತೆ ಕೆರೆಯನ್ನು ದಿಟ್ಟಿಸುತ್ತಾ ಯೋಚಿಸಿದ. ಎದುರುಗಡೆ ವಿಶಾಲವಾದ ಕೆರೆ. ಕೆರೆಯ ಮಧ್ಯೆಮಂಟಪ. ಒಂದು ದಂಡೆಯಲ್ಲಿ ಮಾವಿನ ತೋಪು. ಇನ್ನೊಂದು ದಂಡೆಯಲ್ಲಿ ಹಚ್ಚ ಹಸಿರು. ಕೆರೆಯಲ್ಲಿದನಗಳು ಮೈತೊಳೆಯುತ್ತಿದ್ದುದು ಕಾಣಬರುತ್ತಿತ್ತು. ತಿಳಿಗೊಳನ ಬಳಸಿ ನಳನಳಿಸಿ ಬೆಳೆದೆಳೆ ಮಾವು ತೋಪಿನ ನೆರಳಿನಲ್ಲಿ ಯಾರೋ ಕೊಳಲನ್ನು ಸುಶ್ರಾವ್ಯವಾಗಿ ನುಡಿಸುತ್ತಿದ್ದರು. ರೇಣುಕಪಾಟೀಲರು ಈ ಪ್ರಕೃತಿ ದೇವಿಯ ನಿತ್ಯನೂತನ ಸೌಂದರ್ಯದಲ್ಲಿ ಭಾವಪರ ವಶರಾಗಿದ್ದರು.

"ಪಾಟೀಲರೆ! ಈ ಕಲ್ಲನ್ನು ಎತ್ತಬೇಕಲ್ಲ ಈ ಕಲ್ಲನ್ನು ಅಗೆಯಲು ಊರಿನವರ ಅಡೆತಡೆ ಉಂಟೆ?" ಎಂದು ಚಂದ್ರಶೇಖರಯ್ಯ ಕೇಳಿದ.

"ಛೆ! ಹಾಗೇನೂ ಇಲ್ಲ."

ಊರಿಗೆ ದೇವರಂತಿದ್ದ ರೇಣುಕ ಪಾಟೀಲರ ಮಾತನ್ನು ಯಾರೂ ತೆಗೆದುಹಾಕುವಂತಿಲ್ಲ. ಆಳುಗಳ ಸಹಾಯದಿಂದ ಕಲ್ಲನ್ನು ಅಗೆಯಿಸಿದರು. ಕಲ್ಲು ಘಂಟೆ ಗಟ್ಟಳೆ ಸಮಯ ನುಂಗಿತು.

ಆ ಕಲ್ಲು ಹೊರಬಂದ ಮೇಲೆ ಕೆಳಗಡೆ ಏನಾದರೂ ಇದೆಯೇ ಎಂದು ಮಣ್ಣು ಸವರಿದಾಗ ಇನ್ನೊಂದು ಶಾಸನ ಅಡ್ಡವಾಗಿರಿಸಲ್ಪಟ್ಟಿತ್ತು. ಮಣ್ಣನ್ನೆಲ್ಲಾ ತೆಗೆದು ಮೇಲೆತ್ತಿ ತೊಳೆದು ಓದಲು ವಿಷಯ ತಿಳಿಯಿತು.

ಮುಂದೆ ಹರಿಯುವ ಕೆರೆ ಯಾವಾಗ ಕಟ್ಟಿಸಲ್ಪಟ್ಟಿತೆಂಬೂ ಆಗ ರಾಜ್ಯಭಾರವನ್ನು ಯಾರು ಮಾಡುತ್ತಿದ್ದರೆಂದೂ ಬರೆದಿದ್ದುದಲ್ಲದೆ ಕೆರೆಯನ್ನು ಕಟ್ಟಿಸಲು ಆ ದಾನಿಯ ಕಾರಣವನ್ನು ತಿಳಿಸಿತ್ತು. ಆವಾಗ ದೇಶದಲ್ಲಿ ನಡೆದಿದ್ದ ವಿಶೇಷ ಸಂಗತಿಗಳ ವರ್ಣನೆಯೂ ಅಲ್ಲಿತ್ತು.

“ಬರಿದೆ ಮೇಲಿನ ಕಲ್ಲನ್ನೆತ್ತಿ ನಾವಿಂದು ಕತ್ತೆಗಳಾದೆವು ಎಂದು ನೆನೆದೆ, ಆದರೆ ಉಪಯೋಗವಾಯಿತು” ಎಂದ ರೇಣುಕ ಪಾಟೀಲರ ಮಾತಿಗೆ ಎಲ್ಲರೂ ಗಹಗಹಿಸಿ ನಕ್ಕರು.

ಕೆಳಗಡೆ ಶಾಸನವೊಂದನ್ನು ಅಡ್ಡಲಾಗಿಸಿ ಮೇಲೆ ಇನ್ನೊಂದು ಕಲ್ಲನ್ನು ಏಕಾಗಿ ನಿಲ್ಲಿಸಿರಬಹುದೆಂಬ ಸಂಗತಿ ಚಂದ್ರಶೇಖರಯ್ಯ ಎಷ್ಟು ಯೋಚಿಸಿದರೂ ತಿಳಿಯಲಿಲ್ಲ. ಕಾಲದೇವನ ಕೈಯಲ್ಲಿ ಸಿಕ್ಕಿ ಏನೇನೋ ವಿಚಿತ್ರ ಬದಲಾವಣೆಗಳಾಗಿವೆ ಎಂಬುದು ಮಾತ್ರ ಹೊಳೆಯಿತು.

ಅವಳಿಜವಳಿ

ಕಾಳರಾತ್ರಿ ಎಲ್ಲೆಲ್ಲೂ ತನ್ನ ನಗ್ನನೃತ್ಯವನ್ನು ಪ್ರಾರಂಭಿಸಿತ್ತು. ದಿನವೆಲ್ಲಾ ದುಡಿದು ಬಂದವರು ಆಗಲೇ ಪೂರ್ಣ ನಿದ್ದೆಹೋಗಿದ್ದರು. ನಗರದಲ್ಲಿ ಕ್ಷಣಕ್ಷಣಕ್ಕೂ ಮೌನ ಅಡರುತ್ತಿತ್ತು. ಆನೆಪೇಟೆಯಲ್ಲಿ ಮಾತ್ರ ಒಂದೆರಡು ಗುಬ್ಬಿ ಗುಡಿಸಿಲಿನಂತಹ ಮನೆಗಳು ಮುಚ್ಚಿದ್ದುವು. ಶಿರಸಪ್ಪನೊಂದಿಗೆ ಹಂಪಮ್ಮ ಆ ಕೇರಿಗೆ ಕಾಲಿಡುವ ಹೊತ್ತಿಗೆ ಸುಮಾರು ಹತ್ತು ಗಂಟೆಯಾಗಿತ್ತೆನ್ನಬಹುದು. ರಸ್ತೆಯನ್ನು ಕೊಂಚ ಅತಿಕ್ರಮಿಸಿದ ಮೇಲೆ ಇಬ್ಬರು ಗಂಡಸರು ತಮ್ಮನ್ನೇ ನುಂಗುವಂತೆ ನೋಡುತ್ತಾ ಮುಂದುವರಿದರು. ಇನ್ನೂ ಕೊಂಚ ಗಜ ಅಡಿ ಇಟ್ಟಾಗ ಯಾರೋ ಒಬ್ಬರು ಬಲಪಾರ್ಶ್ವದ ಮನೆಯ ಬಾಗಿಲನ್ನು ತೆರೆದುಬಂದು ತಮ್ಮನ್ನು ಕುಹಕ ದೃಷ್ಟಿಯಿಂದ ನೋಡಿ ನಕ್ಕು, ಕ್ಯಾಕರಿಸಿ ಉಗುಳಿ ಹೊರಟರು. ಹಂಪಮ್ಮ ಯಾಂತ್ರಿಕವಾಗಿ ನೋಡುತ್ತಾ ನಿಧಾನವಾಗಿ ಹೆಜ್ಜೆಯಿಡುತ್ತಿದ್ದಳು. ಶಿರಸಪ್ಪ ಸಂತೈಸುವ ಧ್ವನಿಯಲ್ಲಿ ಹೇಳಿದ:

"ಬಂದೇ ಬಿಟ್ಟಿತು ಇನ್ನೇನು!"

ಹಂಪಮ್ಮ ಸೂಕ್ಷ್ಮದೃಷ್ಟಿಯಿಂದ ನಿರೀಕ್ಷಿಸಿದಾಗ ಎರಡೂ ಪಕ್ಕದ ಮನೆಗಳ ಮುಂಭಾಗದಲ್ಲಿ ಸಿಂಗರಿಸಿದ ಹೆಂಗಸರು ನಿಂತುಕೊಂತು ಯಾರನ್ನೋ ಕಾಯುತ್ತಿದ್ದಾರೆನ್ನಿಸಿತು! ಇದೀಗ ಹಂಪಮ್ಮ ತಾನು ಯಾವ ಸ್ಥಳದಲ್ಲಿ ಕಾಲಿಟ್ಟಿದ್ದೇನೆನ್ನಿಸಿತು. ಇದು ಎಂಥ ನರಕವೇ ಇರಲಿ, ಕ್ರೂರ ಗಂಡನ ಕಾಟ ಮಾತ್ರ ಇನ್ನಿಲ್ಲ ಎಂದು ತನ್ನನ್ನೇ ಮನದಲ್ಲಿ ಸಂತೈಸಿಕೊಂಡಳು. ಒಂದು ಚಿಕ್ಕ ಮನೆಯ ಬಳಿಗೆ ಬಂದು.

"ಅಮ್ಮಾ ಚೌಡಮ್ಮಾ ಅಮ್ಮಾs.........," ಎಂದ ಶಿರಸಪ್ಪ.

"ಯಾರೋ ಅವನು?" ಒಳಗಿನಿಂದ ಧ್ವನಿ ಬಂದಿತು.

"ನಾನು ಶಿರಸಾ ಕಣಮ್ಮಾ."

"ಅಯ್ಯೋ ಇವನ ಮನೆ ಹಾಳಾಗ......" ಎಂದು ಇನ್ನೂ ಏನನ್ನೋ ಒಳಗಿನಿಂದಲೇ ಗೊಣಗುಟ್ಟಿಕೊಳ್ಳುತ್ತಾ ಮುದುಕಿ ಬಂದು ಕದ ತೆಗೆದಳು.

"ಇಷ್ಟರವರೆಗೆ ಏನು ಮಾಡುತ್ತಿದ್ದೆ.

"ರಾಜ ಬರುತ್ತಾನೆಂದು ಬಾಗಿಲು ತೆಗೆದುಕೊಂಡು ಕಾಯುತ್ತಾ ಇರಲೆ? ಇರಲಿ, ಯಾವಾಗ ಬಂದೆ? ಬಾ ತಾಯಿ ಒಳಗಡೆ,"

ಎಂದು ಹಂಪಮ್ಮನನ್ನು ಉದ್ದೇಶಿಸಿ ಹೇಳಿದಳು. ಹಂಪಮ್ಮ ಏನೂ ಮಾತನಾಡಲಿಚ್ಛಿಸದೆ ಒಳಗೆ ಹೋದಳು. ಆ ಚಿಕ್ಕ ಮನೆಯಲ್ಲಿ ಕೋಣೆಗಳಿರುವುದೊಂದಿರಲಿ, ಇದ್ದಷ್ಟು ಸ್ಥಳ ವಿಶಾಲವಾಗಿಯೂ ಕೂಡ ಇರಲಿಲ್ಲ. ಒಂದು ಅಚ್ಚುಕಟ್ಟಾದ ಮನೆಯ ಬಚ್ಚಲು ಮನೆಯಂತೆ ಚೌಡಮ್ಮನ ಮನೆಯಿತ್ತು. ಗೋಡೆಗಳ ಮೇಲೆ ಚಲನಚಿತ್ರದ ಭಿತ್ತಿಪತ್ರಿಕೆಗಳನ್ನು ಅಂಟಿಸಲಾಗಿತ್ತು. ಒಂದೆಡೆಗೆ ಮಂದವಾದ ಲಾಂದ್ರ ಇಳಿಯಬಿಡಲಾಗಿತ್ತ. ಅವಳ ಮನೆಯ ಸಾಮಾನುಗಳಾದರೋ ಹೆಚ್ಚು ಇರಲಿಲ್ಲ. ಒಂದು ಮಣ್ಣಿನ ಮಡಿಕೆ, ತಾಟು, ಅಡಿಗೆ ಮಾಡಲು ಗಡಿಗೆಗಳು ಮತ್ತು ಹರಕು ಚಾಪೆ. ಒಂದು ಮೂಲೆಗೆ ಬಟ್ಟೆಯ ಗಂಟನ್ನು ಕಟ್ಟಿ ತೂಗುಬಿಟ್ಟಿದ್ದಳು. ಹಾಸಿದ್ದ ಹರಕು ಚಾಪೆಯ ಮೇಲೆ ಹಂಪಮ್ಮ ಕುಳಿತುಕೊಂಡಳು.

"ಹಸಿವು ಬಹಳ. ಏನಾದರೂ ತಗೊಂಡು ಬಾ" ಎಂದೆನ್ನುತ್ತಾ ಶಿರಸಪ್ಪ ಒಂದು ರೂಪಾಯಿ ಕೊಟ್ಟ. ಚೌಡಮ್ಮ ಇಸಕೊಂಡು ಹೊರಗೆ ಹೋಗುತ್ತಲೂ, "ಹಂಪಿ! ಇವಳು ಬಹಳ ಒಳ್ಳೆಯವಳು. ಸರಿಯಾಗಿ ನಡೆದುಕೊಂಡರೆ ಜೀವಕ್ಕೆ ಜೀವ ಕೊಡುವವಳು." ಎಂದಳು.

......ಸರಿಯಾಗಿ ಯಾರು ನಡೆದುಕೊಳ್ಳಬೇಕು. ತಾನೋ, ಶಿರಸಪ್ಪನೋ ಯಾರಿಗೆ ಸೂಚಿಸಿ ಹೇಳಿದ ಮಾತು ಎಂದು ನೆನೆದು, "ನಿಮ್ಮ ಮನೆ ಇದೇನಾ! ಈ ಮುದುಕೀ ಮನೆಗೆ ನನ್ನ ಝೂಂಡಾ ಊರಿಸಿದಿರಿ" ಎಂದಳು ಕೊಂಚ ಏರಿದ ಧ್ವನಿಯಲ್ಲಿ. ಚೌಡಮ್ಮನ ಕಾಲ ಸಪ್ಪಳ ಕೇಳುತ್ತಲೂ ಮಾತಿಗೆ ವಿರಾಮ ಹಾಕಿದರು. ಚೌಡಮ್ಮ ಬಾಗಿಲು ಹಾಕಿ ತಾನು ತಂದಿದ್ದ ಸಾಮಾನುಗಳನ್ನು ಅವರ ಮುಂದೆ ಇಟ್ಟು, ಒಂದು ತಂಬಿಗೆ ನೀರು ತುಂಬಿ ಕೊಟ್ಟಳು. ಅವರು ಮಂಡಕ್ಕಿ, ಖಾರ, ಒಡೆ, ಹಿಟ್ಟು ಹಚ್ಚಿದ ಮೆಣಸಿನ ಕಾಯಿಯನ್ನು ಕಂಠಪೂರ್ತಿ ತಿಂದರು.

"ಶಿರಸಪ್ಪ, ತಾಯಿ ಯಾರೊಂತ ಗೊತ್ತಾಗಲಿಲ್ಲ."

"ಈಕೆ ಬೆಂಗೂರಿನವಳು. ಇನ್ನು ಮುಂದೆ ಇಲ್ಲೇ ಇರುವವಳು. ನಾಟಕದ ಮೇಲೆ ತುಂಬಾ ಇಷ್ಟ. ನಮ್ಮ ನಾಟಕದ ಕಂಪೆನಿಗೆ ಚೆಂದುಳ್ಳವಳು ಒಬ್ಬಳು ಬೇಕೆಂದಿರಲಿಲ್ವೆ. ಸಿಕ್ಕ ಹಾಗಾಯಿತು. ನಿಜ ಹೇಳ

ಬೇಕೆಂದರೆ ಸಂಸಾರದಲ್ಲಿ ತುಂಬಾ ನೊಂದವಳು. ಆಕೆಯ ಗಂಡನೋ, ಆತ ಮನುಷ್ಯನೆಂತ ಯಾರೂ ಹೇಳುವಂತಿಲ್ಲ. ಶುದ್ಧ ರಾಕ್ಷಸ. ಹಂಪಿ ಬೆಂಗೂರಿಂದ ಬಂದದ್ದನ್ನು ಜೈಲಿನಿಂದ ಓಡಿ ಬಂದದ್ದಕ್ಕೆ ಹೋಲಿಸಬಹುದು.

"ನನಗೆ ಗೊತ್ತಿಲ್ಲದ್ದೇ ಶಿರಸಾ. ಹೆಣ್ಣು ಆಗಿ ಹುಟ್ಟಬಾರದು ನೋಡು. ಕೊನೆಗೆ ಒಂದು ಬೀದಿ ನಾಯಿಯಾಗಿ ಹುಟ್ಟಿದರೂ ಸರಿ."

"ಸತ್ಯ ನುಡಿದೆ ಚೌಡಮ್ಮ."

"ತೌರು ಮನೆ ಯಾವುದು?" ಎಂಬ ಚೌಡವ್ವನ ಪ್ರಶ್ನೆಗೆ.

"ಗೊಳ್ಳ" ಎಂದಳು.

ಶಿರಸಪ್ಪ ಬೀಡಿ ಹಚ್ಚುತ್ತಾ ಹೇಳಿದ: "ಚೆನ್ನಾಗಿ ಹಾಡುತ್ತಾಳೆ."

"ಮತ್ತೆ ಕಂಠ ಇಲ್ಲದಿದ್ದರೆ ನಾಟಕ ಕಂಪೆನಿಯಲ್ಲಿ ಏನು ಮಾಡಬೇಕು" ಶಿರಸಪ್ಪ ಹೊಗೆಯನ್ನು ಬಾಯಿ, ಮೂಗಿನಲ್ಲಿ ಬಿಡುತ್ತಾ ಪ್ರಶ್ನಿಸಿದ.

"ನಿನ್ನ ವ್ಯಾಪಾರ ಹೇಗೆ ಸಾಗಿದೆ?"

"ನಂದೇನಲಾ ಮೂಳ ಮುದುಕೀದು. ಮೈಯೊಳಗಿನ ನೊಣ ಹಾರಿದ ಮೇಲೆ ನಾಯಿಯೂ ಮೂಸಿ ನೋಡುವುದಿಲ್ಲವಂತೆ. ಹಾದಿ ತಪ್ಪಿ ಬರುತ್ತವೆ ಗಿರಾಕಿಗಳು ತುಂಟರು, ಕಾಯಿಲೆದವರು, ಭಿಕ್ಷುಕರು ಹೀಗೇ ಬರುತ್ತಾರೆ." ಅವಳು ತನ್ನ ಪುರಾಣ ಬಿಚ್ಚಿದಳು. ಇದನ್ನು ಕೇಳಿ—

"ತನ್ನ ಬಾಳು ಹಸನಾಗಬಹುದೆ? ಇಂತಹ ವಾತಾವರಣದಲ್ಲಿ ತಾನೊಬ್ಬಳು ಸುಶೀಲತೆಯಿಂದ ಬಾಳಬಹುದೆ?" ಎಂದು ಯೋಚಿಸಿದಳು. ಅವಳಿಗೆ ಆ ರಾತ್ರಿ ಬೇಗ ನಿದ್ದೆ ಬರಲಿಲ್ಲ. ಹೊಸ ಜಾಗ. ಹೊಸ ಮನೆ. ಮತ್ತು ಯಾವ ಹೊತ್ತಿಗೆ ನಿದ್ದೆ ಬಂತು ಎಂಬುದು ಮಾರನೆಯ ದಿನ ನೆನಪನ್ನು ಕೆದಕಿದಾಗ ತಿಳಿಯಲಿಲ್ಲ.

* * * *

ಮಾರನೆಯ ಬೆಳಗ್ಗೆ ಎಚ್ಚರವಾಗುವ ಹೊತ್ತಿಗೆ ಚೌಡಮ್ಮ ಕಾಫಿ ಕಾಯಿಸಿ, ಮಂಡಕ್ಕಿ ಒಗ್ಗರಣೆ ಮಾಡಿದ್ದಳು. ಶಿರಸಪ್ಪ ಕಾಫಿ ತೆಗೆದು ಕೊಂಡು 'ಹೊರಗೆ ಅಡ್ಡಾಡಿ ಬರುತ್ತೇನೆ' ಎಂದು ಹೇಳಿ ಹೋದ. ಚೌಡಮ್ಮ ಅಡಿಗೆಯ ಕೆಲಸದಲ್ಲಿ ಮನಸ್ಸನ್ನು ತೊಡಗಿಸಿಕೊಂಡು ಮಾತಿಗೆ ಪ್ರಾರಂಭಿಸಿದಳು.

"ನಿನ್ನ ಗಂಡ ಅಲ್ಲೇನು ಕೆಲಸ ಮಾಡುತ್ತಾನೆ."

'ಗಂಡ' ಎಂಬ ಶಬ್ದ ಅವಳ ಬಾಯಿಯಲ್ಲಿ ವಿಕೃತಗೊಳ್ಳುತ್ತಿತ್ತು.

"ಅವನು ತರಗಾರ. ಸರ್ಕಾರದವರು ದೊಡ್ಡದೊಂದು ಕಟ್ಟಡ ಕಟ್ಟಿಸು ವುದಕ್ಕೆ ಪ್ರಾರಂಭಿಸಿದ್ದಾರಲ್ಲ, ಅಲ್ಲಿ ಮಾಡುತ್ತಾನೆ ಕೆಲಸ."

"ನಿನ್ನ ಗಂಡನ ಬುದ್ಧಿ ಸುದ್ದಿಲ್ಲೇನು?"

"ಸುದ್ದಿ ಇರದೇನು ಬಹಳ ಕುಡಿಯುತ್ತಾರೆ. ಸಂಸಾರ ಸಾಗಿಸುವ ಮಾತಿಲ್ಲ. ನಾವೇ ಕೂಲಿ ಗೆಯ್ದು ಮಾಡಿ ತಂದು ಹಾಕಿದ್ದನ್ನ ತಿಂದು ಹೋಗ್ತಿದ್ದಾರೆ."

"ಅವನ ಸಂಬಳ ಅವನ ಹೆಂಡಕ್ಕೂ ಆಗುತ್ತಿರಲಿಲ್ಲ ಎಂದಂತಾಯಿತು."

"ಹೌದಕ್ಕ, ಸತ್ಯ ಹೇಳಿದೆ. ಕುಡಿದು ಬಂದು ಮನಸ್ಸಿಗೆ ಬಂದಹಾಗೆ ಹೊಡೆಯುತ್ತಿದ್ರು ಅದೂ ಸಣ್ಣ ಪುಟ್ಟ ಕಾರಣಗಳಿಗಾಗಿ......ಹೊಡೆಯೋದು ಒಂದು ಗೊತ್ತಿತ್ತು. ನಾನು ಯಾಕೆ ಭೂಮಿ ಮೇಲೆ ಹುಟ್ಟಿದೆನೋ ಅನ್ನಿಸಿ ಹೋಗಿತ್ತು. ಅಕ್ಕಾ, ಒಮ್ಮೊಮ್ಮೆ ಬಾವಿಯಲ್ಲಾದರೂ ಬೀಳಲೋ ಅನ್ನಿಸುತ್ತಿತ್ತು." ಹಾಗೆ ಹೇಳುತ್ತಿದ್ದಂತೆ ಆಯಾಚಿತ ಕಣ್ಣೀರು ತುಂಬಿ ಬಂದವು. ಕಷ್ಟವನ್ನು ಕಂಡ, ಉಂಡ ಚೌಡಮ್ಮನೂ ಅನುಕಂಪ ಭಾವನೆ ಯಿಂದ ಮೈದುಂಬಿದವಳಾಗಿ ಅತ್ತಳು.

"ಯಾವಾಗಲೂ ಸಮಾಧಾನ ಎಂಬುವುದಿಲ್ಲ. ಚುಚ್ಚೋದು, ಕಡಿ ಯೋದು, ಗುದ್ದೋದು......" ಪುನರಪಿ ದುಃಖ ಉಮ್ಮಳಿಸಿ ಬಂದಿತು.

"ನಾನು ಸಂಸಾರದಲ್ಲಿ ಪಡಬಾರದ್ದನ್ನು ಅನುಭವಿಸಿದ್ದೇನೆ. ಎಲ್ಲಾ ಹೆಣ್ಣಿನ ಬಾಳು ಕಷ್ಟದಿಂದ ತುಂಬಿದೆ. ಮತ್ತೆ ಇವನು ಶಿರಸಾ ಏನಂತ ಹೇಳಿ ಓಡಿಸಿಕೊಂಡು ಬಂದಾ?"

"ಯಾವುದೋ ನಾಟಕ ಕಂಪೆನಿಯಲ್ಲಿ ಸೇರಿಸುತ್ತಾರಂತೆ. ಅವರೂ ಪಾರ್ಟ್ ಮಾಡ್ತಾರಂತೆ. ಕೊನೆಯ ತನಕ ಕ್ರಿಯಾದಿಂದ ನಡೆದುಕೊಂಡು ಹೋಗಬೇಕಂತೆ. ಅಕ್ಕಾ! ಇವರೆಂಥ ಮನುಷ್ಯರು?"

"ಗುಣಾನಾ?"

"ಹೌದಕ್ಕಾ."

"ನಂಬಿದರೆ ಜೀವ ಕೊಡಲಿಕ್ಕೂ ಸರಿ. ಇಲ್ಲದಿದ್ದರೆ ಕುತ್ತಿಗೆಗೊಯ್ಯ!"

"ಹಾಗಾದರೆ ಎಂತಕ್ಕ!?"

"ಏಕೆ ಈಗಲಿಂದ ಯೋಚನೆ ಮಾಡುತ್ತೀ. ನಡತೆ ಸರಿಯಾಗಿದ್ದರೆ ಆಯಿತು. ಅಪನಂಬಿಕೆ ಯಾಕೆ ಇಟ್ಟುಕೊಳ್ಳುತ್ತೀ. ಕಡ್ಡೀ ಕೆರೆಯದೆ ಬೀಡಿ ಸೇದೋ ಲೆಕ್ಕ ಆಯ್ತು."

ಚೌಡಮ್ಮನ ಮಾತಿನಿಂದ ಕೊಂಚ ಸಂತೋಷವೇನೋ ಆದರೂ ಮನಸ್ಸಿನ ಒಂದು ಮೂಲೆಯಲ್ಲಿ ಸಂಶಯ ಮನೆಮಾಡಿಕೊಂಡಿತ್ತು. ತನಗೆ ನಾಟಕ ಮಂಡಳಿಯಲ್ಲಿ ಆತನ ಸಹಾಯದಿಂದ ಸ್ಥಾನವೊಂದು ದೊರಕೀತು. ಜನ ಬಲ್ಲ, ದೇಶಬಲ್ಲ ಮನುಷ್ಯ. ಗಂಡನ ಮನೆಯಿಂದ, ಆ ನರಕ ಕೂಪ ದಿಂದ ಬಿಡುಗಡೆಯಾಗಲು ಕಾರಣನಾಗಿದ್ದಾನೆ. ಮತ್ತೆ? ಭಾವೀ ಬಾಳನ್ನು ರೂಪಿಸಲು ಸಿದ್ಧಶಿಲ್ಪಿಯಂತೆ ಮುಂದೆ ಬಂದಿದ್ದಾನೆ. ಅಕಸ್ಮಾತ್ತಾಗಿ ತನ್ನ ಗಂಡ ಮರಿಬಸವ ಬಂದರೂ ತಾನು ಹೋಗುವವಳಲ್ಲ. ಆತ ಹಿಂಸೆ ಮಾಡಲು ಸಹಸಾ ಮುಂದೆ ಬಂದರೆ ಶಿರಸಪ್ಪನನ್ನು 'ಛೂ' ಬಿಟ್ಟರಾಯಿತು. ಏನೇ ಆಗಲಿ ಪಶು ಸದೃಶ ವ್ಯಕ್ತಿಯಿಂದ ವಿಭಕ್ತವಾಗಿದ್ದಾಯಿತು. ತೌರು ಮನೆಯಿಲ್ಲದ ಪರದೇಶಿಗೆ ಮರಿಬಸವನ ಮನೆ ತೌರು ಮತ್ತು ಗಂಡನ ಮನೆ ಯಾಗಿತ್ತು. ಆದರೆ ವಿಧಿ ತನ್ನ ಕ್ರೂರ ದೃಷ್ಟಿ ಬೀರಿತು. ಹೇಗೋ ಯಾರಿಂದಲೋ ಶಿರಸಪ್ಪನ ಸ್ನೇಹ ಬೆಳೆಯಿತು. ಆದರೆ ಏಕೋ ಅನುಮಾನ. ಈ ಚೌಡಮ್ಮ ಮತ್ತು ಈ ಆನೆಪೇಟೆ......

ಆನೆಪೇಟೆಯಿಂದ ದೂರ ಹೋದಷ್ಟೂ ಒಳ್ಳೆಯದು ಎಂದು ಕಲ್ಪನೆ ಮಾಡಿದಳು. ವ್ಯಭಿಚಾರಿಕೊಳ್ಳುವುದು ಅವಳಿಗೆ ಸರಿಬರದ ಉದ್ಯೋಗ ವಾಗಿತ್ತು. ಚಾರಿತ್ರ್ಯ ಹೋದರೂ ಮರ್ಯಾದೆಯಿಂದ ಬಾಳಬೇಕೆಂಬ ಆಶಾವಾದಿ, ಹಂಪಮ್ಮ. ಇದು ರೋಗದ ಕೂಪ, ಈ ಸ್ಥಳ ದುಷ್ಟ ಜನಗಳ ಆಗರ.

— ಯೋಚಿಸಿದಷ್ಟೂ ಭಯಂಕರವಾಗಿದ್ದುವು........

ಅದೇ ದಿನ ಮಧ್ಯಾಹ್ನ ಶಿರಸಪ್ಪ ಒಂದು ಕಲ್ಲಂಗಡಿ ಹಣ್ಣಿನ ಸಮೇತ ಕೆಲವು ಅಡಿಗೆ ಸಾಮುಗ್ರಿಗಳನ್ನು ಕೊಂಡು ತಂದ. ಕೆಲವು ದಿನಗಳು ತಮ್ಮಿಬ್ಬರಿಗೂ ವಿಶಾಲ ಹೃದಯದಿಂದ ಆಶ್ರಯವೀಯಬೇಕೆಂದು ಊಟ ಮಾಡುವಾಗ ಕೇಳಿದ. ಅದಕ್ಕೆ ಚೌಡಮ್ಮ,

"ಇದು ನಿಮ್ಮ ಮನೆ ಇದ್ದಂತಿದೆ. ಬೇರೆ ಏಕೆ ಯೋಚಿಸಬೇಕು" ಎಂದು ಸಮಾಧಾನ ಹೇಳಿದಳು. ಅಂದಿನಿಂದ ಹಂಪಮ್ಮನನ್ನು ತನ್ನ ಮನೆಯವರಂತೆ ನೋಡಿಕೊಳ್ಳಲು ಸುರು ಮಾಡಿದಳು. ದಿನ ಕಳೆಯು ತ್ತಿದ್ದಂತೆ ಅವರಿಬ್ಬರಲ್ಲಿ ಹೆಚ್ಚಿನ ಪ್ರೇಮ, ಸಲುಗೆ ಬೆಳೆಯಿತು.

ಶಿರಸಪ್ಪ ಒಂದೆರಡು ದಿನ ಕಾರಣಾಂತರದಿಂದ ಬರಲಿಲ್ಲ. ಆತ ಬಂದಮೇಲೆ ಅತ್ತೂ ಕರೆದು ಮುಂದೆ ಹಾಗೆ ಹೇಳದೆ ಎಂದಿಗೂ ಹೋಗ ಬಾರದೆಂದು ಆಶ್ವಾಸನ ತೆಗೆದುಕೊಂಡಳು. ಒಂದು ದಿನ ಇದ್ದಕ್ಕಿದ್ದಂತೆ ಬಂದು,

"ಇವೊತ್ತು ಸಾಯಂಕಾಲ ತಾಲೀಮಿಗೆ ಹೋಗಬೇಕು. ತಯಾ ರಾಗು," ಎಂದ.

ಆತನ ಅವಸರದ ಆಜ್ಞೆಗೆ ಮರುಮಾತನಾಡದೆ ಮಧ್ಯಾಹ್ನದಿಂದಲೇ ಸಿದ್ಧತೆ ಮಾಡಿಕೊಳ್ಳಹತ್ತಿದಳು. ಮುಖಕ್ಕೆ ಪೌಡರ್ ಹಚ್ಚಿಕೊಂಡು, ತುಟಿಗೆ ಲಿಪ್‌ಸ್ಟಿಕ್ ಸವರಿಕೊಂಡಳು. ಕಣ್ಣಿನ ಸುತ್ತಲೂ ಕಾಡಿಗೆಯನ್ನು ಹಗುರ ವಾಗಿ ಹಚ್ಚಿಕೊಂಡಳು. ಆಧುನಿಕ ರೀತಿಯ ಸೀರೆ ಹಾಗೂ ಚೋಲಿ ಧರಿಸಿಕೊಂಡು ಬೆಡಗಿನಿಂದ ಹೊರಟು ನಿಂತಾಗ ಚೌಡಮ್ಮ ಹೇಳಿದಳು: ನಾಟಕ ಕಂಪೆನಿಯಲ್ಲಿ ಆದಷ್ಟು ಗಂಭೀರಳಾಗಿರು. ನಿನ್ನ ಮರ್ಯಾದೆ ಯನ್ನು ನೀನು ಕಾಪಾಡಿಕೊಳ್ಳಲು ಪ್ರಯತ್ನಿಸು. ಆಯಿತು, ಇನ್ನು ಚಹ ತೆಗೆದುಕೊಂಡು ಹೋಗು—ಎಂದು ನುಡಿದು ಉಪಚರಿಸಿ ಬೀಳ್ಕೊಟ್ಟಳು.

ಹಂಪಮ್ಮ ತಾಲೀಮು ಮನೆಗೆ ಹೋಗುವ ಹೊತ್ತಿಗೆ ನಾಲ್ಕು ಘಂಟೆ ಹೊಡೆದಿತ್ತು. ರಂಗದ ನಟನಟಿಯರು ಹರಟೆಹೊಡೆಯುತ್ತ ಕುಳಿತಿದ್ದರು. ಇವರಿಬ್ಬರ ಜೋಡಿ ಬರುತ್ತಲೆ ಮುಗುಳ್ನಗೆಯಿಂದ ಸ್ವಾಗತಿಸಿದರು.

"ಈತ ಮಜೀದ್, ಈತ ಬಸಪ್ಪ, ಇವರು ಸಾಹುಕಾರ್ ಸಣ್ಣ ಬಸಪ್ಪನೋರು, ಈತ ಅಬ್ದುಲ್‌ಗಫಾರ್, ಅಲ್ಲಾಸಾಬು......ಈಕೆ ಬಿಜಲಿ, ನೂರ್, ರೋಶನಿ, ಮುಕ್ತಾಬಾಯಿ, ಪದುಮಾಜಿ."

ಇವರುಗಳ ಪರಿಚಯವಾದ ಮೇಲೆ ಚಹಾ ಸಮಾರಂಭವಾಯಿತು. ಪರಸ್ಪರ ಸಂಭಾಷಣೆಗಳಾದುವು. ಹಂಪಮ್ಮ ತನ್ನ ಹಿಂದಿನ ಕಥೆಯನ್ನು ತೇಲಿಸಿ ಸೂಕ್ಷ್ಮವಾಗಿ ಹೇಳಿದಳು. ಆ ಮೇಲೆ ಗಫಾರ್,

"ಬಿಜಲಿ ಒಂದು ಗಜಲಿ ಹೇಳು," ಎಂದ.

ಬಿಜಲಿ ರಾಗವಾಗಿ 'ಗಜಲಿ' ನುಡಿದಳು. ಬಸಪ್ಪ ಹಾರ್ಮೋನಿ ಯಮ್ ಬಾರಿಸಿದ. ಅಲ್ಲಾಸಾಬು ತಬಲಾ ಬಡೆದ. ತದನಂತರ ಬಿಜಲಿ ಮೆತ್ತಗೆ ಹೇಳಿದಳು: "ತಂಗಿ! ನೀನೊಂದು ಹಾಡು ಹೇಳು." ಹಂಪಮ್ಮ

ಮೊದಲು ನಾಚಿದರೂ ಕೊನೆಗೆ ಕೊಂಚ ಧೈರ್ಯ ತಂದುಕೊಂಡು "ಕೃಷ್ಣಾ ಮುರಾರಿ" ಮತ್ತು "ದೇವಾ! ಯಾಕೆನ್ನ ಕೈಬಿಟ್ಟೆ" ಎಂಬ ಗೀತೆಗಳನ್ನು ಹಾಡಿದಳು.

"ಶಹಭಾಸ್ !" ಎಂದ ಸಾಹುಕಾರ್ ಬಸಪ್ಪ.

"ಬಹಳ ಚೆನ್ನಾಗೈತೆ" ಎಂದ ಬಸಪ್ಪ.

"ಸಂಗೀತ ಜ್ಞಾನವಿದೆ" ಎಂದಳು ಪದುಮರಾಜಿ. ಹೀಗೆ ಎಲ್ಲರೂ ತಮ್ಮ ತಮ್ಮ ಸಂತೋಷ ವ್ಯಕ್ತಪಡಿಸಿದರು.

ಸಕ್ರಮವಾಗಿ ಮಾರನೆಯ ದಿವಸದಿಂದ ತಾಲೀಮು ಪ್ರಾರಂಭ ವಾಯಿತು. ಮುಕ್ತಾಬಾಯಿ ಹೇಳಿದಳು:

"ನಾವು ಆಡೋದು ನಾಟಕ ಕಂಪೆನಿಯಲ್ಲ. ಇದಕ್ಕೆ 'ಎಂಟರ್ ಟೇನ್‌ಮೆಂಟ್ಸ್' ಅಂತಾರೆ. ಒಂದೆರಡು ಚಿಕ್ಕನಾಟಕಗಳೊಂದಿಗೆ ಒಂದೆರಡು ಕಣಿತ ಕೂಡ ತೋರಿಸಿದರೆ ತೀರಿತು."

"ಅಂದರೆ ನಾವು ಜಾತ್ರೆಗಳಲ್ಲಿ ನಾಟಕಗಳನ್ನು ಆಡುವವರಲ್ಲ......" ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದಳು.

"ಆ ನಾಟಕಕ್ಕೂ ನಮ್ಮ ನಾಟಕಕ್ಕೂ ತುಂಬಾ ವ್ಯತ್ಯಾಸ ಇದೆ. 'ಲೈಲಾ–ಮಜನು', 'ಘರವ್ ಮಸಾಲೆ' ಹಿಂದೀ ನಾಟಕಗಳು ಮತ್ತು 'ಬಾಡಿಗೆ ಕದ' 'ಆ ಮನೆಯ ರಾಣಿ' ಹೀಗೆ ಕನ್ನಡ ನಾಟಕಗಳನ್ನು ಆಡುವವರು. ಜನಗಳು ನಮ್ಮ ಕಾಂಪೌಂಡಿನೊಳಗೆ ಪ್ರವೇಶ ಮಾಡಿಲಿಕ್ಕೆ ಎರಡಾಣೆ ಕೊಡಬೇಕು. ಅನಂತರ ಜೂಜು ಆಡುವವರು ಜೂಜು ಆಡುತ್ತಾರೆ. ಒಂದು ಕಡೆ ಲಕ್ಕೀಡಿಪ್ ನಡೆಯುತ್ತಿದ್ದರೆ ಪಕ್ಕದಲ್ಲಿ ನಾಟಕವೂ ಸುರುವಿರ್ತದೆ. ನಾಟಕ ತೀರಿದ ಮೇಲೆ ಕಸರತ್ತೂ ತೋರಿಸುತ್ತೇವೆ," ಎಂದಿದ್ದ ಕಂಟ್ರಾಕ್ಟರ್ ಮಜೀದ್.

"ಜೂಜು ಅಂದರೆ ಹಣದ್ದಾ ?"

"ಹೌದು! ನೀನು ನೋಡಿಲ್ಲವೇನು. ಕುಂಚದಂಥಾ ಕಡ್ಡೀ ತೆಗೆದುಕೊಂಡು ಬೋರ್ಡ್ ಮೇಲೆ ಒಗೆಯೋದು. ಮತ್ತೆ ಒಂದು ಟೇಬಲಿನ ಮೇಲೆ ಆನೆ, ಕುದುರೆ ಮುಂತಾದ ಚಿತ್ರಗಳಿರುತ್ತವೆ. ಅದರ ಮೇಲೆ ಹಣ ಕಟ್ಟಿ ಆಡೋದು," ಎಂದು ಶಿರಸಪ್ಪ ತಾನೂ ಭಾಗವಹಿಸಿ ವಿವರಿಸಿದ್ದ.

ಅವರ ನಾಟಕಗಳಾದರೋ ಚಿಕ್ಕವಿದ್ದವು. ಮೂರು ನಾಲ್ಕು ಹಿಂದಿ ಕನ್ನಡನಾಟಕಗಳನ್ನು ತಯಾರಿಸಿದ್ದರು. ಇದರಜೊತೆಗೆ ಏಳೆಂಟುನೃತ್ಯಗಳೂ ಕೂಡ. ಮಜೀದ್ ಅವರಿಗೆ ನಾಟ್ಯಾಚಾರ್ಯನಾಗಿದ್ದ. ಶಾಸ್ತ್ರೋಕ್ತ ನೃತ್ಯಗಳಲ್ಲದ ಆ ಕುಣಿತಗಳು ದೊಂಬರ ನೃತ್ಯದಂತಿದ್ದುವು. ತಾಳ, ಹೆಜ್ಜೆ ಗಳ ಮಾತಿರಲಿಲ್ಲ. ಅವರಿಗೆ ಸಿಕ್ಕಾಪಟ್ಟೆ ಮೈಬಳುಕಿಸುತ್ತಾ ಕುಣಿಯುವು ದೊಂದು ಗೊತ್ತಿತ್ತು. ಹಂಪಮ್ಮ ನಿತ್ಯ ಅಂತಹ ನೃತ್ಯಗಳನ್ನು ಕಲಿಯಲು ಪ್ರಾರಂಭಿಸಿದಳು. ಒಂದೆರಡು ಘಂಟೆಗಳು ಸಂಗೀತ, ನಾಟಕಕ್ಕೆ ವಿನಿ ಯೋಗವಾದರೆ ಒಂದು ಘಂಟೆ ಮಾತ್ರ ನೃತ್ಯಕ್ಕೆಂದು ಕಳೆಯುತ್ತಿದ್ದಳು. ಹಂಪಮ್ಮ ನೃತ್ಯದಲ್ಲಿ ತೊಡರದೇ ಇರುವಂತೆ ಸಕಚ್ಚ ಸೀರೆಯುಟ್ಟು ಬಿಜಲಿ, ಮುಕ್ತ, ಪದುಮಾಜಿ, ನೂರ್. ರೋಶನಿ,—ಇವರ ಜೊತೆಗೆ ಹಾವಭಾವ, ಒನಪು ಒಯ್ಯಾರಗಳನ್ನು ಪ್ರದರ್ಶಿಸಲು ಹತ್ತಿದಳು. ಅವಳು 'ಜರಾ ಆಂಖ್ ಮಿಲಾವ್, ಜರಾ ಸಾಮನೆ ಆವ್'—'ಮೈ ಜಿಂದಗಿಮೆ ಹರದಮ್ ರೋತಾ ಹಿರಹಾ ಹೂ'—'ರಾಧಾ ಕೆ ಪ್ರಭು ಗಿರಿಧರ್' ಮುಂತಾದ ಗೀತೆ ಗಳನ್ನು ಕಲಿತುಕೊಂಡು ಚೌಡಮ್ಮನ ಎದುರಿಗೆ ಹೇಳುತ್ತಿದ್ದಳು. ಚೌಡಮ್ಮ ಇತ್ತೀಚೆಗೆ ಒಂದೆರಡು ಗಿರಾಕಿಗಳನ್ನು ಹಂಪಮ್ಮನಿಗೆ ಹೊಂದಿಸಿಕೊಟ್ಟಿದ್ದಳು. ಇದು ಶಿರಸಪ್ಪನಿಗೂ ಗೊತ್ತಾದಾಗ ಆತ ಎರಡಾಡಲಿಲ್ಲ. ಪ್ರತಿಯಾಗಿ ಪುಷ್ಟಿಕೊಟ್ಟ.

"ಕುಳಿತು ಏನು ಮಾಡೋದು. ಕೈಖರ್ಚಿಗಾದರೂ ಆಗುತ್ತೆ," ಬರಬರುತ್ತಾ ಚೌಡಮ್ಮನ ಕಾಟ ಪ್ರಾರಂಭವಾಯಿತು. ಮನೆ ಖರ್ಚು ನಡೆಸಲು ಸಾಧ್ಯವಿಲ್ಲವೆಂದೂ ತಾನು ಮನೆಗೆ ಬಂದವರಿಗೆ ಮೈಮಾರಿಕೊಳ್ಳ ಬೇಕೆಂದೂ ನೇರವಾಗಿ ಹೇಳುತ್ತಿದ್ದಳು. ಇದರಿಂದಾಗಿ ಅವಳ ಆರೋಗ್ಯ ಕೆಡಲು ಉಪಕ್ರಮಿಸಿತು.

ಹಂಪಮ್ಮ ದುಃಖತಪ್ತಳಾಗಿ "ನಾನು ಇಲ್ಲಿ ಇರುವುದಕ್ಕಾಗುವುದಿಲ್ಲ. ಬೇರೆ ಎಲ್ಲಿಯಾದರೂ ಮನೆ ನೋಡಿ. ಇವಳ ಗಿರಾಕಿಗಳಿಗೆ ಮೈಮಾರಿ ಕೊಳ್ಳಲಾರೆ", ಎಂದು ಖಡಾಖಂಡಿತವಾಗಿ ಒಂದು ದಿನ ಹೇಳಿದಳು.

"ಈಗ ಒಂದು ಹೊಸ ಸಂಸಾರವನ್ನೇ ಹೂಡಬೇಕಾಗುತ್ತದೆ. ಹೇಗಾದರೂ ಮಾಡಿ ಸುಧಾರಿಸಿಕೊಂಡು ಹೋಗಬಾರದೇ ನನ್ನ ಚಿನ್ನ."

"ಛಿಃ ಹಾಳು ಬಾಳು ಬೇಡ."

"ಅದನ್ನೇ ಒಳ್ಳೇ ಮಾತಿನಲ್ಲಿ ಹೇಳು."

"ಹೇಳಿದರೆ ಕೇಳವ್ರೊಲ್ಲಳು."

"ನಾನು ಹೇಳಿ ನೋಡುತ್ತೇನೆ."

"ನಾಳೆಯೇ ಹೇಳಿ ಗಟ್ಟಿಮಾಡಿರಿ. ಇಲ್ಲದಿದ್ದರೆ ಉಷ್ಣಹತ್ತಿ ಬೀದಿ ಭಿಕಾರಿ ಆಗಿ ಸಾಯಬೇಕಾದೀತು."

"ನನ್ನ ರಾಣಿ, ನಾನು ಎಲ್ಲಿ ಹೋಗಿರುತ್ತೇನೆ. ನೀನು ಹಂಗಾಗುವುದಕ್ಕೆ ಬಿಡುತ್ತೇನೆಯೆ?

"ನಾನು ಹಂಗಾದಾಗ ಎದುರಿಗೇ ಇರುತ್ತೀರಿ, ಸರಿ! 'ಯಾರಿಗೆ ಯಾರಿಲ್ಲ, ನನಗೆ ಯಾರಿಲ್ಲ ಮಹಲಿಂಗ ಪ್ರಭುವೆ' ಎಂತ ದೊಡ್ಡೋರು ಯಾಕೆ ಹೇಳಿದಾರೇಂತ......"

"ಹಾಗಾದರೆ ನನ್ನ ಮೇಲೆ ವಿಶ್ವಾಸವನ್ನೇ ನೀನು ಇಟ್ಟಿಲ್ಲ."

"ಆ ಮಾತು ಹೋಗಲಿ. ನನಗೆ ಸಂಬಳ ಏನು ಕೊಡುತ್ತೀರಿ?"

"ಬಿಜಲಿ, ರೋಶನಿ ಅವರಿಗೆಲ್ಲಾ ಏನು ಕೊಡುತ್ತಾರೋ, ನಿನಗೂ ಅಷ್ಟೇ ಕೊಡುತ್ತಾರೆ."

"ನನಗೆ ತಿಂಗಳಿಗೆ ನೂರೈವತ್ತು ಕೊಡಿಸಬೇಕು."

"ಯಾಕೆ! ಸಾವಿರ ರೂಪಾಯಿ ಸಾಲದಾ. ಬಹಳ ದೊಡ್ಡ ನಟಿ ಬಿಡೆ!" ಎಂದು ಗಲ್ಲ ಚಿವುಟಿದ.

* * * *

'ಎಂಟರ್‌ಟೇನ್ ಮೆಂಟ್ಸ್' ಥಿಯೇಟರ್ ಜನವರಿ ತಿಂಗಳಲ್ಲಿ ತನ್ನ ಕಾರ್ಯಕ್ರಮ ಪ್ರಾರಂಭಿಸಿ ಎಪ್ರಿಲ್ ತಿಂಗಳ ವರೆಗೆ ತನ್ನ ಕಾರ್ಯಕ್ರಮವನ್ನು ನಡೆಸಿಕೊಂಡು ಹೋಗುತ್ತಿತ್ತು. ಪ್ರತಿವರ್ಷ ಲೈಲಾ-ಮಜನು, 'ಘರಮ್ ಮಸಾಲೆ' ಏಕಾಂಕ ನಾಟಕಗಳನ್ನು ನೋಡಿ ಪ್ರೇಕ್ಷಕ ವರ್ಗ ಬೇಸರಿಸಿದ್ದರು. ಅದಕ್ಕೆಂದೇ ಈ ಬಾರಿ ನಾಟಕಕಾರರೊಬ್ಬರಿಂದ 'ವಿಷಕನ್ಯೆ' ಬರೆಯಿಸಲು ಏರ್ಪಾಡು ಮಾಡಲಾಗಿತ್ತು. ಹಂಪಮ್ಮನಿಗೆ 'ಲೈಲಾ ಮಜನು' ಪಾತ್ರದ ಅಭ್ಯಾಸ ಕೊಡುತ್ತಿದ್ದಂತೆ ನಾಟಕಕಾರ ಒಂದು ದಿನ ಬಿಡುವು ಮಾಡಿಕೊಂಡು ಬಂದು 'ವಿಷಕನ್ಯೆ' ಕೊಟ್ಟ. ಎಲ್ಲರೂ ಆತನ ಶೈಲಿಗೆ ಸಂಪ್ರೀತರಾದರು. ನಾಲ್ಕೇ ದಿನಗಳಲ್ಲಿ 'ವಿಷಕನ್ಯೆ'ಯ

ಅಭ್ಯಾಸವೂ ಆಯಿತು. ಒಂದು ದಿವಸ ಕಾರ್ಯಕ್ರಮ ಪಟ್ಟಿಯೂ ತಯಾರಾಗಿ ಹಸ್ತಪತ್ರಿಕೆಗಳನ್ನು ಎಲ್ಲೆಡೆ ವೈಭವದಿಂದ ಹಂಚಿದರು.

ಒಂದು ಸೋಮವಾರ ಕಾಯಕ್ರಮವಿತ್ತು. ಸಾಯಂಕಾಲ ಏಳರ ಹೊತ್ತಿಗೆ ಸಾಧಾರಣವಾಗಿ ಜನ ಕೂಡಿತು. ಹಾರ್ಮೋನಿಯವರ್ಗೆ ಬಸಪ್ಪ, ತಬಲಾಕ್ಕೆ ಅಲ್ಲಾಸಾಬು, ತಾಳಕ್ಕೆ ಹುಸೇನಿ ಕುಳಿತಿದ್ದರು. ಬಿಜಲಿ, ಹಂಪಮ್ಮ, ರೋಶನಾರು ಈ ಮೂವರು ನೃತ್ಯ ತೆರೆ ತೆಗೆದಕೂಡಲೆ ಆಯಿತು. ತದನಂತರ 'ವಿಷಕನ್ಯೆ' ನಾಟಕ ಪ್ರೇಕ್ಷಕರನ್ನು ಅಚ್ಚರಿಗೊಳಿಸಿತು. ಅದು ಸಂಗೀತ ನಾಟಕಕ್ಕೆ ಹೋಲುವಂತಿತ್ತು. ನಾಟಕಕಾರ ತನ್ನೆಲ್ಲ ಬುದ್ಧಿಯನ್ನು ಖರ್ಚುಮಾಡಿ ಬರೆದಿದ್ದ. ಪ್ರಾರಂಭಕ್ಕೆ ನಿರೂಪಣ ಪಾತ್ರ ವಿತ್ತು. ಜನಗಳು ಎವೆಯಿಕ್ಕದೆ ನೋಡುತ್ತಿದ್ದವು.

ನಿವೇದಕ:—ಅಹುದು ನಮ್ಮ ಅರ್ಷೇಯ ಚರಿತ್ರೆಯ ಮೇಲೆ ಕಣ್ಣಾಡಿಸಿದರೆ ಚಂದ್ರಗುಪ್ತ ಮಹಾರಾಜನ ಕೀರ್ತಿ ಸುವರ್ಣಾಕ್ಷರಗಳಲ್ಲಿ ಕೆತ್ತಿಡತಕ್ಕುದು. ಅಂತೆಯೇ ಚಂದ್ರಗುಪ್ತ ಮಹಾರಾಜನ ಸಚಿವ ಶಿರೋಮಣಿ ಚಾಣಕ್ಯನ ತಂತ್ರಕಲಾ ಕುಶಲತೆಯ ಸಾಕ್ಷಿಯಾಗಿ 'ಚಾಣಕ್ಯನ ಬುದ್ಧಿ' ಎಂಬ ನಾಣ್ಣುಡಿ ಪ್ರಚಲಿತದಲ್ಲಿರುವುದೇ ಸಜೀವ ದೃಷ್ಟಾಂತ. ಅಂದು ನವನಂದರು ಚಂದ್ರಗುಪ್ತನು ಶೂದ್ರ ಸ್ತ್ರೀಯ ಮಗನೆಂದು ಹೊಡೆದೋಡಿಸಿದಾಗ ಚಂದ್ರಗುಪ್ತನು ಚಾಣಿಕ್ಯನ ಆಶ್ರಯದಲ್ಲಿ ಅಪಾರ ಸೈನ್ಯವನ್ನು ಕಟ್ಟಿಕೊಂಡು, ನವನಂದರ ಅಮಾತ್ಯ ಶಿರೋಮಣಿ ಅಮಾತ್ಯರಾಕ್ಷಸನ ಕುಟಿಲ ತಂತ್ರಗಳಿಗೂ ಸೈನ್ಯಕ್ಕೂ ಜಗ್ಗದೆ ಅಚಲಿತನಾಗಿ ಎದುರಿಸಿದ್ದಾನೆ. ಅಮಾತ್ಯ ರಾಕ್ಷಸನು ಚಾಣಕ್ಯನ ತಂತ್ರ ಕೌಶಲ್ಯವನ್ನು ಎದುರಿಸಲು ಭೇದೋಪಾಯವೇ ಸರಿಯೆಂದು, ಚಾಣಕ್ಯನಿಂದ ನಿಯೋಜಿತನಾಗಿ—ಗೂಢ ಕಾರ್ಯಕ್ರಮಗಳನ್ನು ಅರುಹಲು—ಬೌದ್ಧ ಸನ್ಯಾಸಿಯ ವೇಷದಲ್ಲಿರುವ ಜೀವಸಿದ್ಧಿಯೊಂದಿಗೆ ಮಾತನಾಡುತ್ತಿದ್ದಾನೆ. ಅದೇನೆಂಬುದನ್ನು ನೀವು ಕೇಳಬೇಕಲ್ಲವೆ?

ಅಮಾತ್ಯ ರಾಕ್ಷಸ:—ಜೀವಸಿದ್ಧ! ನಾನಿನ್ನು ಈ ರಾಜ್ಯಭಾರವನ್ನು ತ್ಯಜಿಸಿ ಹೊರಟುಹೋಗುತ್ತೇನೆ. ರಾಜ್ಯಾಢಳಿತದ ವಿಚಾರಕ್ಕೂ ಸರಿಯಾದ ಏರ್ಪಾಡನ್ನು ಮಾಡಿದ್ದೇನೆ; ಆ ಮಾತಿರಲಿ. ನಾನೀಗ ಒಂದು ಮಾತನ್ನು ಹೇಳಬೇಕಾಗಿದೆ.

ಜೀವಸಿದ್ಧಿ:—ಮಂತ್ರಿವರ್ಯರಾದ ಅಮಾತ್ಯರಾಕ್ಷಸರ ಚಿತ್ತಕ್ಕೆ ಬಂದಂತೆ ಮಾಡಬಹುದು. ಇಂತಹ ಸಮಯದಲ್ಲಿ ಈ ಅಲ್ಪನ ಸೇವೆ ಬೇಕೆಂದು ಕಾಂಕ್ಷಿಸಿದರೆ ಈ ದೇಹವನ್ನು ಅದಕ್ಕಾಗಿ ಸವೆಯಲು ಸದಾ ಸಿದ್ಧನಿರುವೆನು.

ಅಮಾತ್ಯ ರಾಕ್ಷಸ:—ಜೀವಸಿದ್ಧಿ! ಇಗೋ ಇಲ್ಲಿ ನೋಡು. ಈ ಕನ್ಯೆಯು ಈ ಹಿಂದೆ ಸೆರೆಸಿಕ್ಕಿದ ವಲ್ಲಭರಾಯನ ಸುಪುತ್ರಿ. ಇವಳನ್ನು ನಮ್ಮ ಜ್ಯೇಷ್ಠ ನಂದನನಿಗಾಗಿ ಹದಿನೈದು ವರಷಗಳ ತನಕ ಸಾಕಿ ಸಲುಹಿ ದೊಡ್ಡವಳನ್ನಾಗಿ ಮಾಡಿದೆ. (ಗದ್ಗದಿತ ಕಂಠದಲ್ಲಿ) ಆ...ದ...ರೆ ಅವರು ತೀರಿಹೋದರೆಂಬುದು ನಿಮಗೆ ವೇದ್ಯವಾಗಿರುವ ಅಂಶ.

ಜೀವಸಿದ್ಧ:—(ಚಿಕ್ಕ ಧ್ವನಿಯಲ್ಲಿ) ಹೌದು! ಈಗದಕ್ಕಾಗಿ ಯೋಚಿಸಿದರೆ......

ಅಮಾತ್ಯ ರಾಕ್ಷಸ:—ಎಲ್ಲವೂ ವಿಧಿಯ ವೈಚಿತ್ರ್ಯ. ಇಂತಹ ಕನ್ಯಾರತ್ನವನ್ನು ಯೋಗ್ಯನಿಗೆ ಮೀಸಲಿಟ್ಟದ್ದರಿಂದ ಯೋಗ್ಯನಿಗೇ ಇದನ್ನು ಸಲ್ಲಿಸಬೇಕಾಗಿದೆ.

ಜೀವಸಿದ್ಧಿ:—ದೊಡ್ಡ ಮಾತು-ದೊಡ್ಡ ಮಾತು. ಸುಕೋಮಲ ಸುಗಂಧಿತಪುಷ್ಪವನ್ನು ಬೀದಿಯಲ್ಲಿಬಿದ್ದಿರುವ ಕಲ್ಲಿಗೆ ಏರಿಸಲಿಕ್ಕಾಗುತ್ತದೆಯೆ?

ಅಮಾತ್ಯ ರಾಕ್ಷಸ:—ಒಳ್ಳೆಯ ಮಾರ್ಮಿಕವಾಗಿ ನುಡಿದಿರಿ. ಇವಳನ್ನು ಚಂದ್ರಗುಪ್ತನೊಡನೆ ಸಂಬಂಧ ಬೆಳೆಸುವಂತೆ ಮಾಡಿದರೆ, ಅಪರಂಜಿಗೆ ವಜ್ರವನ್ನು ಕೂರಿಸಿದ ಹಾಗಾಗುತ್ತದೆ.

ಜೀವಸಿದ್ಧಿ:—ಅಹುದಹುದು. ರಥಕ್ಕೊಂದು ಕಳಶವನ್ನಿಟ್ಟಂತಾಗಿ ದಿವ್ಯ ಶೋಭೆ ಬರುವುದರಲ್ಲಾವ ಸಂದೇಹ.

ಅಮಾತ್ಯ ರಾಕ್ಷಸ:—ಆ ಒಂದು ವಿಶಾಲ ಭಾವನೆಯ ಹೇತು, ಇವಳನ್ನು ಕರಕೊಂಡು ಚಂದ್ರಗುಪ್ತ ರಾಜನ ಬಳಿ ಧಾವಿಸಿ, "ನಾನು ಸಾಕಿ ಸಲುಹಿದ ವನಿತೆ" ಎಂದು ಚಾಣಕ್ಯನ ಮುಖೇನ ಇವಳನ್ನು ಚಂದ್ರಗುಪ್ತನು ಪ್ರೀತಿಸುವಂತೆ ಮಾಡಬೇಕು.

ಜೀವಸಿದ್ಧಿ:—ಅಮಾತ್ಯ ಶಿರೋಮಣಿಗಳು ಇಂತಹ ಒಂದು ಸುಸಮಯವನ್ನು ಕಲ್ಪಿಸಿಕೊಟ್ಟು ಸೇವೆ ತೆಗೆದುಕೊಂಡದ್ದಕ್ಕಾಗಿ ನಾನು ಚಿರಋಣಿ!

ಅಮಾತ್ಯ ರಾಕ್ಷಸ:—ಆದರೊಂದು ಮಾತು ಜೀವಸಿದ್ಧಿ! ಇದನ್ನು ನಾನು ಹೇಳಿದೆನೆಂದು ಎಂದಿಗೂ ತಿಳಿಸದಿರು. ಮತ್ತು ನಾನು ಸನ್ಯಾಸಿಯು, ಇಂತಹ ಕೆಲಸಗಳಿಗೆ ಅನರ್ಹನೆಂಬ ಮಾರ್ಗದಲ್ಲಿ ಮನಸ್ಸನ್ನು ವಿಚಲಿತ ಮಾಡಿಕೊಳ್ಳದೆ ಕಾರ್ಯಸಾಧನೆ ಮಾಡುವಿರಾಗಿ ನಂಬಿದ್ದೇನೆ.

(ದೂರದಲ್ಲಿ ಧ್ವನಿಯು ಕೇಳುವುದು)

ಕರ್ತವ್ಯ ಮಾಚರನ್ ಕಾರ್ಯಂ ಅಕರ್ತವ್ಯ ಮನಾಚರನ್
ತಿಷ್ಠತಿ ಪ್ರಕೃತಾಚಾರೇ ಸತು ಆರ್ಯ ಇತಿ ಸ್ಮೃತಃ ॥

ಜೀವಸಿದ್ಧಿ:—ರಾಕ್ಷಸವರ್ಯ! ಅಂತಹ ಸ್ವಾಮಿದ್ರೋಹವನ್ನು ಮಾಡಲಾರೆ. ಉಂಡಮನೆಗೆ ಜಂತೆಯನ್ನೆಣಿಸುವುದೆ? ಉಪ್ಪು ತಿಂದವರ ಮನೆಗೆ ಎರಡನ್ನು ಬಗೆಯುವುದೆ?

ಅಮಾತ್ಯ ರಾಕ್ಷಸ:—ರಾಜನೀತಿಯಾದುದರಿಂದ ಪ್ರಸಂಗವಶಾತ್ ಅಪ್ಪಣೆ ಕೊಡಿಸಿದ್ದಾಗಿದೆ. ತಾವು ಕೃಪೆ ಮಾಡಿ ಬೇರೆ ತಿಳಿದುಕೊಳ್ಳಬೇಡಿ.

ಜೀವಸಿದ್ಧಿ:—(ಅಂಜುತ್ತಾ) ಮಂತ್ರಿವರ್ಯರೆ! ತಾವು ಯಾವತ್ತು ದಯಮಾಡಿಸೋಣವಾಗುತ್ತದೆ? ತಾವು ದಯಮಾಡಿ ರಾಜ್ಯತಾಗ ಮಾಡ ಬೇಡಿ. ಪ್ರಚಂಡ ಆಶಾವಾದಿಗಳಾಗಿ ಭವಿಷ್ಯತ್ತಿನಲ್ಲಿ ಬರುವ ಕಷ್ಟ—ಕಾರ್ಪಣ್ಯಗಳನ್ನು ಎದುರಿಸಿರಿ. ತಾವು ವಿಭಕ್ತರಾದರೆ ಈ ರಾಜ್ಯಕನ್ನಿಕೆಯು ಪತಿಯಿಲ್ಲದ ಹೆಂಡತಿಯಂತಾಗುತ್ತಾಳೆ; ಗುರುವಿಲ್ಲದ ಮಠದಂತಾಗುತ್ತದೆ; ಮಕ್ಕಳಿಲ್ಲದ ಮನೆಯಂತಾಗುತ್ತದೆ. ತಿಳಿದವರಿಗೆ ಹೆಚ್ಚಿಗೆ ಹೇಳಲು ಶಕ್ತನಲ್ಲ.

ಅಮಾತ್ಯ ರಾಕ್ಷಸ:—ನಿನ್ನೊಡನೆ ಅದೇಕೆ ಗುಪ್ತವಾಗಿಡಲಿ? ನಾನೀಗ ಚಂದ್ರಗುಪ್ತ ಚಾಣಕ್ಯರಲ್ಲಿ ಮನಸ್ತಾಪ ಉಂಟಾಗುವಂತೆ ಪ್ರಯತ್ನಿಸುತ್ತೇನೆ.

ಜೀವಸಿದ್ಧಿ:—ಸಾಧ್ಯವಾಗದಿದ್ದರೆ?

ಅಮಾತ್ಯ ರಾಕ್ಷಸ:—ಸಾಧ್ಯವಾಗದಿದ್ದರೆ ನನ್ನ ಹಿಂದಿನ ಗೆಳೆಯನಾದ ಪರ್ವತರಾಜನಲ್ಲಿಗೆ ಹೋದನಂತರ, ಪೂರ್ವೋಪಕಾರ ಸ್ಮರಣೆಯಿಂದ ತನಗೆ ಚಂದ್ರಗುಪ್ತನಿಂದ ಬಂದ ಅರ್ಧ ರಾಜ್ಯಕ್ಕೆ ಒಡೆಯನನ್ನಾಗಿ ಮಾಡುತ್ತಾನೆ. ಆಗ ನಂದಕೋಶದ ರಹಸ್ಯವನ್ನು ತಿಳಿದಿರುವ ನಾನು, ಆ ಅಪಾರ ಹಣ ವನ್ನುಪಯೋಗಿಸಿಕೊಂಡು ಇಂತಹ ಕೆಲವು ರಾಜರುಗಳ ಸಹಾಯದಿಂದ ಉಚ್ಛ್ರಾಯ ಸ್ಥಿತಿಗೆ ಬರಬಹುದು (ಠೀವಿಯಿಂದ) ಆಗ ಚಂದ್ರಗುಪ್ತನು ರಾಜ್ಯಭಾರ ಮಾಡುವುದೆಂದರೇನು?

ಜೀವಸಿದ್ಧಿ:—ನಾನಿನ್ನು ಹೊರಡುತ್ತೇನೆ, ಅಮಾತ್ಯ ಶಿರೋಮಣಿಗಳೇ!

ಅಮಾತ್ಯ ರಾಕ್ಷಸ:—ಅಮ್ಮಾ ಕನ್ಯಾಮಣಿಯೆ! ಜೀವಸಿದ್ಧಿಗಳ ಆಜ್ಞಾನುಸಾರ ನಡೆದುಕೊಂಡು ಹೋಗು. ನಿನಗೆ ಸುಖವಾಗುವುದು. ನೀವಿನ್ನು ಹೊರಡೋಣವಾಗಲಿ.

ಜೀವಸಿದ್ಧಿ:—ಬಾರಮ್ಮ ಕನ್ಯಾರತ್ನ. ನಾವಿನ್ನು ನಮ್ಮ ಕಾರ್ಯ ಸಾಧನೆಗೆ ತೆರಳುವಾ.

ನಿವೇದಕ: ೨

ಚಂದ್ರಗುಪ್ತನೊಡನೆ ಯುದ್ಧ ಮಾಡುವುದಕ್ಕಿಂತ ಭೇದೋಪಾಯಗಳೇ ಸರಿ. ಅವನು ತಂತ್ರಗಳಿಗೇ ಮಣಿಯುವನೆಂದೆಣಿಸಿದ. ಒಂದು ಕಲ್ಲಿನಿಂದ ಮಾವಿನ ಹಣ್ಣು ಬೀಳದಿದ್ದರೆ, ಇನ್ನೊಂದರಿಂದಲಾದರೂ ಬೀಳಲೆಂಬ ಉಪಾಯದಿಂದ ಜೀವಸಿದ್ಧಿ-ವಿಷಕನ್ಯೆಯರನ್ನು ಬೀಳ್ಕೊಟ್ಟ ಮೇಲೆ ತನ್ನ ಒಬ್ಬೊಬ್ಬ ಚಾರರಿಗೂ ಒಂದೊಂದು ಕಾರ್ಯವನ್ನು ನಿಯೋಜಿಸಿದ.

ಅಮಾತ್ಯ ರಾಕ್ಷಸ:—ಎಲೈ ಬರ್ಬರಕನೆ! ನಿಮ್ಮರಸುಗಳಿಗೆ ವೈರಿಯಾದ ಚಂದ್ರಗುಪ್ತನು ವಿಜೃಂಭಣೆಯಿಂದ ಮೆರವಣಿಗೆ ಸಹಿತ ರಾಜ್ಯಾಭಿಷಿಕ್ತನಾದ ಅರಸಿನಂತೆ ಪಟ್ಟದಾನೆಯ ಮೇಲೆ ಕುಳಿತು ಬರಬಹುದು. ಆಗ, ನಿನಗೆ ರಾಜದ್ವಾರದಲ್ಲಿ ಬರುವ ವೇಳೆಯಲ್ಲಿ ಅವಕಾಶ ದೊರೆಯುತ್ತದೆ. ಆದ್ದರಿಂದ ಇಗೋ! ಸ್ವರ್ಣದಂಡದಲ್ಲಿ ಹುದುಗಿಸಿಟ್ಟುಕೊಂಡಿರುವ 'ಗುಪ್ತಿ' ಎಂಬ ಈ ಶಸ್ತ್ರದಿಂದ ಹಿಂದುಗಡೆ ಕೂತಿರುವ ಚಂದ್ರಗುಪ್ತನನ್ನು ಸಂಹರಿಸಿ ಸಂದಣಿಯಲ್ಲಿ ತಪ್ಪಿಸಿಕೋ.

ಬರ್ಬರಕ:—ಅಪ್ಪಣೆ ಮಹಾಸ್ವಾಮಿ.

ಅಮಾತ್ಯ ರಾಕ್ಷಸ:—ಎಲೈ ಸ್ವಾಮಿಭೃತ್ಯನೇ, ಚಂದ್ರಗುಪ್ತನು ಪಟ್ಟಾಭಿಷಿಕ್ತನಾದ ಮೇಲೆ ಗಜಾರೂಢನಾಗಿ ಬರುವುದಕ್ಕಿಂತ ಪ್ರಥಮವೇ ಕಪಟಶಿಲ್ಪವನ್ನು ರಚಿಸಿ, ಸಮಯ ಕಾದುಕೊಂಡಿದ್ದು ಸಂಹರಿಸುವವನಾಗು.

ಸ್ವಾಮಿ ಭೃತ್ಯ:—ಅಪ್ಪಣೆ ದೇವಾ.

(ದೂರದಲ್ಲಿ ಧ್ವನಿ ಕೇಳಿಬರುವುದು)

ಕರ್ತವ್ಯ ಮಾಚರನ್ ಕಾರ್ಯಂ ಅಕರ್ತವ್ಯ ಮನಾಚರನ್
ತಿಷ್ಠತಿ ಪ್ರಕೃತಾಚಾರೇ ಸತು ಆರ್ಯ ಇತಿ ಸ್ಮೃತಃ ॥

ಅಮಾತ್ಯ ರಾಕ್ಷಸ:—(ಸಖೇದಾಶ್ಚರ್ಯದಿಂದ ಗೊಗ್ಗರು ಧ್ವನಿಯಲ್ಲಿ) ಹ ಹ ಹ ಹ ಹ!!......ಆಕಾಶವಾಣಿ!......ಅಮಾತ್ಯ ರಾಕ್ಷಸನ ಕುಟಿಲ ತಂತ್ರಗಳ ಮುಂದೆ ಆಕಾಶವಾಣಿ! (ಗಂಭೀರ ಧ್ವನಿಯಲ್ಲಿ) ಎಲೈ ಭವನಾಧಿಕಾರಿಯೇ! ಇನ್ನೊಂದು ವಾರದಲ್ಲಿಯೇ ಚಂದ್ರಗುಪ್ತನು ನಮ್ಮನ್ನು ಆಕ್ರಮಿಸಿ ಬರುವವನಾಗಿದ್ದಾನೆ. ಅವನಿಗೊಂದು ಯೋಗ್ಯವಾದ ಬಿಡಾರ ಮಾಡಲ್ಪಡಬೇಕು. ನಂದನ ಸ್ವಗೃಹಗಳು ದುರ್ದೈವೀ ವಿಧವೆಯರಿಂದ ಕೂಡಿದ್ದು ಅಶಾಂತಿಗೆ ಕಾರಣವಾಗಿದೆ. ವೃದ್ಧ ರಾಜದಂಪತಿಗಳು ಪುತ್ರ ಶೋಕದಿಂದ ತಾಪತಪ್ತರಾಗಿರುವ ಹೇತು ಆ ಮಂದಿರವೂ ಅನರ್ಹವಾಗಿದೆ. ಅವರ ತಂದೆಯವರ ಭವನವು ಉಗ್ರಾಣವಾಗಿ ಮಾರ್ಪಟ್ಟಿರುವುದರಿಂದ ಇರಲು ಅಸಹ್ಯವಾಗಿದೆ ಆದುದರಿಂದ ಇವು ಯಾವವೂ ಬೇಡ. ಅತಏವ ಓಲಗದ ಹಜಾರದ ಹಿಂಭಾಗದಲ್ಲಿ ನಂದರ ವಿನೋಧ ವಿಹಾರಕ್ಕೆಂದು ನಿರ್ಮಿಸಲ್ಪಟ್ಟಿರುವ ಕುಮಾರ ಭವನವನ್ನು ಅಲಂಕರಿಸಿ, ಅದರ ಅರನೆಯ ತೊಟ್ಟಿಯನ್ನು ಶಯನ ಗೃಹವನ್ನಾಗಿ ಮಾಡಿ, ಅಲ್ಲಿ ಸಮಯ ನೋಡಿಕೊಂಡಿದ್ದು ಚಂದ್ರಗುಪ್ತನನ್ನು ಸಂಹರಿಸಿ ಸುರಂಗಮಾರ್ಗದಿಂದ ತಪ್ಪಿಸಿಕೊಂಡು ಹೋಗು. ನಾನು ಇದೇ ಮಾರ್ಗದಲ್ಲಿ ಹೋಗುವೆನು,

ಭವನಾದಿಕಾರಿ:—ಅಪ್ಪಣೆ ಸ್ವಾಮಿ!

ದೃಶ್ಯ ೨

(ಚಂದ್ರಗುಪ್ತನ ಬಿಡಾರದಲ್ಲಿ ಒಡ್ಡೋಲಗ ಸೇರಿದೆ. ಒಡ್ಡೋಲಗದಲ್ಲಿ ಚಂದ್ರಗುಪ್ತ, ಚಾಣಕ್ಯ, ಬಾಗುರಾಯಣ ಮುಂತಾದ ರಾಜ್ಯನಿರ್ಮಾಣ ಧುರೀಣರು ತಮ್ಮ ಆಸನಗಳನ್ನು ಅಲಂಕರಿಸಿದ್ದಾರೆ. ಅಮಾತ್ಯ ಶಿರೋಮಣಿಯಿಂದ ಕಾರ್ಯಾರ್ಥವಾಗಿ ನಿಯೋಜಿತರಾದ ಜೀವಸಿದ್ಧ-ವಿಷಕನ್ಯೆಯರು ಚಂದ್ರಗುಪ್ತನ ಒಡ್ಡೋಲಗವನ್ನು ಪ್ರವೇಶಿಸಿದ್ದಾರೆ. ಚಾಣಕ್ಯನು ಅವರನ್ನು ತುಂಟನಗೆಯಿಂದ ಬರಮಾಡಿಕೊಂಡು ಕುಶಲ ಪ್ರಶ್ನೆಗಳನ್ನು ಕೇಳುತ್ತಿದ್ದಾನೆ.)

ಚಾಣಕ್ಯ:—ಅಯ್ಯಾ ಕ್ಷಪಣಕರೆ! ತಾವು ಎಲ್ಲಿಂದ ದಯಮಾಡಿಸುವರಾದಿರಿ. ತಮ್ಮ ಶುಭನಾಮವೇನು? ವಿಶ್ವಾಮಿತ್ರರ ತಪಸ್ಸನ್ನು ನಾಶ ಮಾಡಲೋಸಗ ಬಂದ ಹೇಮೆಯೋ, ಮೇಣ್ ಶಾಪವಶದಿಂದ ಪುರೂರವ

ಚಕ್ರವರ್ತಿಯನ್ನು ನಾಶಮಾಡಲು ಬಂದ ಊರ್ವಶಿಯೊ—ಎಂಬಂತಿರುವ ಈ ಕನ್ಯಾರತ್ನಳಾರು ?

ಜೀವಸಿದ್ಧಿ:—ಅಯ್ಯಾ ಚಾಣಕ್ಯರೆ! ನನ್ನ ಹೆಸರು ಜೀವಸಿದ್ಧಿ. ನಾನು ಅಮಾತ್ಯರಾಕ್ಷಸನ ಮಿತ್ರನಾಗಿದ್ದೆ.

ಚಾಣಕ್ಯ:—(ಆಶ್ಚರ್ಯದಿಂದ) ಓಹೋ!

ಜೀವಸಿದ್ಧಿ:—ಈ ಯುವತಿಯು ಸೆರೆಸಿಕ್ಕಿದ ವಲ್ಲಭರಾಯನ ಸುಪುತ್ರಿಯು. ಬಾಲ್ಯಾದಾರಭ್ಯ ಹದಿನೈದು ವರುಷಗಳ ಪರ್ಯಂತ ಸಾಕಿ ಸಲುಹಿ ಕುಶಲ ವಿದ್ಯೆಗಳನ್ನು ಕಲಿಸಿ, ಸುಪ್ರೌಢೆಯನ್ನಾಗಿ ಮಾಡಿ ಜ್ಯೇಷ್ಠ ನಂದನಿಗಾಗಿ ಮೀಸಲಿರಿಸಿದ್ದೆವು. ಆದರೆ ನಾವೊಂದು ಮಾಡ ಲಿಚ್ಛಿತರಾದರೆ......

ಚಾಣಕ್ಯ:—ಅಹುದು! ವಿಧಿ ಲೇಖಣಿಯ ಬರಸಿಡಿಲಿನ ಎದುರಿಗೆ ಯಾರು ನಿಲ್ಲಬಲ್ಲರು!

ಜೀವಸಿದ್ಧಿ:—ವಾಸ್ತವ-ವಾಸ್ತವ, ದೈವವಶಾತ್ ಅವರು ಸ್ವರ್ಗೀಯ ರಾಗಿ ಹೋದರು.

ಚಾಣಕ್ಯ:—ಸತ್ಯ. ಸಹಜವಾಗಿ ಈ ಸ್ಫುರದ್ರೂಪಿ ಹೂವನ್ನು ಆಘ್ರಾಣಿಸುವರಿಲ್ಲದಾಯಿತು.

ಜೀವಸಿದ್ಧಿ:—ಆ ಒಂದು ಕಾರಣದಿಂದ ಮುಮ್ಮಲ ಮರುಗಿ ರಾಜೋ ತ್ತಮರಾದ ಚಂದ್ರಗುಪ್ತರ ಬಳಿ ಪಾದಸೇವೆಗಾಗಿ ಕರತಂದಿದ್ದೇನೆ. ಇವಳು ಹರಕಂಠಚ್ಛವಿಯಂತೆ, ಇಳೆ ಸರ್ಪದಂತೆ ತೋರುವ, ರೋಮರಾಜಿ ಯಂತೆ ಆಯಸ್ಕಾಂತದೋಲಿರುವಳು. ಅಲ್ಲದೆ ತ್ರಿಲೋಕದ ಗಂಡ ಪಾರ್ಥ ನನ್ನು ಮೋಹದ ಬಲೆಯಲ್ಲಿ ಹಾಕಿಕೊಂಡ ಉಲೂಪಿಯಂತೆ ಬಹು ಚತುರಳು.

ಚಾಣಕ್ಯ:—ಇರಬಹುದು. ಬಾಹ್ಯಾವಲೋಕನದಿಂದಲೇ ವಿದಿತ ವಾಗುತ್ತದೆ.

ಜೀವಸಿದ್ಧಿ:—ಇವಳೊಡನೆ ಪ್ರೇಮ ಸುಖದಲ್ಲಿ ಈಡಾದ ಪ್ರಿಯ ತಮನು ಅತುಲನೀಯವಾದ ಪ್ರಣಯ ಕೇಳಿಗೆ ಮಾರುಹೋಗಿ ಹೊರ ಬಾರನು.

ಚಾಣಕ್ಯ:—(ಕೊಂಚ ಯೋಚಿಸಿ) ಎಲೈ ಭಟರೇ! ನೂತನವಾಗಿ ಹಿಡಿದು ತಂದ ಗಿಣಿಗಳಿಗೆ ಮಾತು ಕಲಿಸಲು ಅಪ್ಪಣೆಯಾಗಿತ್ತು; ಅವುಗಳನ್ನು ಇಲ್ಲಿಗೆ ತೆಗೆದುಕೊಂಡು ಬನ್ನಿ.

ಜೀವಸಿದ್ಧಿ:—ಯಾವ ಗಿಣಿಗಳು? ಪಾರಾವತಚಕೋರಗಳೋ?

ಚಾಣಕ್ಯ:—ಹೌದು! ಪಾರಾವತಚಕೋರಗಳು; ಇದೋ ತಂದೇ ಬಿಟ್ಟರಲ್ಲ. (ಗಿಣಿಗಳ ಕೂಗುವಿಕೆಯ ಶಬ್ದ)

ಜೀವಸಿದ್ಧಿ:—ಇದೇನು ಯಾಕೆ ಹೀಗೆ ಅರಚುತ್ತಲಿವೆ. ಹೊ! ಏನಾಯಿತು ಇವುಗಳಿಗೆ?

ವಂದಿ ಮಾಗಧರು:—ಓಯ್! ಅವೆರಡೂ,—ಎಲ್ಲವೂ ಪಿಲಿಪಿಲಿ ಒದ್ದಾಡುತ್ತ ಮೃತವಾದವಲ್ಲ!

ಚಾಣಕ್ಯ:—(ಕೋಪದಿಂದ) ಥೂತ್! ಈ ಸೇವಕರಿಗೆ ಎಳ್ಳಷ್ಟು ಬುದ್ಧಿಯಿಲ್ಲ. ಯಾರೂ ಆಹಾರವನ್ನೇ ಕೊಟ್ಟಿಲ್ಲ.

ಜೀವಸಿದ್ಧಿ:—ನೀರೂ ಇಲ್ಲದೆ ಸತ್ತವೆಂದು ತಿಳಿಯುತ್ತದೆ.

ಚಾಣಕ್ಯ:—ಸತ್ಯ ಸತ್ಯ. ಎಲ್ಲಾ ಪಕ್ಷಿಗಳ ಪ್ರಾಣಹತ್ಯ ಮಾಡಿ ಅವುಗಳ ದೋಷ ಕಟ್ಟಿಕೊಂಡರು.

ಜೀವಸಿದ್ಧಿ:—(ವ್ಯಂಗ್ಯವಾಗಿ) ಪಾಪದ ಗಂಟಿನಲ್ಲಿ ಈಗಾದ ಪ್ರಕರಣ ದಿಂದ ಅವರಿಗೆ ಇನ್ನೂ ಹೆಚ್ಚಾದ ಪಾಪ ಶೇಖರಣೆಯಾದ ಹಾಗಾಯಿತು.

ಚಾಣಕ್ಯ:—(ನಗುತ್ತಾ) ಜೀವಸಿದ್ಧಿಗಳೇ ನಾನೊಂದು ವಿಷಯವನ್ನು ಹೇಳಬೇಕೆಂದಿದ್ದೇನೆ. ಏನೂ ತಿಳಿದುಕೊಳ್ಳಬಾರದು.

ಜೀವಸಿದ್ಧಿ:—ಅಪ್ಪಣೆ ಕೊಡಿಸುವ ಕೃಪೆಯಾಗಬೇಕು.

ಚಾಣಕ್ಯ:—ಅಯ್ಯಾ ಜೀವಸಿದ್ಧಿ, ನಮ್ಮ ಚಂದ್ರಗುಪ್ತನ ಮನಸ್ಸು ಪಾಣಿಗ್ರಹಣ ಮಾಡಿದ ಪತ್ನಿಯಲ್ಲಿಯೇ ವಿನಾ ಬೇರೆ ಅನ್ಯರಲ್ಲಿ ಅನುರಕ್ತ ವಾಗುವುದಿಲ್ಲ.

ಜೀವಸಿದ್ಧಿ:—ಆದಕಾರಣ ನಾನೇನು ಮಾಡಲಿ ಮಂತ್ರಿವರ್ಯರೆ! ಸೂಚನೆ ಕೊಟ್ಟ ರೀತಿ ಮಾಡುವೆ.

ಚಾಣಕ್ಯ:—ಈ ತ್ರಿಲೋಕ ಸುಂದರಿಯನ್ನು ಈಗಲೇ ಕೊಂಚವೂ ವಿಳಂಬ ಮಾಡದೆ ನಮ್ಮೆಲ್ಲರಿಗೂ ಪ್ರಭುವಾದ ಪರ್ವತ ಸುಧಾಧಿನಾಥನಿಗೆ

ಶಯ್ಯಾಗ್ರಹಕ್ಕೆ ಬರುವ ವೇಳೆಯಲ್ಲಿ ಒಪ್ಪಿಸಿಬರೆ ನಮಗೆ ಪರಮ ಸಂತೋಷವು.

ಜೀವಸಿದ್ಧಿ:— ಹಾಗೆಯೇ ಆಗಲಿ. ನಾವು ಚಂದ್ರಗುಪ್ತ ಮಹಾರಾಜರ ಏಕಪತ್ನಿ ವ್ರತವನ್ನು ಮುರಿಯಲಿಚ್ಛಿಸುವುದಿಲ್ಲ.

ಚಾಣಕ್ಯ:— ಇಂತಹ ವೇಳೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ. ಈಗ ಅಶ್ವಿನೀ ನಕ್ಷತ್ರ ಕಳೆದುಬರುವ ಸಮಯವಾದ್ದರಿಂದ ಬೇಗ ಇಲ್ಲಿಂದ ವಿಭಕ್ತರಾಗಿರಿ.

ಜೀವಸಿದ್ಧಿ:— ಅನಂತಾನಂತ ಪ್ರಣಾಮಗಳು. ನಾವಿನ್ನು ಹೊರಡುತ್ತೇವೆ, ಮಂತ್ರಿಮುಕುಟರೆ!

ಚಾಣಕ್ಯ:— ಹ್ಞೂ......ಅವಶ್ಯವಾಗಿ (ಸ್ವಲ್ಪ ಹೊತ್ತು ಕಳೆದ ನಂತರ) ಕಂಚುಕಿ ಹೊರಗೆ ಯಾರಿರುವರು?

ಕಂಚುಕಿ:— ಏನಪ್ಪಣೆ ಪ್ರಭುವೆ?

ಚಾಣಕ್ಯ:— ಈ ಓಲೆಯನ್ನು ಸಿದ್ಧಾರ್ಥಕನಿಗೆ ಶೀಘ್ರ ಒಯ್ದು ಬರಬೇಕು.

ಕಂಚುಕಿ:— ಅಪ್ಪಣೆ.

ಚಾಣಕ್ಯ:— ಪ್ರಭುವರ್ಯ! ನೋಡಿದಿರಾ ಅಮಾತ್ಯರಾಕ್ಷಸನ ಕುಟಿಲ ತಂತ್ರವನ್ನು!......ಆ ಕುಟಿಲ ತಂತ್ರದ ದ್ಯೋತಕವಾಗಿ ಈ ವಿಷಕನ್ಯೆ!

ಚಂದ್ರಗುಪ್ತ:— 'ವಿಷಕನ್ಯೆ' ಎಂದರೇನು ಸಚಿವ ಶಿರೋಮಣಿಗಳೇ?

ಚಾಣಕ್ಯ:— ಪ್ರಥಮವೇ ರತ್ನಾಕರನಲ್ಲಿ ಉದ್ಭವಿಸಿ ವಿಷಮತ್ಸ್ಯಾಹಾರದಿಂದ ಜೀವಿಸುತ್ತಿರುವ ಮಾತಾಪಿತೃಗಳಲ್ಲಿ ಜನಿಸಿದ ಒಂದು ಶಿಶು. ಆ ಶಿಶುವಿಗೆ ಪಾದರಸ ಸ್ಪರ್ಷವೇದಿ ಮಾಡಿ, ಹನ್ನೆರಡು ವರ್ಷಗಳಾದ್ಯಂತ ವಯೋಗುಣವಾಗಿ ವಿಷಸೇವನೆ ಮಾಡಿ ಬೆಳೆಸಿರುತ್ತಾರೆ. ಅಂತಹ ಕನ್ಯೆಗೆ 'ವಿಷಕನ್ಯೆ' ಎಂದು ಹೆಸರು.

ಚಂದ್ರಗುಪ್ತ: (ಆಶ್ಚರ್ಯದಿಂದ) ಅಂತಹವರಿಂದ ಮನುಷ್ಯನಿಗೆ ತುಂಬಾ ಹಾನಿಯಲ್ಲವೆ?

ಚಾಣಕ್ಯ:— ದಿಟ ದಿಟ. ಹನ್ನೆರಡು ವರ್ಷದ ಪ್ರಾಯದ ನಂತರ ಆ ಬಾಲೆಯು ಅಂಗಸ್ಪರ್ಷವೇನಾದರೂ ಆದರೆ ಆ ವಲ್ಲಭನು ಹತನಾಗುತ್ತಾನೆ; ಇದು ಶತಸ್ಸಿದ್ಧ.

ಚಂದ್ರಗುಪ್ತ:—(ಹೆದರಿದ ಧ್ವನಿಯಲ್ಲಿ) ಘಾತ ಘಾತ......ತಮಗ ದೆಂತು ಗೋಚರವಾಯಿತು.

ಚಾಣಕ್ಯ:—ಈ 'ವಿಷಕನ್ಯೆ'ಯೊಡನೆ ಬಂದಿದ್ದ ಜೀವಸಿದ್ಧಿಯು ನಮ್ಮ ಬಾಲ್ಯದ ಸಹಪಾಠಿಯು. ಅವನನ್ನು ಈ ಪ್ರಾಚ್ಯವೇ ಅಮಾತ್ಯ ರಾಕ್ಷಸನ ಬಳಿ ಗೂಢಚಾರಕನ್ನಾಗಿ ನಿಯೋಜಿತ ಮಾಡಿ ಕಳುಹಿಸಲಾಗಿತ್ತು.

ಚಂದ್ರಗುಪ್ತ:—ಅವರ ಶುಭನಾಮ?

ಚಾಣಕ್ಯ:—ಇಂದುಶರ್ಮನೆಂದು. ಅವನಿಗೇ ಈ ಕೆಲಸ ಒಪ್ಪಿಸ ಲ್ಪಟ್ಟಿದ್ದರಿಂದ ತುಂಬಾ ಉತ್ತಮನಾಗಿ ಸಂಚಾಲನೆ ಮಾಡಿದ. ಅಲ್ಲದೆ ಅಮಾತ್ಯರಾಕ್ಷಸನು ಭವಿಷ್ಯತ್ತಿನಲ್ಲಿ ಮಲಯರಾಜನ ಬಳಿ ಸೇರಿ ನಮ್ಮೊಡನೆ ಘಾತಮಾಡಬಹುದೆಂಬ ವಿಚಾರದಿಂದ ಆ 'ವಿಷಕನ್ಯೆ'ಯನ್ನು ಇಲ್ಲಿಗೆ ಕಳು ಹಿಸಲಾಗಿದೆ. (ತುರಗಗಳ ಖರಪುಟದ ಧ್ವನಿ ಕೇಳಿಬರುವುದು. ಚಾಣಕ್ಯನು ಆ ಕಡೆ ಲಕ್ಷ್ಯಕೊಡದೆ ತನ್ನ ಮಾತಿನಲ್ಲಿ ತಲ್ಲೀನನಾಗಿರುವನು)

ಚಂದ್ರಗುಪ್ತ:—ತ್ರಿಕಾಲೋಚಿತ ಜ್ಞಾನಿಗಳಿಗೆ ಯಾರು ಸಮನಾಗ ಬಲ್ಲರು?! ಅವಳು 'ವಿಷಕನ್ಯೆ' ಎಂಬುದು ಹೇಗೆ ವಿದಿತವಾಯಿತು?

ಚಾಣಕ್ಯ:—ಇಂದುಶರ್ಮನು ಅವಳೊಡನೆ ಬಂದು ಗುಣಕಥನ ಮಾಡುತ್ತಿದ್ದಾಗ ಭಾವಗರ್ಭಿತವಾದ ವಾಕ್ಯಗಳಿಂದ ಸೂಚಿಸಿದ. ವಿಶೇಷ ವಾಗಿ ಅದರಲ್ಲಿ—ಕಾಳ ಸರ್ಪ, ಹರಕಂಠಚ್ಛವಿಗಳ ತುಲನೆಯಿಂದಲೂ ಉಲೂಪಿ ಎಂಬ ಶಬ್ದದಿಂದಲೂ ಅವಳಲ್ಲಿ ವಿಷದೋಷ ಉಂಟೆಂದು ಆಳವಾಗಿ ಆಲೋಚಿಸುವವರಿಗೆ ವಿಕಸಿತವಾಗುತ್ತದೆ.

ಚಂದ್ರಗುಪ್ತ:—ಸತ್ಯ ಸತ್ಯ. ಇಂದುಶರ್ಮನು ತನ್ನ ಕಾರ್ಯವನ್ನು ಬಹು ಚಾಕಚಕ್ಯತೆಯಿಂದ ನಿರ್ವಾಹ ಮಾಡಿದ್ದಾನೆ.

(ಪುನಃ ತುರಗಗಳ ಖರಪುಟದ ಧ್ವನಿ ಕೇಳಿಬರುವುದು)

ಚಾಣಕ್ಯ:—ಅಲ್ಲದೆ ಅವಳೊಡನೆ ಅಂಗಸುಖವನ್ನನುಭವಿಸುವ ಕಾಂತನು ಶಯ್ಯಾಗೃಹದಿಂದ ಈಚೆಗೆ ಬಾರನು ಎಂಬುದರಿಂದಲೂ, ಗಿಣಿ ಗಳನ್ನು ತಂದಾಗ ಆಕೆಯನ್ನು ನೋಡಿ ಸತ್ತುಹೋದದ್ದರಿಂದಲೂ ಅದು ಸ್ಪಷ್ಟವಾಗಿ ಪ್ರಸ್ಫುಟಿತವಾಗುತ್ತದೆ.

ಓರ್ವ ದೂತ:—ದೇವರೂ ಅವಧರಿಸಬೇಕು! ತಮ್ಮೋಲೆಯ ಪ್ರಕಾರ ಸಿದ್ಧಾರ್ಥಕನು ಭಾಗುರಾಯಣ ಸೈನ್ಯಾಧಿಪತಿಗಳ ಬಳಿ ಧಾವಿಸಿ ಅವರಿಗೆ,—

ಡಿಂಗಿರಾತ, ಪುರುಷದತ್ತ, ಬಲಗುಪ್ತರ ಸೈನ್ಯಗಳನ್ನು ಮಲಯಕೇತುವಿನ ದಂಡಿನ ಪಾಳೆಯದ ಪೂರ್ವ ದಿಕ್ಕಿನಲ್ಲಿ ಸಾರಿ ನಿಂತಿರುವಂತೆ ಸನ್ನದ್ಧ ಮಾಡಲು ಹೇಳಿದ ಪ್ರಕಾರ......

ಚಾಣಕ್ಯ:—(ಅವಸರದಲ್ಲಿ) ಆಮೇಲಾಮೇಲೆ ಬೇಗ ಹೇಳುವಂಥವನಾಗು.

ದೂತ:—ಅದೇ ಪ್ರಕಾರ ಪೂರ್ವ ದಿಕ್ಕಿನಲ್ಲಿ ಸೈನ್ಯ ಬಂದು ನಿಂತಿದೆ. ಮತ್ತು ಬಾಗುರಾಯಣನು ಬೆತ್ತಲಗುದುರೆಯ ಸಮೇತ ಯಾವುದೋ ದಿಕ್ಕನ್ನು ಹಿಡಿದು ಹೊರಟುಹೋದನು. ಇದ್ದ ವಿಷಯವನ್ನು ಸನ್ನಿಧಿಯಲ್ಲಿ ಅರಿಕೆ ಮಾಡಿಕೊಂಡಿದ್ದೇನೆ.

ಇನ್ನೊಬ್ಬ ದೂತ:—ಪ್ರಭುಗಳೆ! ಪರ್ವತರಾಜನು 'ವಿಷಕನ್ಯೆ'ಯ ಸಂಗದೋಷದಿಂದ ತೀರಿಹೋಗಿದ್ದ ವೇಳೆಯಲ್ಲಿ ಬಾಗುರಾಯಣನು ಮಲಯಕೇತುವಿನೊಡನೆ ಪರಾರಿಯಾಗಿದ್ದಾನೆ. ಇದ್ದ ವಿಷಯವನ್ನು ಸನ್ನಿಧಾನದಲ್ಲಿ ನಿವೇದನೆ ಮಾಡಿದ್ದೇನೆ.

ಚಾಣಕ್ಯ:—ಇನ್ನು ನೀವಿಬ್ಬರೂ ಹೋಗಬಹುದು. ವಿಶೇಷ ಸಮಾಚಾರಗಳನ್ನು ಆದಷ್ಟು ಬೇಗ ತಿಳಿಸುತ್ತಿರಬೇಕು.

ಚಂದ್ರಗುಪ್ತ:—(ವಿಷಾದದ ಧ್ವನಿಯಲ್ಲಿ) ಒಂದೂ ಅರ್ಥವಾಗುತ್ತಿಲ್ಲ. ಬಾಗುರಾಯನು ಅದೇಕೆ ತಲೆಮರೆಯಿಸಿಕೊಂಡು ಹೋದನೋ ಏನು ಕಥೆಯೋ!

ಚಾಣಕ್ಯ:—ನಮ್ಮೋಲೆಯ ಪ್ರಕಾರ ಬಾಗುರಾಯಣನು ಮಲಯಕೇತುವಿನ ದಂಡಿನ ಪಾಳೆಯದ ಪೂರ್ವದಲ್ಲಿ ನಮ್ಮ ಸೈನ್ಯಗಳನ್ನು ನಿಲ್ಲಿಸಿ, ಮಲಯರಾಜನು ಮೃತ್ಯುವಾದ ವಾರ್ತೆಯನ್ನು ಕೇಳಿದ ಅನಂತರ ಮಲಯಕೇತುವಿನೊಡನೆ ನಮ್ಮ ಸೈನ್ಯವು ಈಕ್ಷಣವೆ ಬಿರುಗಾಳಿಯಂತೆ ಮುತ್ತುವುದೆಂದೂ ನಾವಿಬ್ಬರೂ ಈಗ ರಾಜಧಾನಿಗೆ ಹೊರಡಬೇಕೆಂದೂ ಹೇಳಿ ಅವನೊಡನೆ ಹೊರಟು ಹೋಗಿದ್ದಾನೆ.

ಚಂದ್ರಗುಪ್ತ:—(ವ್ಯಸನದಿಂದ) ನಮ್ಮ ಸೈನ್ಯಾಧಿಪತಿ ಬಾಗುರಾಯನು ಇನ್ನು ಬರಲಾರನೆ?

ಚಾಣಕ್ಯ:—ಇನ್ನು ಮಲಯಕೇತುವಿನ ರಾಜ್ಯದಲ್ಲಿದ್ದು ಅಮಾತ್ಯ ರಾಕ್ಷಸನೇನಾದರೂ ಬಂದು ಕುತಂತ್ರವನ್ನು ನಡೆಸಿದರೆ ಅವರಿಬ್ಬರಲ್ಲಿ

ಮನಸ್ತಾಪವನ್ನು ಹುಟ್ಟಿಸಿ, ತಾನು ಮಾತ್ರ ನಂಬಿಕೆಯುವನಂತೆ ನಟಿಸುತ್ತಾ ನಮ್ಮ ಕಾರ್ಯ ಸುಗಮವಾಗುವಂತೆ ಮಾಡುವವನಿದ್ದಾನೆ. ·ಸಂಶಯಾತ್ಮಾ ವಿನಶ್ಯತಿ' ಎಂಬಂತೆ ಈ ವಿಚಾರದಲ್ಲಿ ಎಳ್ಳಷ್ಟೂ ಶಂಕಿಸಬೇಕಾಗಿಲ್ಲ.

ಚಂದ್ರಗುಪ್ತ:—(ಸವೇದನ ಪ್ರೇಶಿತನಾಗಿ) ಪೂಜ್ಯರೇ! ನಿಮ್ಮಂತಹ ತ್ರಿಕಾಲೋಚಿತ ಜ್ಞಾನಿಗಳಿಲ್ಲದಿದ್ದರೆ ನನ್ನ ಕನಸು ನನಸಾಗುತ್ತಿದ್ದಿಲ್ಲ. ಬರಿಯ ಗಾಳಿ ಗೋಪುರವನ್ನು ಕಟ್ಟ ಬೇಕಾಗಿತ್ತು. ಆಃ......ನಿಮ್ಮಂತಹ ಸಚಿವ ರತ್ನರನ್ನು ಹೊಂದಿರುವ ನಾನೇ ಇಂದು ಕೃತಕೃತ್ಯನು.........

ಸಿರಿಗನ್ನಡಂ ಗೆಲ್ಗೆ
ಕನ್ನಡ ತಾಯ್ ಬಾಳ್ಗೆ

ಎಂಬ ನುಡಿಯೊಂದಿಗೆ ಪರದೆ ಬೀಳುತ್ತದೆ. 'ಮುದ್ರಾಮಂಜೂಷ' ದಿಂದ ಆರಿಸಿದ ಕಥಾವಸ್ತುವನ್ನು ನಾಟಕಕರ್ತ ನಾಟಕೀಯ ರೂಪದಲ್ಲಿ ಹೆಣೆದಿದ್ದ. ನಾಟಕದ ವಿದ್ಯುತ್ ಪ್ರಾರಂಭಕ್ಕೆ ಪ್ರೇಕ್ಷಕರು ದಂಗು ಬಡಿದು ನೋಡಿದರು.

"ಇದು ಖರೇವಂದ್ರು ನಾಟಕ ಇದ್ದಗೈತಿ. ಸಂಗೀತ ನಾಟಕದಾಗ ಇದ್ನ ಆಡ್ಬೇಕು. ಬಾಂಬೆ ಫೋಗೆ ಒಪ್ಪೋದಿಲ್ಲ. ನಾವೆಂದೂ ಇಂಥಾದೂ ನೋಡಿದ್ದಿಲ್ಲ" ಎಂದು ಜನಗಳು ಆಡಿಕೊಂಡರು.

'ವಿಷಕನ್ಯೆ'ಯಾಗಿ ಹಂಪಮ್ಮ ಪಾತ್ರವಹಿಸಿದ್ದಳು. ಅವಳ ಪಾತ್ರಕ್ಕೆ ಮಾತಿಲ್ಲದಿದ್ದರೂ ಗಂಭೀರವಾಗಿ ಅಭಿನಯಿಸಿದಳು. ಹಿಂದೆ ಮುಕ್ತಾಬಾಯಿ ಮಾಡುತ್ತಿದ್ದಳು. ಬಿಜಲಿ ಫಾರಸೀ ಉಡುಪಿನಲ್ಲಿ ಬಂದು ಒಂದು ಖುರಾನಿನ ಪದ್ಯ ಹೇಳಿ ಹೋದಳು. ತದನಂತರ 'ಲೈಲಾ-ಮಜನೂ' ಪ್ರಾರಂಭವಾಯಿತು. ಲೈಲಾಳ ಪಾತ್ರದಲ್ಲಿ ಹಂಪಮ್ಮ, ಜುಲೇಖಾ ಪಾತ್ರದಲ್ಲಿ ಪದುಮಾಜಿ ಶೋಭಿಸುತ್ತಿದ್ದರು. ಪ್ರಿಯತಮ ಕಯಾಸ್ ಹೇಳಿದ ಹೊತ್ತಿಗೆ ಬರದಿರಲು ಪ್ರೇಮೋನ್ಮಾದದಿಂದ ಲೈಲಾ ಕನಸು ಮನಸಿನಲ್ಲೂ ನೆನವರಿಸುತ್ತಾಳೆ. ಸಖಿ ಜುಲೇಖಾಳೆದುರಿಗೆ ದುಃಖ ತೋಡಿಕೊಳ್ಳುತ್ತಾಳೆ. ಪ್ರಾಣಸಖಿ ಜುಲೇಖಾ ಮಗುವನ್ನು ಸಂತೈಸುವಂತೆ ಸಂತೈಸುತ್ತಾಳೆ. ಪಕ್ಷಿಯ ಕಾಲಿಗೆ ಕಟ್ಟಿದ ಚೀಟಿಯನ್ನು ನೋಡಿ ಲೈಲಾಳಿಗೆ ಎಲ್ಲಿಲ್ಲದ ಸಂತಸ ಉಬ್ಬಿ ಬರುವುದು. ಆಗ ಪ್ರಾಣನಾಥನು ಹೇಳಿದ ಸ್ಥಳಕ್ಕೆ ಹೊರಡಲು ಧಾವಿಸುವಾಗ "ಇದೇನು ಷಹಜಾದಿ! ಬಟ್ಟೆ ಬರೆ, ಇಲ್ಲದೆ ನಿರಾಭರಣರಾಗಿ ಹೃದ

ಯೇಶ್ವರನ ಬಳಿ ಧಾವಿಸುತ್ತಿದ್ದೀರಲ್ಲ" ಎಂದು ಜುಲೇಖಾ ಪ್ರಶ್ನಿಸಲು "ನನ್ನ ಮೋಹನಾಂಗನೇ ಒಡವೆ. ಆತನ ಬಿಸಿಯಾದ ಬಾಹು ಬಂಧನವೇ ಮುತ್ತಿನಹಾರ. ಆತನ ಕೃಪಕಟಾಕ್ಷವೇ ನನಗೆ ಅಮೃತ. ಬಿಸಿ ಮುತ್ತು ಅಧರರಾಗ" ಎಂದು ಕೈಯಾಸ್ ಬಳಿ ಮಿಲನಾತುರದಿಂದ ಹೋಗುತ್ತಾಳೆ. ಹಾಗೆ ಹೋಗುವಾಗ ಅವಳ ಮುಖದಲ್ಲಿ ನಡೆಯುತ್ತಿದ್ದ ಚೇಷ್ಟೆಗಳು, ಕೆದರಿದ ಕೂದಲು, ಅಸ್ತವ್ಯಸ್ತ ಬಟ್ಟೆಗಳು ನಿಜವಾದ ಲೈಲಾಳೇ ಬಂದಿರುವಂತೆ ಭಾಸವಾಗುತ್ತಿತ್ತು. ಕಯಾಸ್ ಪಾತ್ರವನ್ನು ಉದ್ದನೆಯ ನೀಳ ದೇಹದ ಅಬ್ದುಲ್ ಗಫಾರ್ ಮಾಡಿದ್ದ.

......ಆದರೆ ಲೈಲಾಳ ತಂದೆಗೆ ಇರ್ಬಸಲಾಂ ಮುಖಾಂತರ ಪ್ರಣಯ ವ್ಯವಹಾರ ತಿಳಿಯುತ್ತದೆ. ತನ್ನ ಕಡು ಶತ್ರುವಿನ ಮಗನೊಡನೆ ಸ್ವಂತ ಮಗಳು ಪ್ರೇಮ ಸಂಬಂಧ ನಡೆಸಿರುವುದನ್ನು ಆತ ಹೇಗೆ ಸಹಿಸಿಯಾನು? ಬಸ್ರಾದ ವಂಶಕ್ಕೆ ಪುತ್ರಿ ಕಳಂಕತಂದೊಡ್ಡಿದಳಲ್ಲಾ ಎಂದು ಕುದಿದು ಹೋದ ಸುಲ್ತಾನ್. ಇರ್ಬಸಲಾಂನ ಮಾತಿನಂತೆ ಲೈಲಾಳನ್ನು ಸ್ಥಳ ಪಲ್ಲಟ ಮಾಡುತ್ತಾನೆ. ಕಯಾಸ್ ನಿರ್ದಿಷ್ಟ ಸ್ಥಳಕ್ಕೆ ಬಂದು ಕಾದು ಕಾದು ಬೇಸತ್ತಿರಲು ಕಠೋರ ಸತ್ಯವನ್ನು ಜೈಯೂದ್ ಹೇಳುತ್ತಾನೆ. ವಿರಹ ವೇದನೆಯಿಂದ ಆತ ಮೂರ್ಛೆ ಹೋಗುತ್ತಾನೆ. ಯರ್ಮನ ಸುಲ್ತಾನ್ ಖುದಾನಲ್ಲಿ ತನ್ನ ಪ್ರಾರ್ಥನೆ ಸಲ್ಲಿಸಿ ಬೇಟಾನನ್ನು ರಕ್ಷಿಸಲು ಅನುರೋಧ ಮಾಡಿಕೊಳ್ಳುತ್ತಾನೆ. ಹೌದು! ಇದೀಗ ಕಯೂಸ್‌ನಿಗೆ 'ಮಜನೂ' ಎಂಬ ಬಿರುದು ಬೇರೆ ಬಂದಿದೆ. ಅರ್ಥಾತ್ 'ಪ್ರಣಯೋನ್ಮತ್ತ' ಎಂದು ಕರೆಯುತ್ತಿದ್ದಾರೆ. ತಂದೆ ಬಸ್ರಾನ ಬಳಿ ನಡೆಸಿದ ಸಂಧಾನಗಳು ವಿಫಲಗೊಂಡವು. ಕೊನೆಗೆ ಸಮರ....ಇರ್ಬಸಲಾಂನ ನೆರವು...ಒತ್ತಾಯ ಪೂರ್ವಕವಾಗಿ ಲೈಲಾಳ ಜತೆಗೆ ಇರ್ಬನ ಮದುವೆ......ನೆನೆದಷ್ಟೂ ಘೋರತಾಪ ಮೂಡುವ ಘಟನೆಗಳು ನಡೆದುವು. ಮರುಳುಗಾಡಿನಲ್ಲಿ ಹುಚ್ಚನಾಗಿ ಅಲೆಯುತ್ತಿದ್ದ ಮಜನೂ! ಆತ ತೀರಿ ಹೋದನೆಂದು ಈ ಮುನ್ನ ಇರ್ಬಸಲಾಂ ಸುಳ್ಳು ಸುದ್ದಿ ಹರಡಿಸಿದ್ದ. ಒಂದು ದಿನ ಮಜನೂ ಪಾರಿವಾಳದ ಮೂಲಖೇನ ಸುದ್ದಿ ಕಳಿಸುತ್ತಾನೆ. ಕಾರಂಜಿಯ ಬಳಿ ಮಿಲನವಾಗೆಂದು! ಲೈಲಾ ಹಾತೊರೆಯುತ್ತಾಳೆ. ಹೊರಡಲು ತಡಪಡಿಸುತ್ತಾಳೆ. ಜುಲೇಖಾ ಅಡ್ಡ ಬಂದು ಇದು ಹಾದರದ ಕೆಲಸ, ನೀನು ವಿವಾಹಿತೆ ಎಂದು ಅಡ್ಡಪಡಿಸುತ್ತಾಳೆ. ಕಯೂಸ್ ಸತ್ತು ಹೋದನೆಂಬ ಸುದ್ದಿಯಿಂದ ಮೋಸ ಹೋದೆ

ನೆಂದು ನೊಂದು ಹೋಗುತ್ತಾಳೆ. ಅದೆಷ್ಟು ಹೇಳಿದರೂ ಜುಲೇಖಾ ಕೇಳಲಿಲ್ಲ. ಕಡೆಗೊಮ್ಮೆ ಮೂರ್ಛೆ ಹೋಗುತ್ತಾಳೆ. ಅತ್ತ......

ಕಯೂಸ್ ಗುಲಾಬಿ ಉದ್ಯಾನದ ಬಳಿ ಕಾದು ಕಾದು ಸಾಕಾಗಿರಲು ಜುಲೇಖಾ ಬಂದು ಆದ ಹೃದಯ ಕೊರೆಯುವ ಘಟನೆಗಳನ್ನು ವರದಿ ಮಾಡಿ "ಸಲಾಂ ಖಾಯಿಲೆಯಲ್ಲಿದ್ದಾನೆ. ಆತ ಸತ್ತ ಕೂಡಲೇ ಲೈಲಾ ನಿನ್ನವಳಾಗುತ್ತಾಳೆ. ಯಾವುದಕ್ಕೂ ಸಮಯ ನೋಡಿಕೊಂಡಿದ್ದು ನಾನು ತಿಳಿಸುತ್ತೇನೆ" ಎಂದು ಹೇಳಿದಳು.

ಆತ ಕಾದ......ಮಜನೂ ಉನ್ಮತ್ತ ಮಜನೂ ಪ್ರೇಯಸಿಗಾಗಿ ಕಾದ. ತಿಂಗಳುಗಳುರುಳಿ ವರ್ಷಗಳು ಹೋದವು! ಕಾಲ ಮಿಂಚಿ ಹೋಯಿತು! ಇಬ್ಬರೂ ಕಾಲನ ಚಕ್ರಕ್ಕೆ ಸಿಕ್ಕಿ ಜೀವನ ನಾಟಕ ರಂಗದಿಂದ ಮರೆಯಾದರು...

ಆದರೆ ಗುಲಾಬಿಯ ಉದ್ಯಾವನದಲ್ಲಿ ಪುಷ್ಪಗಳು ವಿಕಸಿತವಾದಾಗ, ಅಲ್ಲಿ ತಂಗಾಳಿ ತೀಡಿದಾಗ, ಚಂದ್ರಿಕೆಯ ಚೆಲುವು ಹರಿದಾಗ ಹೃದಯ ಭೇದಿಸುವ ಮೈ ಪುಳುಕಿಸುವ ಕರೆಯೊಂದು ಕೇಳಿ ಬರುತ್ತಿದೆ. ಲೈಲಾ.... ಲೈಲಾ...ಪ್ರಾಣ ಸಖಿ ಲೈಲಾ"

"ಮಜನೂ.. ಪ್ರಿಯ ಆತ್ಮಾ..ಮಜನೂ..."

ನಾಟಕದ ಈ ಕೊನೆಯ ದೃಶ್ಯ ಎಲ್ಲರ ಕಣ್ಣಿನಲ್ಲೂ ಅಶ್ರು ತರಿಸಿತು. ಹೆಚ್ಚು ಸೀನರಿಗಳೂ ಇರಲಿಲ್ಲ. ಒಂದೆರಡರಲ್ಲಿ ಅವರ ನಾಟಕಗಳು ಸಾಗ ಬೇಕಾಗಿದ್ದುವು. ಗುಲಾಬಿ ಉದ್ಯಾನವನಕ್ಕೆ ಒಂದು ಉದ್ಯಾನವನದ ಪರದೆ ಇಳಿಬಿಟ್ಟು ತಡಸಲು ದೀಪ ಕೊಟ್ಟಿತ್ತು. ಅಲ್ಲಲ್ಲಿ ಹೂ ದಾನಿಗಳನ್ನು ಇಡಲಾಗಿತ್ತು. ಆತನ ಧ್ವನಿಯಲ್ಲಿ ಪ್ರಾರಂಭವಾಗಿ ಆ ಧ್ವನಿಗಳೆರಡು ನಿಧಾನವಾಗಿ ಕರಗಿ ಹೋಗುತ್ತಿದ್ದುವು. ಇವೆಲ್ಲಾ ಪರಿಷ್ಕಾರವಾಗಿ ಆಗು ವಂತೆ ಶಿರಸಪ್ಪ ಕೆಲಸಮಾಡಿದ್ದ. ಅಬ್ದುಲ್ ಗಫಾರ್ ಬಣ್ಣ ಹಚ್ಚುವ ಮುನ್ನ ನಾಲ್ಕು ಬಾಟಲ್ ಬೀರ್ ಹೊಡೆದೇ ಕಾರ್ಯೋನ್ಮುಖನಾಗುತ್ತಿದ್ದ. ಪ್ರಣಯೋನ್ಮಾದದ ಪಾತ್ರ ಬರುವಷ್ಟರ ಹೊತ್ತಿಗೆ ಇನ್ನೆರಡು ಬಾಟಲಿಗಳನ್ನು ಮುಗಿಸಿರುತ್ತಿದ್ದುದರಿಂದ ಇನ್ನೂ ಕಳೆ ಕಟ್ಟುತ್ತಿತ್ತು.

ಎರಡೂ ನಾಟಕಗಳು ತೃಪ್ತಿಕರವಾಗಿ ನಡೆದಿದ್ದುದನ್ನು ಕಂಡು ಜನ ಗಳು ಪ್ರತಿ ದಿನವೂ ನುಗ್ಗುತ್ತಿದ್ದುವು. ಪಕ್ಕದಲ್ಲಿದ್ದ ಜೂಜಿನಾಟಕ್ಕೆ ಯಾರೂ

ಹೋಗುತ್ತಿರಲಿಲ್ಲ ಕಂಟ್ರಾಕ್ಟರ್ ರಾಜಾಸಾಬನಿಗೆ ಖರ್ಚು ಕಳೆದು ನೂರು ರೂಪಾಯಿ ಉಳಿಯುತ್ತಿತ್ತು. ಅದಕ್ಕೆಂದೇ ಸಾವ್ಕಾರ್ ಬಸಪ್ಪನಿಗೆ ಥಿಯೇಟರ್ ಹಣವನ್ನು ಚುಕ್ತಾ ಮಾಡಿಬಿಟ್ಟ.

ವರ್ಷವೆಲ್ಲಾ ಕುಣಿದು ಸಾಕಾಗಿ ಹೋಗಿದ್ದ ಮುಕ್ತಾ, ಪದುಮಾಜಿ, ರೋಶನಾರಾ, ಬಿಜಲಿ, ಹಂಪಮ್ಮನಿಗೆ ನಾಯಕಿಯ ಪಾತ್ರವನ್ನು ವಹಿಸಿ ಕೊಟ್ಟು ಬಿಟ್ಟಿದ್ದರು. ಅವರು ನೃತ್ಯಗಳಲ್ಲಿ ಮಾತ್ರ ಭಾಗವಹಿಸುತ್ತಿದ್ದರು. 'ಘರಮ್-ಮಸಾಲ್' ಏಕಾಂಕದಲ್ಲಿ ಬಿಜಲಿ ನಾಯಕಿಯಾಗುತ್ತಿದ್ದಳು. ಸಹಾಯಕ ಪಾತ್ರಧಾರಿಗಳಾಗಿ ಎಲ್ಲ ಹೆಂಗಸರೂ ಬರುತ್ತಿದ್ದರು. ಗಂಡಸಿನ ಪಾತ್ರವನ್ನು ಹೆಂಗಸರ ಕೈಯಲ್ಲೇ ದಿಗ್ದರ್ಶಕ ಅಲ್ಲಾಸಾಬು ಮಾಡಿಸು ತ್ತಿದ್ದ. ನಮ್ಮ ನಾಟಕಗಳು ಸಂಗೀತ ನಾಟಕ ಮಂಡಳಿಯಲ್ಲಿ ಆಡತಕ್ಕವು ಗಳಿಗಿಂತ ಶ್ರೇಷ್ಠವಾಗಿರಬೇಕೆಂದು ಅವನ ವಾದ.

ಈ ಮಧ್ಯೆ ಹಂಪಮ್ಮ ಹಠ ಹಿಡಿದಳು—

"ನಾನು ಆನೆಪೇಟೆಯಲ್ಲಿ ಇರುವುದಕ್ಕೆ ಒಲ್ಲೆ."

"ಯಾಕೆ? ಚೌಡಮ್ಮ ಏನಾದರೂ ಅಂದಳೆ?" ಎಂದ ಶಿರಸ್ಸಾ.

"ಅವಳು ಏನಂತಾಳೆ. ಸಿಕ್ಕ ಸಿಕ್ಕವರ ಹತ್ತಿರ ಮಲಗಿಕೋ ಅಂತಾಳೆ."

"ಹಾಗಾದರೆ ಆ ಸ್ಥಳ ಬಿಟ್ಟುಬಿಡೋಣ."

"ಬೇರೆ ಎಲ್ಲಿಯಾದರೂ ಖಂಡಿತ ನೋಡಲೇಬೇಕು."

"ಏ! ಎಂಥಾ ಮಾತು. ಈ ನಗರದಲ್ಲಿ ಮನೆಯ ಬಾಡಿಗೆ ಬಹಳ ಹೆಚ್ಚು."

"ಎಲ್ಲಿಯಾದರೂ ಒಂದು ಚಿಕ್ಕದು ನೋಡಿ."

ಶಿರಸಪ್ಪ ನಗರದಲ್ಲಿ ಎಲ್ಲಿ ಸುತ್ತಿದರೂ ಸರಿಯಾದ ಮನೆ ಸಿಕ್ಕಲಿಲ್ಲ. ಬಾಂಬೆ ಷೋಗೆ ಹತ್ತಿರವಿರಬೇಕು, ಚಿಕ್ಕದಿರಬೇಕು, ಬಾಡಿಗೆ ಕಡಮೆ ಇರಬೇಕು. ಇಂಥ ಮನೆಯನ್ನು ಹುಡುಕಾಡಿದ. ನಿರ್ವಾಹವಿಲ್ಲದೆ ಹತ್ತಿರವೇ ಇರುವ ಗುಡಿಸಲುಗಳ ಮಧ್ಯೆ ಚಾಪೆ ಹೆಣೆಸಿ ಗುಡಿಸಲು ಹಾಕಿಸಿದ. ಈಗಲಾದರೋ ಹಂಪಮ್ಮ ಬಾಂಬೆಷೋ ನಟಿ.

"ಇಂಥ ಗುಡಿಸಲಿನಲ್ಲಿ ಹೇಗಿರಲಿ," ಎಂದಳು.

"ನನ್ನ ರಾಣಿ! ಇದು ಸೂಳೆಗೇರಿಗಿಂತ ವಾಸಿ. ಇನ್ನೊಂದು ಮಾತು. ನೋಡು, ಇದು ಬಾಂಬೆ ಷೋ. ಸರಿಯಾಗಿ ಸಂಬಳ ಕೊಡುವುದಿಲ್ಲ.

ಕಲೆಕ್ಷನ್ ನೋಡಿಕೊಂಡು ಅಷ್ಟಷ್ಟೇ ಜಗ್ಗಿಕೊಳ್ಳಬೇಕು. ಇವತ್ತೇ ಖರ್ಚು ಮಾಡಿಬಿಟ್ಟರೆ? ನಾಳೆಯದೂ ನೋಡಿಕೊಳ್ಳಬೇಕು. ಆದಾಯದಲ್ಲಿ ಬುತ್ತಿಯಾಗಿ ನಾಳೆಗೂ ಅಷ್ಟು ಮಿಕ್ಕಿಸಿ ಇಟ್ಟುಕೊಳ್ಳುವುದನ್ನು ಕಲಿಯಬೇಕು. ಹೌದೋ ಅಲ್ಲವೊ?"

"ಮಾತು ಜಾರಿಸುವುದಕ್ಕೆ ನೀವು ಯಾವಾಗಲೂ ಏನೆಲ್ಲ ಹೇಳುತ್ತೀರಿ."

—ಹಾಗೆ ನುಡಿದಿದ್ದರೂ ಆಕೆಗೆ ಶಿರಸಪ್ಪನ ಮಾತು ನಿಜವೆನ್ನಿಸಿತು. ಶರೀರದಲ್ಲಿ ತ್ರಾಣ ಇದ್ದಾಗ ನಾಲ್ಕುಕಾಸು ಕೂಡಿಹಾಕದಿದ್ದರೆ ಬೀದಿಭಿಕಾರಿಯಾಗಬೇಕಾದೀತೆಂದು ನೆನೆದಳು. ಆದರೂ ಅವಳಿಗೆ ತೃಪ್ತಿಯಿತ್ತು. ಆನೆಪೇಟೆಯ ಹಾಗೆ ಈ ಗುಡಿಸಲುಗಳ ಗುಂಪು ವಾರಾಂಗನೆಯರ ಬೀಡಾಗಿರಲಿಲ್ಲ. ಬಡವರು ನೆರಳಿಗಾಗಿ ಹಾಕಿಕೊಂಡ ಗುಡಿಸಲುಗಳು. ಬಾಳಿಗಾಗಿ ಬದುಕಲು ನಿರ್ಮಾಣ ಮಾಡಿಕೊಂಡಿದ್ದ ಗುಡಿಸಲುಗಳು......ಆ ಪುಟ್ಟ ಗುಡಿಸಲುಗಳೇ ಅವರಿಗೆ ಭವ್ಯ ಭವನಗಳು! ಶಯ್ಯಾಗೃಹ, ಅಡುಗೆ ಮನೆ, ಬಚ್ಚಲು ಮನೆ ಎಲ್ಲಾ ಅಲ್ಲಿಯೇ. ರಾತ್ರಿಯಾದ ಕೂಡಲೆ ಸಂತೆಯಂತೆ ಗಜಿಬಿಜಿ ಪ್ರಾರಂಭವಾಗುತ್ತಿತ್ತು. ಹಗಲೆಲ್ಲಾ ದುಡಿದು ಶ್ರಮಹೊಂದಿದ ಕೂಲಿಗಾರರು ಕೂಗಾಡುತ್ತಿದ್ದರು. ಹೆಂಡರು ಮಕ್ಕಳನು ವಿನಾಕಾರಣ ಹೊಡೆಯುತ್ತಿದ್ದರು. ಇಂತಹ ವಾತಾವರಣದಲ್ಲಿ ಹಂಪಮ್ಮ ಹೇಗೋ ಮೂಗು ಮುಚ್ಚಿಕೊಂಡು ವಾಸಮಾಡುವುದನ್ನು ಕಲಿಯಬೇಕಿತ್ತು. ಅವಳಿಗೆ ತಿಂಗಳಿಗೆ ಐವತ್ತು ರೂಪಾಯಿಗಳನ್ನು ಕೊಡಲಾಗುವುದೆಂದು ತಿಳಿಸಲಾಗಿತ್ತು. ಐವತ್ತು ರೂಪಾಯಿಯ ಆದಾಯವಾದರೂ ಎಷ್ಟು ದಿನ? ಬೇಸಿಗೆ ಮುಗಿಯುವ ತನಕ. ಆ ಮೇಲೆ ಮಳೆಗಾಲ. ಬಾಂಬೆಷೋ ನಿಂತುಹೋಗುತ್ತದೆ. ಈಗಲಿಂದಲೇ ಹಿಡಿತ ಮಾಡಬೇಕು—ಎಂದು ಅವಳು ಯೋಚಿಸಿದಳು.

ಒಂದು ದಿನ ಪೇಟೆಗೆ ಹೋದಾಗ ಹಳೆಯ ಗೆಳತಿ ಸಣ್ಣಮ್ಮ ಕಾಣಸಿಕ್ಕಿದಳು. ಆಕೆ ಹಳ್ಳಿಯಿಂದ ತರಕಾರಿ ತರುತ್ತಿದ್ದಳು.

"ಏನೇ ಹಂಪಮ್ಮ ನೀನಿಲ್ಲಿ?"

"ಯಾವಾಗ ಬಂದೆ ಸಣ್ಣಮ್ಮ?"

"ನಾನೇನು ನಿತ್ಯ ಇಲ್ಲೇ ಇರುತ್ತೇನೆ."

"ಬಹಳ ಸಣಕಲು ಆಗಿದ್ದೀಯಲ್ಲ. ಊರತ್ತ ಚೆನ್ನಾಗಿದಾರಾ?"

"ಹೀಗೇ. ಅಲ್ಲವೇ, ಹೇಳದೆ ಕೇಳದೆ ಓಡಿ ಬಂದುಬಿಟ್ಟೆಯಲ್ಲ. ನಿನ್ನ ಗಂಡ ಹುಡುಕಿ ಹುಡುಕಿ ಸಾಕಾಗಿ ಹೋದ. ಆಕೆ ಸಿಕ್ಕಲಿ ಕಡಿದು ಎರಡು ತುಂಡು ಮಾಡಿ ಬಿಡುತ್ತೇನೆಂದ. ಅಲ್ಲಾ ನಮಗೂ ಹೇಳದೆ ಹಾಗೆ ಬಂದೆಯಲ್ಲಾ. ಶಿರಸಪ್ಪ ಚೆಂದಾಗಿ ಇಟ್ಟುಕೊಂಡಿದ್ದಾನಾ? ಏನು ಕೆಲಸ?"

"ಪರವಾಗಿಲ್ಲಕ್ಕಾ. ಕೂಲಿನಾಲಿ ಮಾಡುತ್ತೇನೆ. ಅವರು ವ್ಯಸನ ಹಚ್ಚಿಕೊಂಡಿರಬೇಕು."

"ಯಾರು ನಿಮ್ಮವರೆ! ಅವಸಿಗೇನು ದಾಡಿ! ತಳವಾರ ದುರ್ಗಿ ಇಟ್ಕೊಂಡಿದಾನೆ. ಆಕೆ ನಿಮ್ಮನೆಯೊಳಗೆ ಇದಾಳೆ."

"ಏನೋ! ಆಗಬೇಕಾದ್ದು ಆಗಿಹೋಯಿತು. ಸ್ವಲ್ಪ ಗುಟ್ಟಾಗಿರ ಲೀಂತ ಯಾರಿಗೂ ಹೇಳದೆ ಬಂದೆ."

"ಮನೆ ಎಲ್ಲಿ?"

"ಬಂಬೂ ಬಜಾರದಲ್ಲಿದೆ. ಮಸೀದಿ ಹತ್ತಿರ ಬಂದು ಕೇಳಿದರೆ ಯಾರಾದರೂ ಹೇಳುತ್ತಾರೆ" ಎಂದು ಸುಳ್ಳು ಕಟ್ಟಿದಳು.

"ಪುರುಸೊತ್ತು ಮಾಡಿಕೊಂಡು ಬರುತ್ತೇನೆ."

"ಬಾರಕ್ಕಾ. ಒಂದು ದಿನ ಬಾರಕ್ಕಾ, ಕುಳಿತು ಮಾತನಾಡೋಣ," ಎಂದು ತೊಲಗಿ ಕಾಲು ಹಾಕಿದಳು.

* * * *

ದಿನವೂ ಜನಸಂದಣಿ ತಕ್ಕಮಟ್ಟಿಗೆ ಸೇರುತ್ತಿತ್ತು. ಬಾಂಬೆಷೋ ಆವರಣದೊಳಗೆ ಪ್ರವೇಶ ಮಾಡಲು ಶುಲ್ಕಧನ ಎರಡಾಣೆ ಕೊಡಬೇಕಾಗಿತ್ತು. ಆ ಹಣವೇ ಥಿಯೇಟರಿನ ಖರ್ಚಿಗೆ ಸಾಕಾಗುತ್ತಿತ್ತು. ಒಂದು ತಿಂಗಳ ಕಂಟ್ರ್ರಾಕ್ಟರ್ ರಾಜಾಸಾಬು ಹಂಪಮ್ಮನ ಕೈಲಿ ನೂರು ರೂಪಾಯಿ ಇಟ್ಟ. ಒಂದು ತಿಂಗಳ ಖರ್ಚನ್ನೂ ಈಗಾಗಲೇ ವಹಿಸಿಕೊಂಡಿದ್ದ. ಹಂಪಮ್ಮನಿಗೆ ನ್ಯಾಯವಾದ ಹಣಕ್ಕಿಂತ ಜಾಸ್ತಿ ಸಂದಿತ್ತು.

ಹೀಗೇ ಎರಡು ಮೂರು ತಿಂಗಳು ವೈಭವದಿಂದ ಜಯಭೇರಿ ಹೊಗೆದುವು. ತಬಲಾ ನಿಪುಣ ಹಾಗೂ ದಿಗ್ದರ್ಶಕ ಅಲ್ಲಾಸಾಬು ಹಂಪಮ್ಮನ ಪಾತ್ರಕ್ಕೆ ಮಾರುಹೋಗಿದ್ದ.

ದಿನವೂ ಬಿಸಿಲು ಕಾಯುತ್ತಿತ್ತು. ಇದರಿಂದ ಇವರಿಗೆ ಅನುಕೂಲ ವಾದರೂ ನಗರದ ಹಾಗೂ ಹಳ್ಳಿ ಜನಗಳಿಗೆ ವ್ಯಥೆಯುಂಟಾಯಿತು. ಯುಗಾದಿ ಕಳೆದು ಬಹಳ ದಿನಗಾಳಿಗಿದ್ದುವು. ದಿನವೂ ರಣಬಿಸಿಲು ತಲೆ ಯೊಡೆಯುವಂತೆ ಕಾಯುತ್ತಿತ್ತು.

ಜನ ಮೇಘರಾಜನಲ್ಲಿ ಮೊರೆಯಿಡಲು ಹತ್ತಿದರು. "ಸ್ವಾಮಿ ಎರಡು ಹನಿ ನೀರು ಕೊಡು" ಎಂದು. ಕೊನೆಗೊಮ್ಮೆ 'ಕೊನೆಯ ಆಟ' ಎಂದು ಜಾಹಿರಾತು ಮಾಡಲಾಯಿತು. ಏಕೆಂದರೆ ಮಳೆ ಬೆಳೆ ಇಲ್ಲದೆ ಕಂಗೆಡು ತ್ತಿರುವ ಜನಗಳಿಂದ ಹಣ ಸುಲಿಯಲು ರಾಜಾಸಾಬುವಿಗೆ ಇಷ್ಟವಿರಲಿಲ್ಲ. ಈ ಬಾರಿ 'ಲೈಲಾ-ಮಜನೂ'—'ವಿಷಕನ್ಯೆ'ಯ ಜೋತೆಗೆ 'ನಯಾಫರ್' ಬೇರೆ ಇತ್ತು. ಕೊನೆಯ ಆಟವಾಗಿದ್ದುದರಿಂದ ಜನಸಂದಣಿ ಹೆಚ್ಚಿತ್ತು. ಎಂದಿನಂತೆ ನೃತ್ಯಗಳು ಪ್ರಾರಂಭವಾದುವು. ಸಂಪ್ರದಾಯದಂತೆ ಪ್ರೇಕ್ಷಕರ ಅಶ್ಲೀಲ ಮಾತುಗಳು ನಟಿಯರ ಬಗ್ಗೆ ನಡೆದುವು. ಲೈಲಾಳನ್ನು ಕಯಾಸ್ ಅಪ್ಪಿ ಚುಂಬಿಸುತ್ತಿದ್ದಾಗ "ಗಟ್ಟಿಯಾಗಿ ಗಡಿದೀಯಲಿ" ಎಂದ ಒಬ್ಬ.

"ಲೋ ಕಯೂಸ್! ಲೈಲಾನ ಅಡವೀ ಕಡೆ ಹೊತ್ತುಕೊಂಡು ಹೋಗೋ" ಎಂದ ಇನ್ನೊಬ್ಬ ಉರ್ದುವಿನಲ್ಲಿ. 'ನಯಾ ಫರ್' ನಾಟಕದಲ್ಲೂ ಬಿಜಲಿಗೆ ಅಶ್ಲೀಲ ಮಾತುಗಳ ಸುರಿಮಳೆ ಬಿದ್ದುವು. ಪ್ರತಿಯೊಂದು ನೃತ್ಯಕ್ಕೂ 'ಕುಂಡಿ ಸರಿಯಾಗಿ ಹೊರಳಿಸಿರಿ" "ಏನು ಕುಣಿಯುತ್ತೀರೆ ನೀವು-ಹೆಜ್ಜಿಲ್ಲ ಗೆಜ್ಜಿಲ್ಲ" ಎಂಬ ಕೂಗುಗಳೂ ಆದವು. ಇವೆಲ್ಲಾ ಪ್ರತಿ ನಾಟಕ ಗಳಲ್ಲೂ ಆಗುತ್ತಿದ್ದ ಹಗರಣಗಳು. ಹೊಟ್ಟೆ ಪಾಡಿಗಾಗಿ ಇಂಥ ಮಾತು ಗಳನ್ನು ಅವರು ಸಹಿಸಬೇಕಾಗಿತ್ತು. ಪಾತ್ರಧಾರಿಗಳಿಗೆ ಅವು ಸರ್ವೇ ಸಾಧಾರಣ ಮಾತುಗಳಾಗಿದ್ದುವು. ಹಂಪಮ್ಮನಿಗೆ ಮೊದಲು ನಾಚಿಕೆ, ಅಭಿಮಾನ ಕಾಡಿತಾದರೂ ಬರುಬರುತ್ತಾ ದಡ್ಡು ಬಿದ್ದಿತು; ಹೀಗೆ ಶ್ರಮವಹಿಸಿ ದುಡಿದಳು

ಕೊನೆಯ ದಿನವಾದ್ದರಿಂದ ವಾರದ ಬೇರೆ ದಿನಗಳಿಗಿಂತ ಹೆಚ್ಚು 'ಕಲೆಕ್ಷನ್' ಆಗಿತ್ತು. ಇತ್ತೀಚೆಗೆ ಹೆಚ್ಚು ಜನಗಳು ಸೇರುತ್ತಿದ್ದಿಲ್ಲ. ಇಂದಿನ 'ಕಲೆಕ್ಷನ್' ನೋಡಿ ರಾಜಾಸಾಬುವಿಗೆ ಎದೆಯುಬ್ಬಿ ಹೋಯಿತು. ಎಲ್ಲರಿಗೂ ಮಾರನೆಯ ದಿನ ಎರಡು ನೂರು ರೂಪಾಯಿಯಷ್ಟು ಹಣ ಕೊಟ್ಟು ತಾತ್ಕಾಲಿಕವಾಗಿ ಕಂಪೆನಿ ನಿಲ್ಲಿಸಿದ. ಕಂಪೆನಿಗೆ ಸಹಾಯಕನಾಗಿದ್ದ ಶಿರಸಪ್ಪನಿಗೂ ಸಾಕಷ್ಟು ಸಂಭಾವನೆ ತೆತ್ತ.

ಹಂಪಮ್ಮ ಕೆಲವು ದಿನಗಳು ಹಾಯಾಗಿ ವಿಶ್ರಾಂತಿ ತೆಗೆದುಕೊಂಡಳು. ದಿನದಿನಕ್ಕೂ ಹಣ ಕರಗುತ್ತಿತ್ತು. ಎಲ್ಲರ ಮುಖಗಳು ಒಣಗಿದ ನಿಂಬೆ ಹಣ್ಣಿನಂತೆ ಕಾಣುತ್ತಿದ್ದುವು. ಯಾರಿಗೂ ಸಂತಸವಿಲ್ಲ. ಮಳೆ ಇಲ್ಲ ಬೆಳೆ ಇಲ್ಲ. ಶಿರಸಪ್ಪ ದಿನಗೂಲಿಗೆ ಹೋಗುತ್ತಿದ್ದ. ವಾರದಲ್ಲಿ ಮೂರು ದಿನಗಳು ಕೂಲಿ ಸಿಕ್ಕರೆ ಹೆಚ್ಚು. ಆರ್ಥಿಕ ಮುಗ್ಗಟ್ಟಿನಿಂದಾಗಿ ಬಿಜಲಿ ತಾನಿದ್ದ ಬಾಡಿಗೆ ಮನೆಬಿಟ್ಟು ಗುಡಿಸಿಲುಗಳ ರಾಜ್ಯಕ್ಕೆ (!) ದಯಮಾಡಿಸಿದಳು. ತುಟ್ಟೀ ಬಾಡಿಗೆಯನ್ನು ಈ ವಾತಾವರಣದಲ್ಲಿ ತೆರಲು ಸಾಧ್ಯವಾಗಲಿಲ್ಲವಂತೆ.

"ಹೇಗೆ ಮಾಡಲಿ ಇನ್ನು. ನನಗೊಂದು ಕೆಲಸವಾದರೂ ನೋಡಿ,"

ಎಂದು ನಿಟ್ಟುಸಿರು ಬಿಡುತ್ತಿದ್ದಳು ಹಂಪಮ್ಮ.

" ಈ ಬರಗಾಲದಲ್ಲಿ ಎಲ್ಲಿ ಸಿಕ್ಕುತ್ತೆ?" ಎನ್ನುತ್ತಿದ್ದ.

"ನೀವಾದರೂ ನೋಡಿರಿ ಬಿಜಲಿ, ಚೌಡಿ," ಎಂದು ಕಾಡುತ್ತಿದ್ದಳು.

"ನೋಡೋಣ, ನೋಡೋಣ" ಎನ್ನುತ್ತಿದ್ದರು ಅವರು.

ದಿನ ದಿನಕ್ಕೂ ಪರಿಸ್ಥಿತಿ ಹದಗೆಟ್ಟು ಹೋಗುತ್ತಿತ್ತು. ಎಲ್ಲಿ ನೋಡಿದರೂ ಜನಗಳು ವ್ಯಥೆ ಹೊತ್ತುಕೊಂಡು ಹೋಗುತ್ತಿದ್ದರು. ದಿನದ ಗ್ರಾಸ ಒದಗಿಸುವುದು ಕಷ್ಟವಾಗ ಹತ್ತಿತು. ಒಂದು ದಿನ ಬಿಜಲಿ ಮಧ್ಯಾಹ್ನ ಊಟಮಾಡಿ ಕುಳಿತಾಗ ಹೇಳಿದಳು: ನೀನು ಪುಟ್ಟಿ ಹೊತ್ತುಕೊಂಡಿರುವೆಯಲ್ಲೇ!"

— ಮಾರ್ಮಿಕ ಮಾತು ಮೊದಲು ಅರ್ಥವಾಗದಿದ್ದರೂ ಕೊನೆಗೆ ಅರ್ಥವಾಯಿತು. ಸಂತೋಷ, ದುಃಖ ಎರಡು ಒಮ್ಮೆಗೆ ಬಂದು ಮುತ್ತಿದುವು. ಹಾಗಾದರೆ ತಾನು ತಾಯಿಯಾಗುವವಳು. ತಾನು ಬಸುರಿ!

ಶಿರಸಪ್ಪನೆದುರಿಗೆ ಪ್ರಸ್ತುತ ವಿಷಯ ಹೇಳಿದಾಗ ಆತ ನಗೆಯಾಡಿದ: "ನಾನು ಮಕ್ಕಳಿಲ್ಲದೇ ಕೊರಗುತ್ತಿದ್ದ. ಅದು ಈಗ ತುಂಬಿ ಬಂದಂತಾಯಿತು." ಹೃತ್ಪೂರ್ವಕ ಹೇಳಿದ್ದನೋ. ಔಪಚಾರಿಕವಾಗಿ ಹೇಳಿದ್ದನೋ ತಿಳಿಯದು.

"ಕಾಳು ಕಡ್ಡಿ ಸಿಕ್ಕೋದೆ ಕಷ್ಟವಾಗಿದೆ. ರೂಪಾಯಿಗೆ ಒಂದು ಸೇರು ರಾಗಿಯೂ ಸಿಕ್ಕುವಂತಿಲ್ಲ. ಇಂಥಾ ಹೊತ್ತಿನಲ್ಲೂ ನಮಗೆ ಮಕ್ಕಳು."

"ಹಂಪಿ, ಯೋಚನೆ ಮಾಡಬೇಡ. ಹುಟ್ಟಿಸಿದ ದೇವರು ಹುಲ್ಲು ಮೇಯಿಸುವುದಿಲ್ಲ." ಇಂಥ ಜಾಣ್ಮೆಯೇ ಶಿರಸಪ್ಪನನ್ನು ಅನೇಕ ಸನ್ನಿವೇಶ

ದಲ್ಲಿ ಉಳಿಸಿತ್ತು. ಮಾತಿನ ಚೌಕಚಕ್ಯತೆಯಿಂದ ಜಾರಿಕೊಳ್ಳುವುದು ಅವನಿಗೆ ಹುಟ್ಟಿನಿಂದ ಬಂದ ಗುಣ.

ಇತ್ತೀಚೆಗೆ ಸುತ್ತಮುತ್ತಲಿನ ಸಂಸಾರಗಳು ಹೇಗೊ ತಮ್ಮ ಹೊಟ್ಟೆ ಸಾಗಿಸುತ್ತಿದ್ದವು. ಬಿಜಲಿಯ ಉಪಪತಿಗಳೆಲ್ಲಾ ದೂರವಾಗಿದ್ದರು. ಬಾಂಬೆಷೋ ಇತ್ತೋ ಇಲ್ಲವೋ ಎನ್ನುವ ಹಾಗೆ ಮಾಯವಾಗಿತ್ತು. ಚೌಡಮ್ಮ ಆಗಾಗ ಬಂದು ತನ್ನ ದುಃಖ ತೋಡಿಕೊಂಡು ಹೋಗುತ್ತಿದ್ದಳು. ಆದರೆ ಬಿಜಲಿ ಹೇಗೆ ತನ್ನ ಹೊಟ್ಟೆ ಸಾಗಿಸುತ್ತಾಳೆ ಎಂಬುದು ಹಂಪಮ್ಮನಿಗೆ ಸೋಜಿಗವಾಗಿ ಹೋಗಿತ್ತು. ಈ ಅಂಶವನ್ನು ಚೌಡಮ್ಮನ ಕೂಡ ಪ್ರಸ್ತಾಪಿಸಿದಾಗ ಆಕೆ ಹೇಳಿದ್ದಳು:

"ಆಕೆ ಮಾರ್ಕೆಟ್ ಹತ್ತಿರ ಟಾಂಗಾ ನಿಲ್ದಾಣ ಇಲ್ವೆ, ಅಲ್ಲಿ ಹೋಗುತ್ತಾಳೆ. ಟಾಂಗಾದವರಿಗೂ, ಬೀದಿ ಕೂಲಿಯವರಿಗೂ ವ್ಯೈಮಾರಿ ಕೊಳ್ಳುತ್ತಾಳೆ."

"ಹೌದಕ್ಕಾ ನನಗೆ ಸೋಜಿಗ ಆಗಿತ್ತು. ರಾತ್ರಿಯೂ ಆಕೆ ಬರುವುದಿಲ್ಲ."

ರಸ್ತೆ ರಸ್ತೆ ಗಲ್ಲಿ ಗಲ್ಲಿ ತಿರುಗುತ್ತಾಳೆ."

ಒಂದು ದಿನ ಶಿರಸಪ್ಪ-ಚೌಡಮ್ಮ ಮಾರುಕಟ್ಟೆಯ ಬಳಿಹಾಯ್ದು ಬರುವಾಗ ಬಿಜಲಿ ಟಾಂಗಾದ ಒಳಗೆ ಕುಳಿತು ಯಾರೊಡನೆಯೋ ಮಾತಾಡುವುದು ಕಂಡು ಬಂದಿತು. ಕುದುರೆಗೆ ಹುಲ್ಲು ಮೇಯಲು ಹಾಕಿ ಚಾಲಕ ಎಲ್ಲಿಗೋ ಹೋಗಿರಲಿಕ್ಕೆ ಸಾಕು. ಇನ್ನೊಂದು ದಿನ ರಾತ್ರಿ ಹತ್ತು ಘಂಟೆಯ ಹೊತ್ತಿನಲ್ಲಿ ಲಾರಿಗಳ ನಿಲ್ದಾಣದಲ್ಲಿದ್ದಳು.

ಹೊಟ್ಟೆಪಾಡಿಗೆ ಏನಾದರೂ ಮಾಡಬೇಕಾಗುತ್ತದೆ, ಹಂಪಿ," ಎಂದಿದ್ದ ಶಿರಸಾ.

"ಮತ್ತೆ ಹೌದು!" ಎಂದಿದ್ದಳು ಹಂಪಮ್ಮ. ಬಿಜಲಿಯ ನಡತೆಯಲ್ಲಿ ಯಾರಿಗೂ ಆಶ್ಚರ್ಯವೇನೂ ಕಾಣಲಿಲ್ಲ. ಯಾರು ಶುದ್ಧರಾಗಿದ್ದರಲ್ಲ? ಆ ಬಡ ಸಂಸಾರಗಳ ಪೈಕಿ ಎಲ್ಲ ಹೆಂಗಸರು ಸಚ್ಚರಿತ್ರರು ಎಂದು ಹೇಳಿಕೊಳ್ಳುವಂತಿರಲಿಲ್ಲ. ಇಂತಹ ವಿಚಾರ, ನೀತಿಗೆ ಆಶ್ಚರ್ಯಪಡುವಂತಿರಲಿಲ್ಲ. ಒಂದೊಂದುಗುಡಿಸಿಲಿನ ಬಡ ಸಂಸಾರದಕಥೆ ತೆಗೆದುಕೊಂಡು ಯಾರಾದರೂ ನಾಟಕ ಬರೆದರೆ ಉತ್ತಮ ಕಥೆಯಾಗಬಲ್ಲುದು. ಅದನ್ನು ಬಾಂಬೆಷೋದಲ್ಲಿ ಕೂಡ ಆಡಬಹುದೆಂದು ಆಕೆ ನೆನೆದಳು.

ಪುನಃ ಅನೇಕ ದಿನಗಳು ಸಂದವು. ಮಳೆ ಇಲ್ಲದೆ ಬರಗಾಲ ತನ್ನ ರುದ್ರ ನೃತ್ಯವನ್ನು ಪ್ರಾರಂಭಿಸಿತ್ತು. ಕುಡಿಯಲು ನೀರಿಲ್ಲ; ತಿನ್ನಲು ಹಿಡಿ ಕಾಳಿಲ್ಲ; ಹೊದೆಯಲು ಚಿಂದಿ ಬಟ್ಟೆಯೂ ಇಲ್ಲ. ಎಲ್ಲಿ ನೋಡಿದರೂ ಹಾಹಾಕಾರ! ಕಳವು ಸುಲಿಗೆಗಳು ಪ್ರಾರಂಭವಾಗಿದ್ದುವು. ಸರಕಾರ ಇದ್ದೆಡೆಯಿಂದ ತಂದು ಒದಗಿಸಿ ಸಾಕಾಗಿ ಹೋಗಿತ್ತು. ಜನತೆ ಮೋಡದ ತುಂಡೆಲ್ಲಿಯಾದರೂ ಕಂಡೀತೆ—ಎಂದು ಆಶಾವಾದಿಗಳಾಗಿ ಆಕಾಶ ನೋಡ್ತು ತ್ತಿದ್ದರು. ಕೆರೆ ಬತ್ತಿ ಹೋಗಿದ್ದರಿಂದ ನಗರದ ನಳ್ಳಿಗಳಲ್ಲಿ ನೀರು ಬರುತ್ತಿರ ಲಿಲ್ಲ. ದಿನ ಒಂದು ಘಂಟೆ ನೀರನ್ನು ಒದಗಿಸುವುದು ಭೂಮಿ ಆಕಾಶ ಸೇರಿಸುವಂತಿತ್ತು. ಬಾವಿಗಳಲ್ಲಿ ನೀರು ಒಣಗಿ ತಳಕಾಣಿಸುತ್ತಿತ್ತು. ದನಗಳು ಅಲ್ಲಲ್ಲಿ ಸತ್ತು ಬಿದ್ದಿರುತ್ತಿದ್ದುವು. ಒಂದು ಊರಲ್ಲ, ಜಿಲ್ಲೆಯಲ್ಲ, ಇಡೀ ದೇಶಕ್ಕೆ ಬರಗಾಲದ ಪಿಡಗು ಬಡಿದುಕೊಂಡಿತ್ತು. ಬಿಜಲಿ ರೋಗ ಹಚ್ಚಿ ಕೊಂಡು "ಉರಿಉರಿ" ಎಂದು ಕೂಗುತ್ತಿದ್ದಳು. ನಾಟಕದ ಚಮನ್‌ಸಾಬು, ಅಲ್ಲಾಸಾಬು, ಬಸಪ್ಪ, ಪದುಮಾಜಿ, ರೋಶನಾರಾ ಮುಂತಾದವರು ಎಲ್ಲಿ ಇದ್ದಾರೆಂಬುದೂ ತಿಳಿಯದು. ಯಾರ ಸಹಾಯವೂ ಸಿಕ್ಕುವಂತಿರಲಿಲ್ಲ. ಬಹಳನಾಡಿ ನಿರೀಕ್ಷಣೆ ಮಾಡುವಂತಿರಲಿಲ್ಲ. ಇಂಥ ದುರವಸ್ಥೆಯಲ್ಲಿ ಹಂಪಮ್ಮ ಅವಳಿ ಮಕ್ಕಳನ್ನು ಹೆತ್ತಳು! ಎರಡೂ ಹೆಣ್ಣು ಶಿಶುಗಳು. ಸುಂದರವಾಗಿದ್ದರೂ ಕಂದಿದ್ದುವು! ಚೌಡಮ್ಮನೇ ಸೂಲಗಿತ್ತಿಯಾಗಿ ನಾಲ್ಕು ದಿನ ಕೆಲಸ ಮಾಡಿದಳು.

*　　*　　*　　*

ಶಿರಸಪ್ಪ ಅವಳಿ ಮಕ್ಕಳು ಜನನವಾದ ಮೇಲೆ ಒಂದು ವಾರ ಸಂತೋ ಷವಾಗಿದ್ದ. ಹಂಪಮ್ಮನಿಗೆ ಅವಳಿ ಮಕ್ಕಳು ಹುಟ್ಟಿದ್ದು ತನ್ನ ಪುಣ್ಯವೆಂದು ಹೇಳಿದ. ನಾಲ್ಕು ದಿನ ಕಷ್ಟಪಟ್ಟು ಸಾಮಾನು ತಂದು ಹಾಕಿದ. ಚಿಕ್ಕ ಕೂಸುಗಳೆರಡಕ್ಕೆ ಬಟ್ಟೆ ಹೊಲಿಸಿದ. ಚೌಡಮ್ಮನಿಗೆ ಕಣ, ಹಂಪಮ್ಮನಿಗೆ ಸೀರೆ ತಂದಿತ್ತ. ಕೊನೆಗೊಂದು ದಿನ ಚೌಡಮ್ಮನ ಕೈಲಿ ಸಿಹಿ ಅಡುಗೆ ಯನ್ನೂ ಸಹ ಮಾಡಿಸಿದ. ಒಂದು ದಿನ ಕೂಲಿಗಾಗಿ ಹೋದವನು ಬರಲೇ ಇಲ್ಲ!

"ಅಕ್ಕಾ ನನ್ನ ಪರದೇಶಿ ಮಾಡಿ ಶಿರಸಾ ಹೋದ. ಹೇಗಕ್ಕಾ ಇನ್ನು?"

"ಯಾವುದೋ ಕೆಲಸದ ಮೇಲೆ ಹೋಗಿದ್ದಾನು, ಬರುತ್ತಾನೆ ಬಿಡೆ."

"ನನಗೆ ದುಡಿದು ಹಾಕಲಾರದೆ ಹೋಗಿದ್ದಾರಕ್ಕ. ನನ್ನ ಹಣೆ ಬರಹದಲ್ಲಿ ಇನ್ನೂ ಏನೆಲ್ಲ ಬರೆದಿದೆಯೋ."

"ನೋಡು ಬರಗಾಲ ಬಂದಿಲ್ಲದಿದ್ದರೆ ನಾನು ಸಂತೋಷವಾಗಿ ಸಾಕುತ್ತಿದ್ದೆ. ಆದರೇನು ಮಾಡೋದಮ್ಮ. ಬಡವರಾಗಿ ಹುಟ್ಟಬಾರದು."

"ಹೌದಕ್ಕಾ ಹೌದು. ನಾಯಿ ಜನ್ಮವಾದರೂ ಬೇಕು. ಬಡವರ ಜನ್ಮ ಬೇಡ. ಎಂಥ ನರಕ ಅನುಭವಿಸಬೇಕು."

"ಈ ವಯಸ್ಸಿಗೆ ಅನುಭವಿಸಬಾರದ್ದನ್ನೆಲ್ಲಾ ಅನುಭವಿಸಿದೆ. ಇನ್ನೇನು ಉಳಿದಿಲ್ಲ ಹಂಪಮ್ಮ. ಮತ್ತೆ ನಂದೇನು, ಸಾಯುವುದೊಂದು ಉಳಿದಿದೆ."

"ಅಕ್ಕಾ ಅವನು ಬಂದಾನಂತೀಯಾ?"

"ಬರುತ್ತಾನೆ ಬಿಡೆ—ಇವತ್ತಲ್ಲ ನಾಳೆ."

—ದಿನಗಳ ಮೇಲೆ ದಿನಗಳು ಹೋದವು. 'ಶಿರಸಾ, ಶಿರಸಾ' ಎಂದು ಹಂಪಮ್ಮ ನಿದ್ದೆಯಲ್ಲೂ ಬಡಬಡಿಸುತ್ತಿದ್ದಳು. ಶಿರಸಪ್ಪ ಬರುವ ಚಿಹ್ನೆ ಕಂಡು ಬರಲಿಲ್ಲ. ಚೌಡಮ್ಮ ಗಮನ ತೆಗೆದುಕೊಂಡು ನಗರದ ಪ್ರತಿಯೊಂದು ಸ್ಥಳಗಳನ್ನು ಹುಡುಕಿದಳು. ಗಿಡ್ಡನೆಯ ಕೆಂಪು ಬಣ್ಣದ ಮನುಷ್ಯರ ಸುಳಿವು ಕಂಡರೆ ಸಾಕು ಚೌಡಮ್ಮ ಕಣ್ಣು ಕಸಿದು ನೋಡುತ್ತಿದ್ದಳು. ಆದರೆ ಶಿರಸನ ಸುಳಿವು ಸಿಕ್ಕಲಿಲ್ಲ. ಆತ ಬರಲೇ ಇಲ್ಲ.

ಸಂಸಾರದ ಖರ್ಚಿಗಾಗಿ ಹಂಪಮ್ಮ ಚಿಕ್ಕಪುಟ್ಟ ಬೆಳ್ಳಿಯ ಸಾಮಾನುಗಳನ್ನು ಮಾರಿಸಿದಳು. ಗುಡಿಸಲಿನಲ್ಲಿದ್ದ ಕೆಲವು ಬೆಲೆಬಾಳುವ ವಸ್ತುಗಳೂ ಗಿರವಿ ಅಂಗಡಿಯನ್ನು ಸೇರಿದುವು.

ಒಂದು ಆದಿತ್ಯವಾರ ಚೌಡಮ್ಮ 'ಏನು ನಿರ್ಧಾರ ಮಾಡಿದೆ' ಎಂದು ಕೇಳಿಕೊಂಡೇ ಬಂದಳು. ಹಂಪಮ್ಮ ಶುಷ್ಕ ಮನಸ್ಕಳಾಗಿ ಹೇಳಿದಳು.

"ಅಕ್ಕಾ ಹೊಟ್ಟೆಯೊಳಗಿನ ಮಕ್ಕಳನ್ನು ಹೇಗಕ್ಕಾ ಮಾರಿಕೊಂಡು ಹೊಟ್ಟೆ ಹೊರೆಯೋದು."

"ನಿನ್ನಿಷ್ಟ ಹಂಪಮ್ಮ. ತೊಲೆ ತುಂಡಿನಂಥಾ ಮಕ್ಕಳನ್ನು ಸಾಕಿಕೊ. ವಿಷ ಕುಡಿಯುತ್ತೇನೆ ಎಂದರೂ ಮೂರು ಕಾಸಿಲ್ಲ. ನಿನ್ನ ಪ್ರೇಮ ಮಕ್ಕಳ ಬಗೆಗೆ ಬಹಳ!

"ಹಾಗಾದರೆ ಮಾರು ಅನ್ನುತೀಯಾ."

"ನಿನ್ನಿಷ್ಟ ಕಣೇ."

"ಯೋಚನೆ ಮಾಡಿ ಹೇಳುತ್ತಾ ಇದ್ದೇನೆ. ಅಕ್ಕಾ ನನಗೆ ಅವಳಿ ಜವಳಿ ಮಕ್ಕಳನ್ನು ಮಾರಲು ಇಷ್ಟವಿಲ್ಲ."

"ಹಾಗಾದರೆ ಸಂಸಾರ ನಿರ್ವಹಣೆ ಹೇಗೆ ಮಾಡುತ್ತಿಯೆ. ಒಂದು ದಿನ ಹೊಟ್ಟೆಗಿಲ್ಲದೆ ಭಿಕಾರಿಯಾಗಬೇಕಾದೀತು. ಬೀದಿ ಪಾಲಾಗಿ ಸಾಯಬೇಕಾದೀತು. ಸರಿಯಾದ ವೇಳೆಯಲ್ಲಿ ಎಚ್ಚರಿಸುತ್ತ ಇದ್ದೇನೆ.

"ಹಾಗೆನ್ನ ಬೇಡಕ್ಕ."

"ಸಿಟ್ಟು ಬಂತಲ್ಲಾ. ಪಾಪ! ಇನ್ನೊಬ್ಬರ ಮಕ್ಕಳನ್ನು ಮಾರಿಸುವುದಕ್ಕೆ ನಾನು ಯಾಕೆ ಒತ್ತಾಯ ಮಾಡಲಿ. ನಿನ್ನಿಷ್ಟ ತಾಯಿ. ತಿನ್ನು ಅದೇನು ತಿನ್ನುತ್ತಿಯೊ. ಇನ್ನೂ ಬಾಣಂತಿ ಹೊರಗೆ ಹೋಗುವಂತಿಲ್ಲ. ಶಿರಸಾ ಸತ್ಯವಾಗಿಯೂ ಬರುವುದಿಲ್ಲ.

"ಯೋಚನೆ ಮಾಡಿ ಯಾವುದಕ್ಕೂ ಹೇಳುತ್ತೇನೆ."

"ಹಾಗೆ ಮಾಡು."

ಅಂದು ರಾತ್ರಿ ತಲೆಕೆಟ್ಟು ಹುಳಿಯಾಗುವ ತನಕ ಯೋಚಿಸಿದಳು. ತನ್ನ ಹೊಟ್ಟೆಯೊಳಗಿನ ಮಕ್ಕಳನ್ನು ಅಲ್ಪ ಧನಕ್ಕಾಗಿ ಮಾರುವುದೇ ಬೇಡವೆ? ಶಿರಸಪ್ಪನಂತೂ ಬರುವಂತಿಲ್ಲ. ಮಳೆ ಬೆಳೆಯಾಗಿ ಸುಖ ಸಮೃದ್ಧಿಗಳು ಬರುವುದೆಂದೋ. ಮೇಘರಾಜನನ್ನು ಕುರಿತು ಯಾಗಗಳೇನೋ ಆಗುತ್ತಾ ಇವೆ. ಅವು ಸಫಲ ಸಿದ್ಧವಾಗುತ್ತವೆ ಎಂದು ಯಾವ ಭರವಸೆ. ಮಾರುವುದೇ ಬೇಡವೇ......

ಅವಳು ಪುನಃ ಹಾಸಿಗೆಯಲ್ಲಿ ಹೊರಳಾಡುತ್ತಾ ಯೋಚಿಸಿದಳು. ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮನುಷ್ಯರಿಂದ ಹಿಡಿದು ಪಶುಗಳ ವರೆಗೆ ಅನ್ನದ ಅಭಾವದಿಂದ ತೀರಿಹೋದ ಕರುಣಾಮಯ ಕಥೆಗಳು ಬೇಡವೆಂದರೂ ಕಿವಿಯ ಮೇಲೆ ಬೀಳುತ್ತಿದ್ದುವು. ದೂರದ ಮಾತೇಕೆ ತನ್ನ ಸುತ್ತುಮುತ್ತಲಿನ ವಾತಾವರಣವೇ ಅದಕ್ಕೆ ಸಜೀವ ಸಾಕ್ಷಿ. ಹಿಂದಿನ ದಿನ ಪಕ್ಕದಲ್ಲಿ ನಡೆದಿದ್ದ ಘಟನೆಯೊಂದು ಸ್ಮೃತಿಗೆ ಬಂದು ತೀರ ಯೋಚನೆಗೆ ಇಳಿಸಿತು. ಶವದ ದುಡಿಮೆ! ಶವವೂ ಕೂಡ ಇಲ್ಲಿ ಹಾಯಾಗಿ ಮಣ್ಣಾಗುವಂತಿಲ್ಲ. ಅದೂ ದುಡಿಯಬೇಕು! ಪರದೇಶಿಗಳಂತೂ ತಿಪ್ಪೆಗೆ ಬೀಳಬೇಕು. ಅಂತೂ ಆ ಘಟನೆ! ಶವದ ದುಡಿಮೆ!......

ತಮ್ಮ ಗುಡಿಸಲು ರಾಜ್ಯಗಳಿಗೆ ಹೊಂದಿಕೊಂಡ ಮೈದಾನ! ಅವರದೂ ಒಂದು ಸಂಸಾರವೇ!......ಒಂದೆರಡು ಪಾತ್ರೆಗಳು, ತಂಬಿಗೆ, ಹಾಸಿಕೊಂಡು ಹೊದೆಯಲು ಒಂದೆರಡು ತುಂಡು ಬಟ್ಟೆಗಳು. ಆದರೂ ಆನಂದವಾಗಿದ್ದಾರೆ. ಸಂಸಾರದಲ್ಲಿ ಸುಖವಾಗಿ ಜೀವನ ಕಳೆಯುತ್ತಿರುವ ಶ್ರೀಮಂತರು ಈ ಸ್ಥಿತಿಯಲ್ಲಿದ್ದರೂ ಆನಂದವಾಗಿದ್ದಾರಲ್ಲಾ ಎಂದು ಪರಿಹಾಸ ಮಾಡಿ ನಗಲೆಂದೊ–ಏನೋ —

'ಆಜ್ ಹಸೆಕಲ್ ರುಲಾನ ದೇನ......' ಒಬ್ಬ ರಾಗವಾಗಿ ಹಾಡುತ್ತಿದ್ದಾನೆ. ಇನ್ನೊಂದು ಪಕ್ಕದಲ್ಲಿ ಭಿಕ್ಷುಕರ ಮಕ್ಕಳು ಆಟವಾಡುತ್ತಿದ್ದಾರೆ. ಪ್ರಪಂಚ ಅದೆಷ್ಟು ಸುಖಮಯವಾಗಿದೆ ಎಂಬ ಭಂಗಿಯಲ್ಲಿ ಇನ್ನೊಬ್ಬ ಕುಂಟ ಅಂಗತ್ತ ಮಲಗಿಕೊಂಡು ಆಕಾಶವನ್ನು ದೃಷ್ಟಿಸುತ್ತಿದ್ದಾನೆ. 'ಖಾರ...... ಒಡೆ......ದೋಸೆ......ಚಹ' ಎಂದು ಮಾರಾಟಗಾರ ಕೂಗಿ ಕರೆಯುತ್ತಿದ್ದಾನೆ. ಆತ ಮಾತ್ರ ಭಿಕ್ಷುಕ ಸಂಸಾರಕ್ಕೆ ಸಂಬಂಧಪಟ್ಟವನಲ್ಲ. ದಿನಕ್ಕೆ ಎರಡು ಹೊತ್ತು ಅಲ್ಲಿ ವ್ಯಾಪಾರ ಮಾಡಲು ಬರುತ್ತಾನೆ. ಚಿಕ್ಕ ಅಗ್ಗಿಷ್ಟಿಕೆಯಲ್ಲಿ ಕೆಂಡ ಹಾಕಿಕೊಂಡು ಒಂದು ಚಹವನ್ನು ಬಿಸಿಯಾಗಿಟ್ಟುಕೊಂಡು "ಬಿಲ್ಲಿಗೆ ಚಹ......ಬಿಲ್ಲಿಗೆ ಖಾರ" ಎಂದು ಕಿರಿಚಿಕೊಳ್ಳುತ್ತಾನೆ. ಭಿಕ್ಷಾಟನೆಯಿಂದ ಬಂದ ದುಡ್ಡಿನಿಂದ ಜೊಲ್ಲು ಸುರಿಸುತ್ತಾ ಬಂದು, ಕೊಳೆ ಕೈಯಲ್ಲೇ ದೋಸೆಯನ್ನೋ ಖಾರವನ್ನೋ ತಿಂದು ಮೇಲೆ ಚಹ ಕುಡಿದು ಹೋಗುತ್ತಾರೆ. ಭಿಕ್ಷುಕರ ಪ್ರಪಂಚದಲ್ಲಿ ಫಲಹಾರ ಎಷ್ಟು ಕಡಮೆ ಬೆಲೆಗೆ ಸಿಕ್ಕುತ್ತದೆ!......

ಇಂತಹ ಒಂದು ವಾತಾವರಣದಲ್ಲಿ ಒಂದೆಡೆ ಕಾಯಿಲೆಯಿಂದ ನರಳುವಿಕೆಯ ಧ್ವನಿ ಕೇಳಿ ಬರುತ್ತದೆ. ನರಳುವ ವ್ಯಕ್ತಿ ಗಂಡಸು.

"ಹಾಗೇ ಸುಮ್ಮನೆ ಮಲಗಿಕೊ. ಏಕೆ ನರಳುತ್ತೀಯೆ."

—ಹೀಗೆಲ್ಲ ಸಮಾಧಾನಪಡಿಸುವವಳು ಆತನನ್ನು ತರುಣಾವಸ್ಥೆಯಿಂದ ನೆಚ್ಚಿಕೊಂಡು ಬಾಳಿಗೆ ಆಸರವಾಗಿದ್ದ ಅಂಬಾಡಿ. ಪೂರ್ಣ ಹೆಸರು ಅಂಬಾಡಮ್ಮ. ಪ್ರೇಮಿಸಿದವನ ಬಾಯಿಯಿಂದ ಆ ಹೆಸರು ವಿರೂಪಗೊಂಡಿತ್ತು. ವಿರೂಪಗೊಂಡಿದ್ದರೂ ಆತನಿಗೆ ಅದೆಷ್ಟು ಸಿಹಿಯಾಗಿತ್ತು....

ಅವರು ಉಪ್ಪಯಣಿಸಿದ್ದ ಮೈದಾನದ ಪಕ್ಕದಲ್ಲಿ ಕೊಳಚೆ ನೀರಿನ ಚರಂಡಿ ಇದೆ. ಆ ಚರಂಡಿ ಸೊಳ್ಳೆ ಮುಂತಾದ ಹುಳುಗಳಿಗೆ ವಾಸಸ್ಥಾನ

ವಾಗಿದೆ. ಈಗೆರಡು ಮೂರು ವರ್ಷಗಳಿಂದ ದಮ್ಮಿನ ರೋಗ ಅಂಬಾಡಿಯ ಗಂಡ ಲಕ್ಷ್ಮಣನನ್ನು ಎಲುಬಿನ ಹಂದರದಂತೆ ಮಾಡಿದೆ. ಈಗ ಆರು ತಿಂಗಳಿಂದ ಆತ ಭಿಕ್ಷಾಟನೆಗೂ ಹೋಗಿಲ್ಲ.

'ಗಂಡ' ಎಂದರೆ ಶಾಸ್ತ್ರೋಕ್ತವಾಗಿ ವಿವಾಹವಾದವರಲ್ಲ. ಅವಳು ಆತನನ್ನು ಪ್ರೀತಿಸಿದವಳು. ಆತ ಅವಳೊಡನೆ ಕೂಡಿಕೊಂಡ. ಪ್ರಕೃತಿಯೇ ಅವರ ವಿವಾಹಕ್ಕೆ ಸಾಕ್ಷಿ. ತನ್ನ ಮುರಿದ ಕೈಗೆ ಹೀಗೆ ಅಂಬಾಡಿ ನವಚೇತನವನ್ನಿತ್ತಳು. ಅದೆಷ್ಟೋ ವರ್ಷಗಳು ತಮ್ಮ ಜಂಜಾಟದಲ್ಲಿಯೇ ಸುಖ ಕಂಡರು. ನೋವಿನಲಿ ನಲಿವು......ನಲಿವಿಲಿ ನೋವು ಇದೇ ಅವರ ಜೀವನವನ್ನು ಸಾಗಿಸಿಕೊಂಡೊಯ್ಯುವ ದೀವಿಗೆಯಾಗಿತ್ತು. ಪ್ರಿಯ ಪ್ರೇಯಸಿಯರ ಅಮರ ಪ್ರೇಮದ ಕರುವಾಗಿ ಸೀತೆ ಹುಟ್ಟಿದಳು.. ಆ ಆರು ವರ್ಷದ ಕೂಸು ಈಗಾರು ತಿಂಗಳಿಂದ ಹಸಿವನ್ನು ಹಿಂಗಿಸುವ ಆಧಾರವಾಗಿದೆ. ನಿತ್ಯ ಬಿಕ್ಕೆ ಬೇಡಿ ಹಳಸಿದ ರೊಟ್ಟಿ—ಪಲ್ಯ ತಂದುಕೊಟ್ಟು ತಂದೆ ತಾಯಿಗಳ ಋಣ ತೀರಿಸುತ್ತದೆ. ಅಂಬಾಡಿ ರುಗ್ಣಶಯ್ಯೆಯಲ್ಲಿ ಮಲಗಿರುವ ಗಂಡನನ್ನು ಬಿಟ್ಟು ಕ್ಷಣ ಹೊತ್ತು ಅಗಲುವಂತಿರಲಿಲ್ಲ. ಆ ಎಲುಬಿನ ಹಂದರದಲ್ಲಿ ಸಣ್ಣಗಾಗಿ ಜಿನುಗುತ್ತಿದ್ದ ರಕ್ತವನ್ನು ತಿನ್ನಲು ಸೊಳ್ಳೆ, ತಗಣೆಗಳು ಬರುತ್ತವೆ. ಅವುಗಳಿಂದ ಅವನನ್ನು ರಕ್ಷಿಸಲು ಪಕ್ಕದಲ್ಲಿಯೇ ಕುಳಿತುಕೊಂಡಿರಬೇಕು. ಉಬ್ಬು ಹಲ್ಲಿನ ಮೇಲೆ ಬಂದು ಕುಳಿತುಕೊಳ್ಳುವ ನೊಣಗಳನ್ನು ಝಾಡಿಸಬೇಕು.

ತಮ್ಮ ಜೀವನದ ಅಸ್ತಿತ್ವಕ್ಕೆ ದಾರಿಯಿಲ್ಲದ ಸಹ ಭಿಕ್ಷುಕರು ಎಷ್ಟೆಂದು ಸಹಾಯಮಾಡಬಲ್ಲರು? ಆತನಿಗೊಂದು ಲೋಟ ಚಹ ಕುಡಿಸಿದರೆ ಮುಗಿಯಿತು. ಅದೂ ಸಹ ಅವರ ಶಕ್ತಿಗೆ ಮೀರಿದ್ದು.

ಸೀತಾ, ಸಿಂಬಳ ಒರಸಿಕೊಳ್ಳುತ್ತಾ ಹರಕು ಮುರುಕು ರೊಟ್ಟಿಗಳನ್ನು ತಂದು, "ಅಮ್ಮಾ, ಇವೊತ್ತು ಯಾರೋ ಹೋಳಗಿ ಹಾಕಿದ್ದಾರೆ" ಎಂದು ರೊಟ್ಟಿಯ ತುಣುಕುಗಳ ಮಧ್ಯದಲ್ಲಿದ್ದ ಹೋಳಗಿಯ ತುಂಡನ್ನು ಕೊಟ್ಟಳು. ಅದರಿಂದ ತಾಯಿಗೆ ಅದೆಷ್ಟು ಸಂತೋಷವಾಗಬಹುದೋ ಎಂದು ದಾರಿಯಲ್ಲೇ ಕಲ್ಪನೆ ಮಾಡಿಕೊಂಡೇ ಬಂದಿದ್ದಳು. ಲಕ್ಷ್ಮಿ ಹರ್ಷವದನಳಾಗಿ ನೆಟ್ಟಗೆ ಮುರಿದಳು. ಮತ್ತು ಸೀತಾ ನವಿರ್ಮಾರ್ವರ ಬಾಳಬೆಳಕು ಎಂಬ ನೋಟ ಅವಳ ಕಣ್ಣಲ್ಲಿತ್ತು. ಆದರೆ......ಲಕ್ಷ್ಮಣನ ಕಣ್ಣುಗಳು ಹರಡಿದ್ದ

ಜೋಳಿಗೆಯಲ್ಲಿನ ಹೋಳಿಗಿಯ ಮೇಲೆ ನೆಟ್ಟಿತು. ಅವನ ಕಣ್ಣುಗಳು ಹಸಿವಿನ ಜ್ವಾಲೆಯಿಂದ ಹೊಳೆಯುತ್ತಿದ್ದವು. ಅಂಬಾಡಿ ಮಗಳ ಮೇಲಿದ್ದ ತನ್ನ ದೃಷ್ಟಿಯನ್ನು ಗಂಡನ ಮೇಲೆ ಹರಿಸಿದಳು. ಅವನ ಕಣ್ಣುಗಳು ಕೆಂಡದ ಕಿಡಿಯನ್ನೇ ಘೂತ್ಕರಿಸುತ್ತಿದ್ದುವು. ಇಂಥಾ ಬರಗಾಲದಲ್ಲೂ ಹೋಳಿಗಿಯ ಊಟ ಸಿಕ್ಕಿತಲ್ಲಾ ಎಂದು ಸಂತೋಷ ಬೇರೆ! ಅಂಬಾಡಿ ಅವನಲ್ಲಿದ್ದ ತೃಷೆಯ ಮೂಲ ಕಾರಣವನ್ನು ಅವನ ಕಣ್ಣುಗಳಿಂದ ಶೀಘ್ರ ಅರಿತುಕೊಂಡಳು. ಹೋಳಿಗಿಯ ತುಂಡನ್ನೆತ್ತಿ ಮುರಿದು ಬಾಯಲ್ಲಿಟ್ಟಳು. ಪಾಚಿಗಟ್ಟಿದ ಹಲ್ಲುಗಳು ಮೆಲ್ಲನೆ ಮೆಲುಕಾಡಿದುವು. ರಕ್ತವಿಹೀನ ಕೈ ತಂಬಿಗೆಯ ಕಡೆಗೆ ಕೈಮಾಡಿ ತೋರಿಸಿತು. ಅಂಬಾಡಿ ಜಗ್ಗನೆ ತಂಬಿಗೆಯನ್ನು ತೆಗೆದುಕೊಂಡು ಬಾಯಲ್ಲಿ ನೀರು ಬಿಟ್ಟಳು. ತೀರದ ಹಸಿವು ಹಿಂಗಿತು. ಲಕ್ಷ್ಮಣನ ಪ್ರಾಣ ನೀರಿನಲ್ಲಿ ಕರಗಿತೋ ಎಂಬಂತೆ ಕಣ್ಣುಗಳನ್ನು ಮೇಲಕ್ಕೆ ತಿರುಗಿಸಿದ, ಅಂಬಾಡಿ, ಸೀತೆಯನ್ನು ಪರದೇಶಿಗಳಾಗಿ ಮಾಡಿ ದೂರ ಹೊರಟಿತು!

ಕ್ಷಣಾರ್ಧದಲ್ಲಿಯೇ ಭಿಕ್ಷುಕರ ಗುಂಪು ಸೇರಿತು. ಜಡಿ ಮಳೆಯಂತೆ ಅಳುವ ಅಂಬಾಡಿಗೆ ಸಮಾಧಾನ ಮಾಡುವುದರಲ್ಲಿ ಕೆಲವರು ಮಗ್ನರಾದರು. ಇನ್ನೊಬ್ಬರು ಬಿಕ್ಕಿಸಿ ಅಳುತ್ತಿದ್ದ ಸೀತೆಯನ್ನು ಎತ್ತಿಕೊಂಡು ದೂರ ಒಯ್ದರು. ಇನ್ನೂ ಹಲವು ಭಿಕ್ಷುಕರು ಆ ಲಕ್ಷ್ಮಣ ದೇಹದಿಂದಲೂ ಏನಾದರೂ ಕಾಸು ಸಿಕ್ಕರೆ ಹಸಿವಿನ ಜ್ವಾಲೆಗೆ ಆಹುತಿ ಮಾಡಬಹುದೆಂದು ಯೋಚಿಸುತ್ತಿದ್ದರು.

"ಏ! ಅಂಬಾಡಿ ಬಾ ಇಲ್ಲಿ. ಯಾಕಾಗಿ ಹಾಗೆ ಅಳುತ್ತಿಯೆ. ಸತ್ತು ಹೋದ ಜೀವ ಬರುವುದುಂಟೆ?" ಎಂದು. ಭಿಕ್ಷುಕರಲ್ಲೇ ಗಟ್ಟಿಮುಟ್ಟಾಗಿದ್ದ ಶೂಲಿ ಅವಳನ್ನು ಒಂದೆಡೆ ಕರೆದುಕೊಂಡು ಹೋಗಿ ಕ್ಷಣಹೊತ್ತು ಏನೇನೋ ಹೇಳಿದ. ಅಷ್ಟರಲ್ಲಿಯೇ ಪೇಟೆಗೆ ಹೋಗಿದ್ದ ಹಸನಬ್ಯಾರಿ ವಿಭೂತಿಯ ಉಂಡೆಗಳನ್ನು ಕೈಯಲ್ಲಿ ಹಿಡಿದುಕೊಂಡು ಬಂದ. ನಾಲ್ಕಾರು ಅನ್ಯ ಭಿಕ್ಷುಕರ ಸಹಾಯದಿಂದ ಹಸನಬ್ಯಾರಿ, ಶೂಲಿ ಕೂಡಿಕೊಂಡು ಲಕ್ಷ್ಮಣನ ಹಣೆಗೆ ಮುಖಕ್ಕೆ ವಿಭೂತಿಯ ಕಟ್ಟುಗಳನ್ನು ಹಾಕಿದರು. ಆ ಶವದ ಪಕ್ಕದಲ್ಲಿ ಅಂಬಾಡಿ ಅಳುತ್ತಾ ಕುಳಿತಳು. ಹಸನಬ್ಯಾರಿ, ಶೂಲಿ ಕೂಗುತ್ತಿದ್ದರು.

"ಅಪ್ಪಾ, ಪರದೇಶಿ ಹೆಣಕ್ಕೆ ಭಿಕ್ಷೆ ಹಾಕಿರಪ್ಪಾ. ಹುಗಿಯುವುದಕ್ಕೆ ಕಾಸಿಲ್ಲ. ಅಪ್ಪಾ....ಅಪ್ಪಾಽಽ...." ಸಾಯಂಕಾಲದ ಹೊತ್ತಿಗೆ ಲಕ್ಷ್ಮಣನ ಶವ ನಾಲ್ಕು ರೂಪಾಯಿ ದುಡಿದಿತ್ತು.

— ತನ್ನ ಬಳಿಯೇ ನಡೆದ ಘಟನೆ ಸ್ಮೃತಿಗೆ ಬಂದು ವಿವಂಚನೆಗೊಳಗಾದಳು. ಹಾಗೆಯೇ ಅನ್ನವಿಲ್ಲದೆ ಎಲುಬಿನ ಹಂದರವಾಗಿರುವ ತನ್ನ ದೇಹವನ್ನೂ ನೋಡಿಕೊಂಡು ಕರುಬಿದಳು. ಹತ್ತು ಹೆಜ್ಜೆ ಹಾರಿ ಬಿಜಲಿಯ ಗುಡಿಸಲಿನ ಬಳಿ ಬಂದು ಅರ್ಧ ತೆರೆದ ಬಾಗಿಲಿನಲ್ಲಿ ನಿಂತುಕೊಂಡು ಬೆಕ್ಕಿನಂತೆ ಇಣಿಕಿದಳು. ಧೂಮ್ರ ಪುಂಖಾನುಪುಂಖವಾಗಿ ಏರೇರಿ ಬರುತ್ತಿತ್ತು......ಗುಂಗುರು ಗುಂಗುರಾಗಿ! ಗಂಡಸರಂತೂ ಇರಲಿಲ್ಲ. ಮತ್ತೆ ಎರಡು ಹೆಜ್ಜೆ ಧೈರ್ಯದಿಂದ ಮುಂದಿಡುವ ಸಾಹಸ ಮಾಡಿದಳು. ಬಿಜಿಲಿಯ ಎಡಗೈಯಲ್ಲಿ ಬೀಡಿ ಸುಡುತ್ತಿತ್ತು. ಹಂಪಮ್ಮ ತೀರ ಆಶ್ಚರ್ಯವದನಳಾಗಿ, "ಈ ಅಭ್ಯಾಸ ಯಾವಾಗಿನಿಂದ ಮಾಡಿದೆಯೆ? ಬಿಜಲೀ, ಹೆಂಗಸರು ಮಾಡುವ ತಲಬೆ?!"

ಬಿಜಿಲಿ ಮರುಮಾತಾಡದೆ ಬೀಡಿಯ ತುಂಡನ್ನು ಮೂಲೆಯಲ್ಲಿ ಎಸೆದಳು.

"ನರನರ ಚುಚ್ಚಿ ನರಕದ ನೆನಪು ತರುತ್ತದೆ ಈ ಕಾಯಿಲೆ. ನಾನಾದರೂ ಎಷ್ಟು ದಿನ ಬದುಕಬೇಕಾಗಿದೆ."

"ಬೀಡಿ ಸೇದಿದರೆ ಸಮಾಧಾನ ಆಗುತ್ತೊ?"

"ನಾನು ರೋಗ ಬಂದಾಗಿನಿಂದ ಸೇದಲು ಸುರುಮಾಡಿಲ್ಲ. ಬಾಂಬೆಶೋ ಸೇರಿದಾಗಿನಿಂದ ಸೇದಲಿಕ್ಕೆ ಪ್ರಾರಂಭಿಸಿದ್ದೇನೆ."

"ಸರಿ ಬಿಡವ್ವ." ಪ್ರತಿ ಮಾತಿನಲ್ಲೂ ಆಶ್ಚರ್ಯ, ಖೇದವನ್ನು ಹಂಪಮ್ಮ ಹೊರಪಡಿಸಿದಳು.

ಈ ಘಟನೆಯಿಂದ ಎರಡು ದಿನಗಳಲ್ಲಿ ಬಿಜಿಲಿ ತನ್ನ ಬದುಕನ್ನು ಮುಗಿಸಿದಳು. ಶವ ಸಂಸ್ಕಾರಕ್ಕೆ ಬಾಂಬೆಶೋ ಮಂಡಲಿಯಲ್ಲಿನ ಕೆಲವು ಜನಗಳು, ಚೌಡಮ್ಮ, ಹಂಪಮ್ಮ ಹೋಗಿದ್ದರು. ಬಿಜಿಲಿಯ ಸಾವಿನಿಂದ ಹಂಪಮ್ಮ ಓರ್ವ ಜೀವದಗೆಳತಿಯನ್ನು ಕಳೆದುಕೊಂಡಂತಾಯಿತು. ಆಗಾಗ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದ ಜೀವಸಖಿಯ ವಿರಹ ವರ್ಣಿಸಲಸ

ದಳವಾದ ದುಃಖವನ್ನುಂಟುಮಾಡಿತು. ತಾನು ಬಾಣಂತಿ ಎಂಬುದನ್ನೂ ಮರೆತು ಬಿಜಲಿಯ ಕ್ಷೇಮ ವಿಚಾರಿಸಲು ಹೋದುದಾಗಿತ್ತು.

ಅನ್ನ!........ಅದನ್ನು ಕನಸಿನಲ್ಲಿ ಕಾಣುವುದೇ ಸರಿ ಎಂದು ಯೋಚಿಸಿದಳು. ಕೂಸುಗಳಿಗೆ ಹಾಲು!......ಅದೂ ಅವುಗಳಿಗೆ ಕನಸೇ. ಗಾಣಕ್ಕೆ ಹಾಕಿದರೂ ಒಂದು ತೊಟ್ಟು ರಕ್ತ ತನ್ನ ದೇಹದಿಂದ ಹೊರಸೂಸುವುದಿಲ್ಲವೆಂದು ನೆನೆದಳು. ಆಗ ಚೌಡಮ್ಮ ಸೂಚಿಸಿದ್ದ ಸೂಚನೆ ನೆನಪಾಯಿತು. ಏನಾದರೂ ಅವಳೇ ಪರಿಹಾರ ಮಾಡಬಲ್ಲಳು. ಕೂಸುಗಳನ್ನು ವಿಕ್ರಯಿಸುವುದೇ ಸರಿ. ಈ ಹಾಳು ಸಮಾಜ ಈ ಹಾಳು ಶಿರಸಪ್ಪನಂಥವರಿಗೆ ಇಂತೆಯೇ ಬುದ್ಧಿ ಕಲಿಸಬೇಕು. ಯೋಚಿಸು ಯೋಚಿಸುತ್ತಿದ್ದಂತೆಯೇ ಮೈಯೆಲ್ಲಾ ಬಿಸಿಯಾಯಿತು. ಕೊನೆಯ ತನಕ ತಾನು ಮಾನವ ದ್ವೇಷಿಯಾಗಬೇಕು. ಯಾವ ವಿಧದಿಂದಲೂ ಸರಿಯೆ ಗಂಡಸರಿಗೆ ಶತ್ರುವಾಗಿಯೇ ಇರು—ಎಂದು ಹೃದಯ ಅರ್ಧ ಏಟು ತಿಂದ ನಾಗರ ಹಾವಿನಂತೆ ಹೇಳುತ್ತಿತ್ತು.

ಮರುದಿನ ಚೌಡಮ್ಮ ಮುದ್ದು ಕಂದಗಳನ್ನು ಬೋರಿಟ್ಟು ಅತ್ತು ಕೊಟ್ಟಳು. ಉಳ್ಳವರಿಗೇ ಮಾರಬೇಕೆಂದು ಭರವಸೆ ತೆಗೆದುಕೊಂಡಳು. ಅವಳಿತ್ತ ಐವತ್ತು ರೂಪಾಯಿಗಳನ್ನು ಪುನಃ ಕೊಟ್ಟು ಕಂದಗಳೆರಡನ್ನೂ ಹಿಂತಿರುಗಿ ತರಲೇ ಎಂದೊಮ್ಮೆ ಯೋಚಿಸಿದರೆ, ಅವುಗಳು ಶಿರಸಪ್ಪನ ಪಿಂಡ ಹಾಳಾಗಿ ಹೋಗಲಿ ಎಂದು ವಿಕಲ್ಪ ನೆನೆದಳು.

ಚೌಡಮ್ಮ ಯಾರಿಗೆ ಎಷ್ಟಕ್ಕೆ ಮಾರುತ್ತಾಳೆ ಎಂದು ತಿಳಿದುಕೊಳ್ಳುವ ಆಸೆ ಇರಲಿಲ್ಲ. ಮತ್ತು ಅವಳಿಗೆ ಎಷ್ಟು ದಲ್ಲಾಳಿ ಗಿಟ್ಟುತ್ತದೆ ಎಂಬುದನ್ನೂ ಕೇಳಲಿಲ್ಲ. ತನಗೆ ಹಣಬೇಕು. ಅದು ಸಿಕ್ಕಿತು! ಹೇಗೋ ಸಿಕ್ಕಿತು. ಅಶ್ರುಪೂರಿತ ಕಣ್ಣುಗಳಿಂದ ಆನೆಪೇಟೆಯಲ್ಲಿದ್ದ ಚೌಡಮ್ಮನ ಮನೆ ಬಿಟ್ಟಾಗ ರಾತ್ರಿ ಎಂಟು ಘಂಟೆಯಾಗಿತ್ತು. ಅದೇ ತಾನೇ ಚಂದ್ರ ಉದಯಿಸಿದ್ದ.

"ಚಂದ್ರ! ನಿನ್ನ ಕಿರಣಗಳು ನನ್ನ ಹೃದಯದಲ್ಲಿ ಕೆಂಡದಂತೆ ಸುಡುತ್ತಿರುವ ತಾಪತಪ್ತಗಳನ್ನು ಶಾಂತಗೊಳಿಸಬಲ್ಲವೆ....ತನ್ನ ಸಂತಾನವನ್ನು ಮಾರಿಕೊಂಡ ಕಳಂಕಿನಿಯ ಮುಖವನ್ನು ಬೇಕೆಂತಲೇ ನೋಡಿ ಪರಿಹಾಸ ಮಾಡಲು ಬರುತ್ತಿರುವೆಯಾ!" ಎಂದಳೊಮ್ಮೆ.

"ಹಣವೆಂದರೆ ಹೆಣವೂ ಬಾಯಿ ಬಿಡುತ್ತದೆ ಎಂಬ ಮಾತು ಎಷ್ಟು ಸತ್ಯ! ಮನುಷ್ಯನಿಗೆ ಹಣ ಹಾಗೂ ತನ್ನ ಜೀವವೇ ಹೆಚ್ಚು. ಆದರೆ ಹೆಂಡತಿ ಮಕ್ಕಳೇ ಹೆಚ್ಚು. ತಾಯಿತಂದೆಗಳೇ ಮನುಷ್ಯನಿಗೆ ಹೆಚ್ಚು ಎಂಬ ಮಾತು ಪೊಳ್ಳು" ಎಂದು ಯೋಚಿಸಿದಳು ಇನ್ನೊಮ್ಮೆ.

"ಎಲ್ಲರ ಬಾಳಿನಲ್ಲೂ ತನಗೊದಗಿದ ಘಟನೆಗಳು ನಡೆಯುತ್ತವೆಯೆ? ನಡೆದರೂ ಸಹಿಸಿಕೊಳ್ಳುತ್ತಾರೆಯೆ. ಮೊನ್ನೆ ಮೊನ್ನೆ ಯಾವುದೋ ಹುಡುಗ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದಕ್ಕೆ ಆತ್ಮಹತ್ಯೆ ಮಾಡಿಕೊಂಡನಂತೆ? ತಾನು......ತಾನು ಪಡಬಾರದ ಕಷ್ಟಗಳು ಮೇಲಿಂದ ಮೇಲೆ ಬರುತ್ತಿದ್ದರೂ ಬೋರ್ಗಲ್ಲಿನಂತೆ ಸಹಿಸಿಕೊಳ್ಳುತ್ತಿರುವುದು ಹೆಚ್ಚೇಸರಿ. ಒಟ್ಟಿನಲ್ಲಿ ಆತ್ಮ ಹತ್ಯೆ ಮಾಡಿಕೊಳ್ಳುವುದು ಮಾತಾಡಿದಷ್ಟು ಸುಲಭವಲ್ಲ. ಅದಕ್ಕೂ ಕೆಚ್ಚು ಬೇಕು......ಕೆಚ್ಚು" ಎಂದು ಯೋಚಿಸುತ್ತಿರುವಷ್ಟರಲ್ಲಿಯೇ ಗುಡಿಸಲು ಬಂದಿತು. ಆಗ ಚಂದ್ರ ಇವಳ ಗುಡಿಸಲಿನ ಮೇಲೆ ಕಿರಣಗಳನ್ನು ಚೆಲ್ಲುತ್ತಿದ್ದ!

* * * *

ಇಪ್ಪತ್ತು ವರುಷಗಳು ಸಂದವು.

* * * *

ಇಂಟರ್‌ಮೀಡಿಯಟ್ ಪರೀಕ್ಷೆಯ ಫಲಿತಾಂಶ ಅದೇ ಆಗತಾನೆ ಹೊರ ಬಿದ್ದಿತ್ತು. ಮರುದಿನ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಗೊಂಡು ದೇಶಾದ್ಯಂತ ಹರಡುವುದರಲ್ಲಿತ್ತು. ಹೇಮನಿಗೆ ಫಲಿತಾಂಶ ನೋಡುತ್ತಲೂ ಎದೆ ಯುಬ್ಬಿ ಹೋಯಿತು. ಪ್ರಥಮ ಬಾರಿಗೇ ತೇರ್ಗಡೆಯಾಗುವುದೆಂದು ಕನಸಿನಲ್ಲಿಯೂ ಎಣಿಸಿರಲಿಲ್ಲ. 'ನೋಟಿಸ್ ಬೋರ್ಡ್'ನಲ್ಲಿ ತನ್ನ ಕ್ರಮ ಸಂಖ್ಯೆ ಕಾಣಿಸುತ್ತಲೂ ಛಂಗನೆ ಸೈಕಲ್ ಹತ್ತಿ ಮನೆಯತ್ತ ದಾರಿಬಿಟ್ಟಳು. ಸಹ ಗೆಳತಿಯರಿಗೆ ಸಂತೋಷದಾಯಕ ವಿಷಯವನ್ನು ಹೇಳಬೇಕೆಂಬುದೂ ಆ ಉಬ್ಬಿನಲ್ಲಿ ಮರೆತುಹೋಗಿತ್ತು. ಯಾಂತ್ರಿಕವಾಗಿ ಸೈಕಲ್ ಪೆಡಲ್ ತುಳಿಯುತ್ತಿದ್ದಳು. ಎದುರಿಗೆ ಲತಾ ಸೈಕಲ್ ಮೇಲೆ ಬರುತ್ತಿದ್ದುದೂ ಗೊತ್ತಾಗಲಿಲ್ಲ. ಬೇಗ ತಂದೆತಾಯಿಗಳೆದುರಿಗೆ ಹೇಳಿ ಅವರನ್ನೂ ಸಂತೋಷ ಸಾಗರದಲ್ಲಿ ಮುಳುಗಿಸಬೇಕೆಂದು ಅವಳ ಆಸೆ. ಆದರೆ ಲತೆಗೆ......

ಒಂದೇ ಬಾರಿಗೆ ಲತೆ ಬ್ರೇಕ್ ಹಾಕಿ ನಿಲ್ಲಿಸಿ "ಹೇಮಾ......" ಎಂದು ಕೂಗಿ ಕರೆದಳು. ಹೇಮ ದಿಗ್ಭ್ರಾಂತಳಾಗಿ ಸೈಕಲ್ ನಿಲ್ಲಿಸಿ ಏದುತ್ತಾ ಹೇಳಿದಳು, "ಹಲೋ!"

"ಕಂಗ್ರಾಜ್ಯುಲೇಷನ್ಸ್" ಎಂದಳು ಲತಾ.

"ನನ್ನ ಫಲಿತಾಂಶ ತಿಳಿಯಿತೆ?! ಯಾವಾಗ?"

"ನಾನು ಹನ್ನೊಂದು ಘಂಟೆಗೇನೆ ನೋಡಿದೆ. ಇಬ್ಬರದೂ ಪ್ಯಾಸಾಗಿತ್ತು."

"ಮತ್ತೆ ಈ ಕಡೆಯಿಂದ ಸವಾರಿ ದಯಮಾಡಿಸಿತು."

ಲತೆಯ ಮುಖ ಶ್ರಮದಿಂದ ಕೆಂಪಡರಿತ್ತು. ಬೆವರು ಪನ್ನೀರಿನಂತೆ ಸಿಂಗರಿಸಿತ್ತು. ಕರವಸ್ತ್ರದಿಂದ ಒತ್ತುತ್ತಾ ನುಡಿದಳು, "ಈಗಾಗಲೇ ಮನೆಗೆ ಹೋಗಿ ಬರುತ್ತಾ ಇದೇನೆ. ಅಂದಹಾಗೆ ಸುವಾಸಿನೀದು ಏನಾಯಿತು?"

"ನಂಗೊತ್ತಿಲ್ಲಪ್ಪಾ. ಅವಸರದಲ್ಲಿ ಬೇರೆಯವರದು ನೋಡಲಿಕ್ಕಾಗಲಿಲ್ಲ. ಥ್ಯಾಂಕ್ಯೂ......" ಎಂದು ಸೈಕಲ್ ಅಡರಿದಳು.

ಎದುರಿಗೆ ತನ್ನಂತೆ ಫಲಿತಾಂಶ ತಿಳಿದುಕೊಳ್ಳಲು ವಿದ್ಯಾರ್ಥಿಗಳಿಬ್ಬರು ನಾಗಾಲೋಟದಲ್ಲಿ ಹೊರಟಿದ್ದರು. ಅವರ ಸೈಕಲ್‌ಗೆ ತಗಲಿಸಿಕೊಂಡೇ ವಾಯುವೇಗದಲ್ಲಿ ಹೊರಟಿದ್ದಳು. ತಲೆಯಲ್ಲಿ ಸಂಗ್ರಾಮ ನಡೆದಿತ್ತು. ತನ್ನ ಫಲಿತಾಂಶ ಕೇಳುತ್ತಲೂ ತಂದೆತಾಯಿಗಳು ಅದೆಷ್ಟು ಸಂತೋಷಪಡುತ್ತಾರೊ! ತನ್ನ 'ಹೃದಯನಾಥ' ರೇಣು ಈ ಹೊತ್ತಿಗೆ ಫಲಿತಾಂಶ ನೋಡಿರಲಿಕ್ಕೆ ಸಾಕು-ಎಂಬ ವಿಚಾರ ಮನಸ್ಸಿಗೆ ಬರುತ್ತಲೂ ಭಾವೀ ಪತಿ ರೇಣುವಿನ ಸುಂದರ ರೂಪ ಕಣ್ಣು ಕಟ್ಟಿತು. ತೀರ ಸಂತೋಷವಾದಾಗ, ತೀರ ದುಃಖವಾದಾಗ ಆತನ ಮುಖ ಅದೆಷ್ಟು ನೋಡಲು ಆಕರ್ಷಣವಾಗಿರುತ್ತದೆ. ಆತ ಬೆಂಗಳೂರಿನಲ್ಲಿ ನಿತ್ಯ ವ್ಯಾಯಾಮ ಶಾಲೆಗೆ ಹೋಗುತ್ತಿದ್ದುದರಿಂದ ಪ್ರಮಾಣಬದ್ಧ ಮೈಕಟ್ಟನ್ನು ಹೊಂದಿದ್ದ. ನೀಳವಾದ ದೇಹ, ಎಳೆಗೂಸಿನ ಚಂದ ಮುಖ ಆತನದಾಗಿತ್ತು. ಹೀಗೆ ಮನಸ್ಸಿನಲ್ಲಿ ಕಲ್ಪನೆ ಮಾಡಿಕೊಳ್ಳುತ್ತಾ ಕೈಗಡಿಯಾರ ನೋಡಿಕೊಂಡಳು. ಆಗತಾನೆ ಹನ್ನೆರಡೂ ಕಾಲು ಘಂಟೆ. ಹಾಗೆ ಸುತ್ತಿ ಹೀಗೆ ತಿರುಗಿ ಮನೆಯನ್ನು ಸಮೀಪಿಸಿದಳು. ತಾಯಿ, ಮಗಳ ನಿರೀಕ್ಷಣೆಯಲ್ಲಿ ಅಂಗಳದಲ್ಲಿ ನಿಂತಿದ್ದಳು. ಹೇಮನ ನಗುಮುಖವೇ ಅವಳ ವಿಜಯಭೇರಿಗೆ ಸಾಕ್ಷಿಯಾಗಿತ್ತು.

"ಅಮ್ಮಾ! ಅಪ್ಪ ಎಲ್ಲಿ?" ಎಂದು ಸೈಕಲ್ ನಿಲ್ಲಿಸಿ ಒಳಗೆ ಪ್ರವೇಶ ಮಾಡಿದಳು. ತಂದೆ ಯಾವುದೋ ಕೆಲಸದ ಮೇಲೆ ಮಗ್ನರಾಗಿದ್ದರು. ಅವರ ಬಳಿ ಸಾರಿ "ಅಪ್ಪಾ, ಪಾಸಾಗಿ ಹೋಯ್ತು" ಎಂದಳು. ಅವಳ ಸಂತಸದ ಪರಾಕಾಷ್ಠತೆ ಕಟ್ಟೆಯೊಡೆದು ಹೋಗಿತ್ತು.

"ಸಂತೋಷವಾಯಿತು ಕಣಮ್ಮ. ಎರಡು ವರ್ಷ ಓದಿದ್ದಕ್ಕೂ ಸಾರ್ಥಕ ಪಡಿಸಿಕೊಂಡೆ" ಎಂದರು. ಅವಳು ಕುಪ್ಪಳಿಸುತ್ತಾ ಅಮ್ಮನ ಬಳಿ ಅಂಗಳಕ್ಕೆ ಬರುತ್ತಲೂ ಅಂಚೆಯವನು ತಂತಿಕೊಟ್ಟು ಹೋದ. ಹೇಮ ತಂತಿ ಯಾರಿಂದ ಬಂದಿರಬಹುದೆಂದು ಊಹಿಸದೆ ಇರಲಿಲ್ಲ. ಒಡೆದು ನೋಡಿದಳು.

"ನಿನ್ನ ಸಫಲತೆಗೆ ಧನ್ಯವಾದಗಳು—ರೇಣು" ಎಂದಿತ್ತು. ಹೇಮನ ಗಲ್ಲಗಳೆರಡು ಗುಲಾಬಿ ವರ್ಣವನ್ನಣಕಿಸಿದುವು. ನಾಡಿನಾಡಿಗಳಲ್ಲೂ ರಕ್ತದ ಸಂಚಾರ ಹೆಚ್ಚಾಯಿತು. "ರೇಣು......ನನ್ನ ರೇಣು" ಎಂದು ರಾಮನಾಮ ಜಪ ಮಾಡುವಂತೆ ಮಾಡುತ್ತಾ ತಂದೆಯ ಬಳಿಗೆ ಪುಟಿದೋಡಿ ಕೊಟ್ಟಳು. ತಂದೆ ಹರಿಹರಯ್ಯನವರು ಸಹ ಮಗಳ ಸಂತೋಷದಲ್ಲಿ ಭಾಗಿಯಾಗಿ ಪತ್ನಿ ರತ್ನಮ್ಮನವರ ಸಂತೋಷ ಹೆಚ್ಚಿಸಿದರು.

"ಮುಂದೆ ಹೇಗೆ ಮಾಡುತ್ತೀಯೆ ಹೇಮ?" ತಾಯಿ ರತ್ನಮ್ಮ ಕೇಳಿದಳು. ಅವಳ ಪ್ರಶ್ನೆ ಕೇಳದೆ ಇರುವಂತೆ,

"ಸುವಾಸಿನಿ ಮುಂದೆ ಕಾಲೇಜಿಗೆ ಸೇರುತ್ತಾಳಂತೆ."

"ಅಪ್ಪಾ......ಅಮ್ಮಾ ಇವತ್ತು ಬೇಡ. ಇನ್ನೊಂದು ದಿನ ಯೋಚಿಸೋಣ."

"ಅದೇ ಸರಿ ಕಣಮ್ಮ" ಎಂದರು ಹರಿಹರಯ್ಯ.

"ರೇಣೂಗೆ ಬಾ ಅಂತ ಕಾಗದವನ್ನಾದರೂ ಹಾಕಿರಿ. ಅಂಗಡಿ ಕಡೆ ಯಾರಾದರೂ ನೋಡಿಕೊಳ್ಳೋದಕ್ಕೆ ಹೇಳಿ ಬರುವನಂತೆ. ಇವಳ ಮುಂದಿನ ವ್ಯಾಸಂಗದ ಬಗ್ಗೆ ಕೇಳಿದರೆ ಒಳ್ಳೆಯದಲ್ಲವೆ."

"ನಮ್ಮ ಕೈಯಲ್ಲೇನಿದೆಯೆ? ಎಂದು ಧಾರೆಯೆರೆದು ಕೊಟ್ಟೆವೋ ಅಂದಿಗೇ ಮುಗಿಯಿತು. ಏನಿದ್ದರೂ ಗಂಡ–ಹೆಂಡತಿ ತಾವು ತಿಳಿದಹಾಗೆ ಮಾಡಿಕೊಳ್ಳಲಿ. ಅಂತೂ ಪಾಸಾಗಿದ್ದಾಳೆ. ನಮಗೆ ಅಷ್ಟೇ ಸಂತೋಷ.

ರೇಣು ಒಪ್ಪಿದರೆ ಲಂಡನ್ ಬಿಟ್ಟು ಅಮೇರಿಕಾಕ್ಕೆ ಕಳಿಸೋದಕ್ಕೂ ಸಿದ್ಧ! ನಮಗಾದರೂ ಮಕ್ಕಳಿಲ್ಲ. ಏನೋ ವಿಧಿಯಾಟದಿಂದ ಹೇಮ ನಮ್ಮ ಭಾಗ್ಯಕ್ಕೆ ಬಂದಳು."

"ನೀವು ಹೇಳೋದು ಸರಿ. ಅಂದಹಾಗೆ ಕಾಗದ ಇವೊತ್ತೇ ಪೋಸ್ಟ್ ಮಾಡಿ."

"ಈಗಲೇ ಬರೆದುಬಿಡುತ್ತೇನೆ, ನಿನ್ನೆದುರಿಗೆ. ಆ ಮೇಲೆ ಮರೆತು ಬಿಡುತ್ತದೆ" ಎಂದು ಹರಿಹರಯ್ಯ ರೇಣುವಿಗೆ ಕಾಗದ ಗೀಚಿದರು. ಹೇಮ ತಂದೆಯ ಬಾಯಿಂದ ವಿಷಯ ಕೇಳಿದರೂ ಸಮಾಧಾನಗೊಳ್ಳಲಿಲ್ಲ. ಕಾಗದ ಇಸಿದುಕೊಂಡು ಓದಿ ತಾನೇ ಸೈಕಲ್‌ಮೇಲೆ ಹೋಗಿ ಅಂಚೆಗೆ ಹಾಕಿ ಬಂದಳು.

* * * *

ರೇಣುವಿಗೆ ಕಾಗದ ಮುಟ್ಟಿದ್ದೇ ತಡ ಬೆಂಗಳೂರಿನಿಂದ ನಗರಕ್ಕೆ ಬಂದು ಧ್ವಜ ಊರಿದನು.

"ಎಲ್ಲಾ ಆರೋಗ್ಯವೆ ರೇಣು?" ಎಂದು ಔಪಚಾರಿಕವಾಗಿ ರತ್ನಮ್ಮ ಪ್ರಶ್ನಿಸಿದಾಗ, "ಎಲ್ಲಾ ಆರೋಗ್ಯ. ಅಂಗಡಿಯನ್ನು ಗುಮಾಸ್ತೆ ಗೋಪಣ್ಣ ನವರಿಗೆ ವಹಿಸಿ ಬಂದಿರುವೆ" ಎಂದನು.

ಹೇಮ ಫಲಾಹಾರವನ್ನು ಬೆಳ್ಳಿಯ ಬಟ್ಟಲಿನಲ್ಲಿ ತಂದುಕೊಟ್ಟಳು. ಅಳಿಯನ ಸಂಗಡವೇ ಹರಿಹರಯ್ಯನವರೂ ಫಲಹಾರ ಸ್ವೀಕರಿಸಿದರು.

ರತ್ನಮ್ಮ ಹೇಳಿದರು: "ಮುಂದಿನ ಅಭ್ಯಾಸಕ್ಕೆ ಹೇಮಾನ್ನ ಕಳಿ ಸೋಣವೆ ಬೇಡವೆ ಎಂಬ ಪ್ರಶ್ನೆ ಎದ್ದಿದೆ."

"ನಿಮ್ಮಿಷ್ಟ ಹೇಗೆ?"

"ರೇಣೂ! ನೀನು ಹೇಳಿದ ಹಾಗೆ ನಮ್ಮ ಅಭಿಪ್ರಾಯ ಮಗೂ," ಎಂದರು ಹರಿಹರಯ್ಯ.

ಹಾಗಾದರೆ ನಾನೊಂದು ಮಾತು ಮಧ್ಯೆ ಹೇಳುವ ಧೈರ್ಯ ಮಾಡು ತ್ತೇನೆ. ನೋಡಿ ತಂದೆ ತಾಯಿಗಳಿಲ್ಲದವನಿಗೆ ಹೆಣ್ಣು ಕೊಟ್ಟು ಪುಣ್ಯ ಕಟ್ಟಿ ಕೊಂಡಿರಿ. ನನಗೆ ತುಂಬಿ ತುಳುಕುವಷ್ಟು ದೇವರು ಶ್ರೀಮಂತಿಕೆ ಕೊಟ್ಟಿ ದ್ದಾನೆ. ಆದರೆ ತಂದೆ ತಾಯಿಗಳ ಸೇವೆ ಮಾಡುವ ಭಾಗ್ಯ ಕೊಡಲಿಲ್ಲ.

ಇದ್ದೊಬ್ಬ ತಂಗಿಯೂ ಹೋದಳು. ಇನ್ನು ಇರೋ ನೆಂಟರೋ! ದೇವರಿಗೇ ಗೊತ್ತು ಆ ವಿಚಾರ. ಮೇಲೆ ಮುಗುಳ್ನಗೆ, ಒಳಗೆ ವಿಷದಹೃದಯ. ಅದೂ ಅಲ್ಲದೆ ಮನೆ ಮೇಲ್ವಿಚಾರಣೆ ನೋಡಿಕೊಳ್ಳುವವರು ಯಾರೂ ಇಲ್ಲ. ಹೆಣ್ಣಾಳುಗಳ ಕೈಅಡಿಗೆ ತಿಂದು ತಿಂದು ಸಾಕಾಗಿ ಹೋಗಿದೆ......" ಎಂದು ಮುಂದುವರಿಸುವ ಮಾತನ್ನು ಹೇಮ ಮುಗುಳ್ನಗುತ್ತಾ ತಡೆದು ಹೇಳಿದಳು, "ಅಮ್ಮಾ, ಅವರು ಹೇಳುವುದು ಅರ್ಥವಾಯಿತು. ನಾನು ಕಾಲೇಜಿಗೆ ಹೋಗಬಾರದೂಂತ ಅಭಿಪ್ರಾಯ. ನನಗೂ ಅದೇ ಬೇಕು. ಹೆಣ್ಣು ಎಷ್ಟೇ ಓದಿದರೂ ಮುಸುರೆ ತೊಳೆಯೋದು ತಪ್ಪೋದಿಲ್ಲ ಎಂಬ ಗಾದೆ ಇದೆ"

"ಮುಸುರೆ ತೊಳೆಯುವುದಕ್ಕೆ ಆಳುಗಳು ಇದ್ದಾರೆ."

"ಆಳುಗಳಿಲ್ಲದ ಮನೆಯಲ್ಲಿ!" ಎಂದು ಪ್ರತಿ ಉತ್ತರವಿತ್ತಳು ಹೇಮ'

"ಹೇಮಾ! ನಿನಗೆ ಆಗಿರೋ ವಿದ್ಯೆಯಲ್ಲಿ ಬೇಕಾದಷ್ಟು ಜ್ಞಾನಾರ್ಜನೆ ಮಾಡಿಕೋಬಹುದು," ಎಂದು ತಂದೆ ಪೂರ್ಣವಿರಾಮವಿತ್ತರು.

ಒಂದು ವಾರದ ಅನಂತರ ಹೇಮಳನ್ನು ಗಂಡನ ಮನೆಗೆ ಕಳಿಸುವು ದೆಂದು ನಿರ್ಧಾರವಾಯಿತು. ಆ ದಿನ ಸುವಾಸಿನಿ, ಲತಾ ಮುಂತಾದವ ರಾದಿಯಾಗಿ ಬಂದು ಹೇಮಳ ಕೂಡೆ ಸಂತೋಷದಿಂದ ಕಾಲಕಳೆದರು.

"ಗಂಡನ ಮನಸ್ಸಿನ ಇಂಗಿತ ಅರಿತುಕೊಂಡು ನಡೆಯಮ್ಮಾ ಹೇಳಿಸಿ ಕೊಂಡು ಮಾಡುವುದಕ್ಕಿಂತ ಇಂಗಿತವರಿದು ಮಾಡುವುದರಲ್ಲಿ ಅರ್ಥವಿದೆ," ಎಂದು ತಾಯಿ ರತ್ನಮ್ಮ ಕಿವಿ ಮಾತಾಗಿ ಹೇಳಿದಳು.

"ಹುಷಾರಾಗಿ ಇಟ್ಟುಕೋಪ್ಪ. ನಾವು ಒಂದೇ ಮಗುವನ್ನು ರಾಜಕುಮಾರಿಯಂತೆ ಸಾಕಿದೆವು. ಅವಳಿಗೆ ಯಾವುದಕ್ಕೂ ಕಡಮೆ ಮಾಡಲಿಲ್ಲ. ಎಲ್ಲಾ ನಿನ್ನ ಕೈಯಲ್ಲಿ ಒಪ್ಪಿಸಿದ್ದೇವೆ. ಪಾಪ ಪುಣ್ಯ ನಿನ್ನ ಕೈಯಲ್ಲಿದೆ" ಎಂದು ತಂದೆ ಗೊಳೋ ಎಂದು ಅತ್ತುಬಿಟ್ಟರು.

ಎಲ್ಲರಿಗೂ ಅವರವರಿಗೆ ತಕ್ಕಹಾಗೆ ಸಮಾಧಾನದ ಮಾತುಗಳನ್ನು ಹೇಳಿ ಬೆಂಗಳೂರಿಗೆ ರೈಲು ಹತ್ತಿದ. ಅವರು ಕುಳಿತಿದ್ದ ಗಾಡಿ ದ್ವಿತೀಯ ಶ್ರೇಣಿಯದ್ದಾಗಿದ್ದುದರಿಂದ ಗದ್ದಲವಿರಲಿಲ್ಲ. ಕುಳಿತಿದ್ದವರೆಲ್ಲ ಬುಲ್ಗಾನಿನ್ ನೋಡುವುದಕ್ಕೆ ಬೆಂಗಳೂರಿಗೆ ಹೊರಟಿದ್ದರು.

ರೈಲಿನ ಬಳಿ ಗುಮಾಸ್ತೆ ಗೋಪಣ್ಣ ಬಂದಿದ್ದರು. ಬೆಂಗಳೂರು ಮುಟ್ಟಿದ ದಿನ ವಿಶ್ರಾಂತಿ ತೆಗೆದುಕೊಂಡರು. ಹೇಮಳೊಡನೆ ಬಿಡುವು ಮಾಡಿಕೊಂಡು ಎಲ್ಲ ಕಡೆಗೂ ಸುತ್ತಿ ಬಂದ. ಆಗ ರಷ್ಯಾದಿಂದ ಬುಲ್ಗಾನಿನ್

ಮತ್ತು ಕ್ರುಶ್ಚೇವ್ ಬೆಂಗಳೂರಿಗೆ ದಯಮಾಡಿಸಿದ್ದರು. ಲಾಲ್‌ಬಾಗಿನಲ್ಲಿ ಬಣ್ಣ ಬಣ್ಣದ ಬೆಳಗು ಸ್ವರ್ಗೀಯ ಸೌಂದರ್ಯವನ್ನು ತಂದೊಡ್ಡಿತ್ತು. ಪ್ರೇಕ್ಷಕರಲ್ಲಿ ತಾವೂ ಒಬ್ಬರಾಗಿ ಕಣ್ಮನಗಳನ್ನು ತಣಿಸಿದರು. ಈ ಹಿಂದೆ ಲಾಲ್‌ಬಾಗಿನಲ್ಲಿ ಅದೆಷ್ಟೋ ಬಾರಿ ಸುತ್ತಿದ್ದುದು ಇತ್ತು. ಈಗಿನ ಹೊಸ ಕಳೆಯಲ್ಲಿ ಪುನಃ ಸುತ್ತಾಡಿ ಬಂದರು.

ಶಿಶುಸದೃಶ ಹೇಮಾಳಿಗೆ ಈ ಅಲೆತದಿಂದ ನೂತನ ಚೇತನ ಜಾಗೃತವಾದಂತಾಯಿತು. ಅವಳಿಗೆ ಈಗೀಗ ಬಾಳು ಹೂವಿನ ಹಾಸಿಗೆಗೆ ಸಮ ಎಂದೆನಿಸುತ್ತಿತ್ತು!

* * * *

ಒಂದು ದಿನ ರೇಣು ರಾತ್ರಿಯ ಊಟದನಂತರ ತಾಂಬೂಲ ಜಗಿಯುತ್ತಿದ್ದ. ಹೇಮಾ ಒಯ್ಯಾರದಿಂದ ತಾನೂ ತಾಂಬೂಲ ಜಗೆಯುತ್ತ ಬಂದು, "ಇಂದೇನು ವಿಶೇಷ?" ಎಂದಳು.

"ನೀನೇ ಹೇಳು."

"ನೀವು ಕಾರು ಕೊಳ್ಳೋದು ನಿಜವೆ?"

"ಗುಟ್ಟು ರಟ್ಟಾಗಿ ಹೋಯಿತಲ್ಲೇ. ನಿನಗೆ ಯಾರು ಹೇಳಿದರೆ?"

"ಗೋಪಣ್ಣ."

"ಹೌದು ತೆಗೆದುಕೊಳ್ಳೋಣ ಇಂಥಾ ಬೆಂಗಳೂರಿನಂತಹ ಒಂದು ಊರಿನಲ್ಲಿ ಎಲ್ಲಾ ಕಡೆಗೂ ಬಿ. ಟಿ. ಎಸ್‌ನಲ್ಲಿ ಓಡಾಡುಕ್ಕಾಗುತ್ತದೆಯೆ. ನಮ್ಮ ಸಂಚಾರದ ಅವಶ್ಯಕತೆಗಿಂತ ನನ್ನ ವ್ಯವಹಾರದ ಅವಶ್ಯಕತೆ ಹೆಚ್ಚಿದೆ, ಗೊತ್ತಾ?"

"ನಿಜ."

"ದೇವರ ದಯೆಯಿಂದ ನೀನೂ ಗಂಡು ಮಗುವಿನ ತಾಯಿಯಾದರೆ..." ಅರ್ಥಕ್ಕೆ ರೇಣುವಿನ ಬಾಯ್ಮುಚ್ಚಿ "ಹೋಗೀಂದ್ರೆ........." ಎಂದಳು.

"ಅದಿನ್ನೂ ಮುಂದಿನ ಕನಸು. ನೋಡೋಣ."

ಕೆಲವೇ ದಿನಗಳಲ್ಲಿ ಅವರ ಬಂಗಲೆಯ ಮುಂದೆ ಒಂದು ಫೋರ್ಡ್ ಕಾರು ಬಂದು ನಿಂತಿತು. ಮತ್ತೆ ಕೆಲವು ತಿಂಗಳಲ್ಲಿ ಹೆಣ್ಣು ಕೂಸಿನ ತಾಯಿಯಾದಳು, ಹೇಮಾ. ಹೆಣ್ಣಾದರೇನು ಗಂಡಾದರೇನು ಎಲ್ಲವೂ ಮಕ್ಕಳೇ

ಎಂಬ ವಿಚಕ್ಷಣ ಬುದ್ಧಿಯ ದಂಪತಿಗಳು ಅನುಪಮ ಎಂಬ ಹೆಸರಿಟ್ಟು ತಮ್ಮ ಭಾಗ್ಯ ಎಂದುಕೊಂಡರು ಅಂತೂ ಅವರ ಬಾಳು ಯಾವ ಅಡೆತಡೆ ಯಿಲ್ಲದೆ ಸರಾಗವಾಗಿ ಉರುಳುತ್ತಿತ್ತು. ಇನ್ನು ಮುಂದೆಯೂ ಇತೋಪ್ಯತಿಶಯ ವಾಗಿ ಸಾಗಲಿ ಎಂದು ಅನುದಿನ ಭಗವಂತನನ್ನು ಬೇಡಿಕೊಳ್ಳುತ್ತಿದ್ದಳು.

ಕಾಲಚಕ್ರದ ಉರುಳಿನಲ್ಲಿ ದಿನಗಳು ಸಾಗಿದುವು. ಇದೀಗ ರೇಣುವಿಗೆ ಮೂರು ಮಕ್ಕಳು. ಅನುಪಮ, ವಿಜಯ, ರಾಜು, ಮನೆ ತುಂಬಾ ಮುದ್ದು ಮಾತುಗಳನ್ನಾಡುತ್ತಾ ತಿರುಗಾಡುತ್ತಿರುವ ಮಕ್ಕಳನ್ನು ಕಂಡಾಗಲೆಲ್ಲಾ ಹೇಮಾಳ ಹೃದಯ ಕಾರಂಜಿಯಂತೆ ಉಕ್ಕಿ ಹರಿಯುತ್ತಿತ್ತು. ಅನುಪಮ ಪ್ರಾಥಮಿಕ ಶಾಲೆಯ ಎರಡನೆಯ ತರಗತಿಯಲ್ಲೂ ವಿಜಯ ಪ್ರಥಮ ತರಗತಿ ಯಲ್ಲೂ ಓದುತ್ತಿದ್ದರು.

ರತ್ನಮ್ಮ ಹರಿಹರಯ್ಯ ವೃದ್ಧರಾಗಿದ್ದರು. ಮನೆಯಲ್ಲಿ ಆಳುಗಳವಿನಾ ತಮ್ಮವರೆಂಬವರು ಯಾರೂ ಇರಲಿಲ್ಲ. ಅದಕ್ಕೆಂದೇ ಬೇಸರಪಟ್ಟುಕೊಂಡು ಅಳಿಯನ ಮನೆಯನ್ನು ಸೇರಿ ಕೆಲವು ವರ್ಷಗಳ ಅನಂತರ ಸ್ವರ್ಗಸ್ಥರಾದರು. ಅತ್ತೆ ಮಾವಂದಿರ ಸಾವು ತುಂಬಲಾರದಷ್ಟು ಯಾತನೆಯನ್ನು ಕೊಟ್ಟಿತ್ತು. ರೇಣು ರತ್ನಮ್ಮನಲ್ಲಿ ತಾಯಿ ಹೃದಯವನ್ನೂ ಹರಿಹರಯ್ಯನಲ್ಲಿ ತಂದೆಯಪ್ರೀತಿ ಯನ್ನೂ ಕಂಡುಕೊಂಡಿದ್ದನು. ಈಗ ಅವನಿಗೆ ತಾನು ಪರದೇಶಿ ಎಂದು ಒಮ್ಮೊಮ್ಮೆ ಎನ್ನಿಸುತ್ತಿತ್ತು. ತಾಯಿ–ತಂದೆ, ಅತ್ತೆ-ಮಾವಂದಿರ ಸುಖವನ್ನು ಕೊಡುವ ಮಡದಿ ಇರುವಾಗ ಮತ್ತೇಕೆ ಯೋಚಿಸಬೇಕೆಂದು ಎಂದುಕೊಳ್ಳು ವನು. ಆದರೆ ಇದೊಂದು ಚಿಂತೆಯನ್ನು ಬಿಟ್ಟರೆ ಇನ್ನು ಯಾವ ಚಿಂತೆ? ಹಣ ನಾಲ್ಕು ನಿಟ್ಟಿನಿಂದ ಬಂದು ಶೇಖರವಾಗುತ್ತಿತ್ತು. ಹೊಲ, ಬಾಡಿಗೆ ಮನೆ, ದಳ್ಳಾಳಿ ಅಂಗಡಿ ಇತ್ಯಾದಿಗಳಿಂದ ಧಾರಾಕಾರವಾಗಿ ಬರುತ್ತಿತ್ತು.

ಕಾಲದೇವನು ಹೇಗೋ ಆ ದಂಪತಿಗಳ ಚಿಂತೆಯನ್ನು ಮಾಯಿಸಿದ. ಮುದ್ದುಮಕ್ಕಳ ಮುಖಗಳನ್ನು ನೋಡಿಕೊಂಡು ಚಿಂತೆಯನ್ನು ಮರೆಯಲು ಯತ್ನಿಸುತ್ತಿದ್ದರು.

ಒಂದು ದಿನ, "ನಗರ ಸಂಚಾರಕ್ಕಾದರೂ ಹೋಗಿ ಬೇಸರ ಕಳೆದು ಕೊಂಡು ಬರೋಣವೆ?" ಎಂದ ರೇಣು.

"ಹೌದು. ಅಲ್ಲಿಂದ ಹರಿಹರಕ್ಕೂ ಹೋಗಿ ಬರಬಹುದು."

— ಮಾತನಾಡಿದ್ದೇ ತಡ ಪ್ರಯಾಣ ಸಿದ್ಧತೆಗಳು ಪ್ರಾರಂಭವಾದವು. ಮಕ್ಕಳಿಗೆ ತಿಂಡಿತೀರ್ಥಗಳನ್ನು ತುಂಬಿ ತುಳುಕುವಂತೆ ಮಾಡಿಟ್ಟುಕೊಂಡಳು. ಪ್ರಯಾಣಕ್ಕೆ ಬೇಕಾದ ಬಟ್ಟೆಬರೆಗಳ ಸಿದ್ಧತೆಯೂ ಆಯಿತು. ಗೋಪಣ್ಣ ಉಗಿ ಬಂಡಿ ನಿಲ್ದಾಣಕ್ಕೆ ಬಂದು ಬೀಳ್ಕೊಟ್ಟ. ನಗರದಲ್ಲಿ ಹೆಚ್ಚು ದಿನ ಇರಲು ಅವರಿಗೆ ಮನಸ್ಸಾಗಲಿಲ್ಲ. ಏನೋ ತೀರಲಾರದ ನೋವು ಯಾತನೆ ಬೆನ್ನಟ್ಟಿ ಪೀಡಿಸಲು ಉಪಕ್ರಮಿಸಿತು. ಆದ್ದರಿಂದ ಪ್ರಸಿದ್ಧ ತೀರ್ಥಕ್ಷೇತ್ರವೆನಿಸಿದ್ದ ಹರಿಹರಕ್ಕೆ ಪ್ರಯಾಣ ಬೆಳೆಸಿದರು.

"ಹರಿಹರಕ್ಕೆ ದಕ್ಷಿಣ ಕಾಶಿ ಅಂತನ್ನುತ್ತಾರೆ ನಿಜವೆ?"

"ಹೌದು. ಇಲ್ಲಿ ಸತ್ತವರಿಗೆ ಸ್ವರ್ಗದ ಬಾಗಿಲು ಬನ್ನೀ ಎಂತ ತೆಗೆದಿರುತ್ತದೆ."

"ನಿಜವೇ ಇರಲಿ, ಸುಳ್ಳೆ ಇರಲಿ, ಕಂಡವರಾರು" ಪತಿಯ ಮಾತನ್ನು ಗಂಭೀರವಾಗಿ ತೆಗೆದುಕೊಂಡು ನುಡಿದಳು."

"ಅಮ್ಮಾ, ಕೊಡು ಬಳೆ" ಎಂದ ಚಿಕ್ಕ ಪುತ್ರ ರಾಜು.

"ಅಮ್ಮಾ ತಮ್ಮನಿಗೆ ಕೊಟ್ಟರೆ ನನಗೂ ಒಂದಿಷ್ಟು ಚಕ್ಕುಲಿ ಕೊಡು" ಎಂದ ವಿಜಯ.

ಮೂವರು ಮಕ್ಕಳಿಗೂ ತಿಂಡಿ ಹಂಚಿ ತಾವೂ ಸೇವಿಸಿದರು. ಹರಿಹರ ಬರುತ್ತಲೂ ನಿಲ್ದಾಣದಲ್ಲಿ ಗದ್ದಲ ಪ್ರಾರಂಭವಾಯಿತು, ರೇಣು ಸಾಮಾನುಗಳನ್ನು ತೆಗೆಯಿಸಿಕೊಂಡು ಸೀದಾ ಛತ್ರಕ್ಕೆ ಹೊರಟುಹೋದನು. ಹನ್ನೊಂದು ಘಂಟೆ ಎನ್ನುವುದರೊಳಗಾಗಿ ಹೊಳೆಯಲ್ಲಿ ಮಿಂದು ಬಂದು ಶ್ರೀ ಹರಿಹರೇಶ್ವರ ಸ್ವಾಮಿಗೆ ಮಂಗಳಾರತಿ ಮಾಡಿಸಿದರು. ಹರಿಹರರ ಐಕ್ಯತೆಯನ್ನು ಹರಿಹರೇಶ್ವರನ ಭವ್ಯ ಮೂರ್ತಿಯಲ್ಲಿ ನೋಡಿ ಆನಂದ ಬಾಷ್ಪಗಳನ್ನು ಸುರಿಸಿದರು. ಲೋಕದ ಜನರಿಗೆ ಎಂಥ ಸಂದೇಶ ಎಂಥ ಸಂದೇಶ — ಎಂದುಕೊಂಡ. ರೇಣು ಮನದಲ್ಲಿ ಪುನರಪಿ ಯೋಚಿಸಿದ.

"ಹರಿಹರರು ಭೇದ ಮಾಡಲಾರರು. ಅವರನ್ನನುಸರಿಸುವವರು ಭೇದ ಮಾಡುತ್ತಾರೆ. ಹರಿ-ಹರ ಎಂದು ದೇವರಲ್ಲೂ ಭೇದವೆಬ್ಬಿಸಿ ಜಾತೀಯ ಹೆಸರಿನಲ್ಲಿ ಹೋರಾಡುವ ಕ್ಷುಲ್ಲಕ ವಾದಿಗಳಿಗೊಂದು ಸವಾಲಿ ನಂತಿದೆ. ಅದಕ್ಕೆಂದೇ ಇಬ್ಬರೂ ಒಂದಾಗಿ ದೇವರಲ್ಲಿ ಎರಡಿಲ್ಲ ಎಂದು

ಲೋಕಕ್ಕೆ ಉದ್ಘೋಷಿಸಿದ್ದಾರೆ.” ಯಾವ ದೇವರ ದರ್ಶನದಿಂದಲೂ ಇಂಥ ಹೊಸ ಸಂದೇಶವನ್ನು ನೋಡಿದಾಕ್ಷಣ ಪಡೆದಿರಲಿಲ್ಲ.

ಮೂರನೆಯ ದಿನ ಕಿರ್ಲೋಸ್ಕರ್ ಕಂಪೆನಿಯನ್ನು ನೋಡಿದರು. ಸಾಯಂಕಾಲ ನದಿಯ ದಂಡೆಯ ಮೇಲೆ ಕುಳಿತು ಕಾಲ ಕಳೆದರು. ಹರಿಹರದ ಹವೆ ಅವರಿಗೆ ತುಂಬಾ ಹಿತಕರವೆನಿಸಿತು.

ತಮ್ಮ ಕಾರ್ಯಕ್ರಮ ಮುಗಿಯುತ್ತಲೂ ಬೆಂಗಳೂರಿಗಭಿಮುಖವಾಗಿ ಪ್ರಯಾಣ ಬೆಳೆಸಿದರು. ಮಧ್ಯೆ ಇಳಿದು ನಗರಕ್ಕೆ ಹೋಗುವ ಯೋಚನೆ ಏನೂ ಇರಲಿಲ್ಲ. ಅಲ್ಲಿಗೆ ಹೋಗಿ ತಲೆ ಕೆಡಿಸಿಕೊಳ್ಳುವುದೇಕೆ ಎಂದು ನೆನೆದರು. ದಾರಿಯಲ್ಲಿ ಚಿಕ್ಕ ಜಾಜೂರು ಬಳಿ ಇಳಿದು ಹೇಮಾ ನೀರು ತರಲು ಹೋದಳು. ಆದರೆ ಜೊತೆಗಿದ್ದ ರಾಜು, ವಿಜಯರು ಎಲ್ಲಿ? ಒಂದು ಕ್ಷಣದಲ್ಲೇ ಮಾಯವಾಗಿದ್ದರು. ಹಿಂಬದಿ, ಮುಂಬದಿ ಎಲ್ಲಿ ಹುಡುಕಿದರೂ ಗೋಚರವಾಗಲಿಲ್ಲ. ಅದೇ ಹೊತ್ತಿಗೆ ಗಾಬರಿಯಾಗಿ ರೇಣುವೂ ಬಂದ. ಮತ್ತೆ ಬೇರೆ ಬಂಡಿಯಲ್ಲಿ ತಮ್ಮ ಮಕ್ಕಳ ಅಳುವಿಕೆಯ ಧ್ವನಿ ಕೇಳಿಬಂದಿತು. ಈ ರಾದ್ಧಾಂತ ಗಾರ್ಡ್‌ಗೆ ತಿಳಿದು ಕ್ಷಣಹೊತ್ತು ಹುಡುಕುವಿಕೆಯಲ್ಲಿ ಭಾಗವಹಿಸಬೇಕಾಯಿತು.

ಅಪರಿಚಿತ ಹೆಣ್ಣು ಮಗಳೊಬ್ಬಳು ವಿಜಯ, ರಾಜುರನ್ನು ಎತ್ತಿಕೊಂಡು ಬಂದು ಕೊಟ್ಟು ಹೋದಳು. ರೇಣುವಿಗೆ ಮಂಕು ಬಡಿದಂತಾಯಿತು. ಇದೇನು ಕನಸೋ ನನಸೋ ಎಂದುಕೊಂಡ. ತದ್ರೂಪ ತನ್ನ ಹೆಂಡತಿಯನ್ನೇ ಹೋಲುವ ಈ ಹೆಂಗಳೆ ಯಾರಿರಬಹುದು? ಕಣ್ಣು, ಮೂಗು, ಹಣೆ, ಮುಖದ ಆಕಾರ ಎಲ್ಲಾ ಹೇಮಾಳನ್ನು ಹೋಲುತ್ತಿತ್ತು. ಮಕ್ಕಳಾದರೋ ತನ್ನ ತಾಯಿಯೆಂದೇ ಅವಳ ಹಿಂದೆ ಬೆನ್ನಟ್ಟಿ ಹೋಗಿದ್ದುವು. ತದನಂತರ ಅವಳು ಬೆದರಿಸಿದ್ದಕ್ಕೆ ಹಾಗೂ ತಾವು ಈ ಹಿಂದೆ ಕಂಡಿಲ್ಲದ ಅವಳ ಉಡುಪನ್ನು ಕಂಡು ರೋದಿಸುವುದಕ್ಕೆ ಪ್ರಾರಂಭಿಸಿದುವು. ಕಾಕತಾಳ ನ್ಯಾಯದಂತೆ ಹುಡುಕಲು ಹೊರಟ ದಂಪತಿಗಳಿಗೆ ಮತ್ತೆ ತಲಪಿದುವು. ಆ ಗಡಿಬಿಡಿಯಲ್ಲಿ ಎರಡು ಪಕ್ಷದವರಿಗೆ ಏನೊಂದೂ ಅರ್ಥವಾಗಲಿಲ್ಲ.” ಅವರು ಮೂರನೆಯ ತರಗತಿ ಡಬ್ಬಿಗೆ ಹೋದರು. ಇವರು ದ್ವಿತೀಯ ತರಗತಿ ಡಬ್ಬಿಯನ್ನು ಯಥಾ ಪ್ರಕಾರ ಹತ್ತಿದರು. ಬಂಡಿ ಆಕಾಶವನ್ನೆಲ್ಲ ಕಪ್ರಗೆ ಮಾಡುತ್ತಾ, ಶಿಳ್ಳು ಹಾಕುತ್ತಾ ಮುಂದೆ ಮುಂದೆ ಹೊರಟಿತು.

ಗಾಡಿಯಲ್ಲಿ ಕುಳಿತಾಗ ಹೇಮಾ ಕ್ಷಣಹೊತ್ತು ಸ್ತಬ್ಧಳಾಗಿ ಕುಳಿತಿದ್ದಳು. ಇದೇನು ವಿಚಿತ್ರ! ಅವಳ ಬಳಿ ತನ್ನ ಮಕ್ಕಳು ಹೋಗಿದ್ದಕ್ಕಾಗಿ ಆಶ್ಚರ್ಯವಾಗಿರಲಿಲ್ಲ. ಒಂದೇ ಮುಖವನ್ನು ಹೋಲುವ ಆ ಹೆಂಗಸು ಯಾರಿರಬಹುದು. ಹಿಂದಿನ ಜನ್ಮದಲ್ಲಿ ಅಕ್ಕನೋ ತಂಗಿಯೋ ಆಗಿರಲಿಕ್ಕೂ ಸಾಕು ಮನುಷ್ಯರಿಂಟ ಮೇಲೆ ಒಂದೇ ತೆರನ ಮುಖಾಕೃತಿ ಯಾಕಿರಬಾರದು.

"ಏನ್ರೀ ನಿಮ್ಮ ಮಕ್ಕಳನ್ನು ನಮಗೆ ಕೊಟ್ಟಿರಾ?"

"ಅಯ್ಯೋ ನಿಮ್ಮ ಹಿಂದೆ ಹೋಗಿದ್ದರಲ್ಲಾ. ಧನ್ಯವಾದಗಳು...... ಬಹಳ ಧನ್ಯವಾದಗಳು.

—ತನ್ನ ಪತಿಯ ಮಾತಾಗಿತ್ತದು.

ಇನ್ನೂ ಏನೆಲ್ಲ ಮಾತಾಡಬೇಕೆಂದೆನ್ನಿಸಿತ್ತು ಅವರಿಗೆ. ಆದರೆ ಅಷ್ಟೆಲ್ಲಾ ಮಾತಾಡಲು ಎಲ್ಲಿಯ ಸಮಯ. ಅಂತೂ ತದ್ರೂಪ ತನ್ನಂತೇ ಇರುವ ವ್ಯಕ್ತಿಯ ದರ್ಶನವಾಯಿತು. ರೇಣು ಅಷ್ಟಾಗಿ ಈ ಘಟನೆಯ ಬಗ್ಗೆ ಹಚ್ಚಿಕೊಳ್ಳಲಿಲ್ಲ. ಆದರೆ ಹೇಮಳಿಗೆ ಮಾತ್ರ ಏನೋ ಒಂದು ತೆರನ ಸಂವೇದನೆ ಅವಳ ಮುಖಾವಲೋಕನವಾದಂದಿನಿಂದ ಉಂಟಾಗಿತ್ತು. ಅವಳ ಬಗೆಗೆ ಆದರ ಹುಟ್ಟಿತ್ತು. ಅವಳ ರೂಪವಾದರೋ ಕಡೆದ ವಿಗ್ರಹದಂತೆ ಅಚ್ಚೊತ್ತಿತ್ತು. ಬೆಂಗಳೂರು ಮುಟ್ಟಿದ ಮೇಲೆ ಏನೋ ಒಂದುವಿಧವಾದ ಸಮಾಧಾನ ಉಂಟಾಯಿತು. ಆದರೆ ರೇಣುವಿಗೆ ಯಾವಾಗಲೋ ಆ ಘಟನೆನೆನಪಿನ ಪರದೆಯಿಂದ ಅಳಿಸಿಹೋಗಿತ್ತು.

......ಯಥಾಪ್ರಕಾರ ಸಂಸಾರ ಪ್ರಾರಂಭವಾಯಿತು. ದಿನವೆಲ್ಲಾ ಅಂಗಡಿಯಲ್ಲಿ ದುಡಿದು ಸಾಯಂಕಾಲ ಹೆಂಡತಿಯೊಡನೆ ವಿಹಾರ ಹೊರಡುತ್ತಿದ್ದ. ಹೇಮಾಳ ಅಪೇಕ್ಷೆಯ ಮೇರೆಗೆ ಸೀರೆ, ಒಡವೆಗಳನ್ನು ತಂದುಕೊಡುತ್ತಿದ್ದ. ಮಕ್ಕಳಿಗೆ ಯಾವುದಕ್ಕೂ ಕೊರತೆ ಮಾಡಿರಲಿಲ್ಲ. ಪುಣ್ಯವಶಾತ್ ಅಕ್ಕಪಕ್ಕದವರೂ ಪ್ರೇಮಲ ದೃಷ್ಟಿಯಿಂದ ಇವರನ್ನು ಕಂಡುಕೊಂಡು ಹೋಗುತ್ತಿದ್ದರು. ಯಾರೊಂದಿಗೂ ಎಂದೂ ಹೇಮಾ ಜಗಳ ಕಾಯಲಿಲ್ಲ. ಎಲ್ಲರೂ "ಹೇಮಳ ಭಾಗ್ಯವೇ ಭಾಗ್ಯ" ಎಂದೆನ್ನುತ್ತಿದ್ದರು.

* * * *

"ಸ್ವಾಮಿ! ನನಗೆ ಕೆಲಸಕೊಟ್ಟು ಪುಣ್ಯ ಕಟ್ಟಿಕೊಳ್ಳಬೇಕು."

"ಈ ಮುಂಚೆ ಎಲ್ಲಿದ್ದಿ?" ಎಂದ ರೇಣು.

"ಸಾವ್ಕಾರ್ ರಾಯಸಾಹೇಬರ ಬಳಿ ಇದ್ದೆ. ನನ್ನದು ದಾವಣಗೆರೆ. ರಾಯಸಾಹೇಬರು ತೀರಿದನಂತರ ಅವರ ಮಕ್ಕಳು ನನ್ನನ್ನು ಕೆಲಸದಿಂದ ತೆಗೆದು ಬೇರೆಯವರನ್ನು ನೇಮಕ ಮಾಡಿಕೊಂಡರು."

"ಸರ್ವೀಸ್ ಎಷ್ಟಾಗಿದೆ?"

"ಆಗಲೇ ಹನ್ನೆರಡು ವರ್ಷಾಯಿತು. ಲೈಸೆನ್ಸ್ ಬಹಳ ವರ್ಷಗಳ ಹಿಂದೆಯೇ ಸಿಕ್ಕಿತು."

"ಸ್ಟೇಷನರಿ ಅಂಗಡಿ ಕೊಂಗಾಟಿ ನಾಗರಾಜಪ್ಪನವರು ನಿಮ್ಮ ಹತ್ತಿರ ಹೋಗಿ ಕೇಳಿ ಅಂತಂದರು. ಡ್ರೈವರ್ ಕೆಲಸ ಇಲ್ಲದೇ ಇದ್ದರೆ ಇನ್ನು ಯಾವುದಾದರೂ ಸಿಕ್ಕಬಹುದೂಂತ ಅಂದರು."

"ಆಗಲಿ. ನಾಳೆಯಿಂದ ಕೆಲಸಕ್ಕೆ ಬಾ. ನಿನ್ನ ಹೆಸರೇನು?"

"ರಾಜಶೇಖರ."

"ನಾಳೆ ಹಾಜರಾಗುತ್ತೀಯಾ?"

"ಅವಶ್ಯ ಬರ್ತೀನೆ. ನಮಸ್ಕಾರ ನಾನಿನ್ನು ಬರಲೆ?"

"ಒಳ್ಳೇದು."

ಮೂರನೆಯ ದಿವಸ ದಾವಣಗೆರೆಯಿಂದ ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಬಂದಿದ್ದ ರಾಜಶೇಖರ ಕೆಲಸದ ಮೇಲೆ ಉಪಸ್ಥಿತನಾದ.

"ಮನೆಯೆಲ್ಲಿ ಮಾಡಿದ್ದೀಯೆ?"

"ಚಾಮರಾಜ ಪೇಟೆಯಲ್ಲಿ ಸರ್."

"ಮಕ್ಕಳು ಮರಿ ಇವೆಯಾ?"

"ಇದೆ ಸ್ವಾಮಿ. ಒಂದು ಗಂಡು ಕೂಸು ನಿಮ್ಮ ದಯೆಯಿಂದ ಇದೆ."

"ಬಹಳ ನಿಯತ್ತಿನಿಂದ ಕೆಲಸ ಮಾಡಿಕೊಂಡು ಹೋಗಬೇಕು."

"ಉಪ್ಪುತಿಂದ ಮನೆಗೆ ಈ ದೇಹ ಎಂದೂ ಎರಡು ಬಗೆದಿಲ್ಲ ಸರ್."

"ಹಾಗೇ ಇರಬೇಕು. ದೇವರು ಅಂಥವರಿಗೆ ಒಳ್ಳೆಯದು ಮಾಡುತ್ತಾನೆ."

ರಾಜಶೇಖರ ಸಾಹುಕಾರ ರೇಣುರ ಹತ್ತಿರ ಕೆಲಸ ಸಿಕ್ಕಿತೆಂದು ಹೇಳಿದಾಗ ಹೆಂಡತಿ ನಿರ್ಮಲೆಗೆ ತುಂಬಾ ಸಂತೋಷವಾಯಿತು.

"ಬೆಂಗಳೂರಿಗೆ ಕೆಲಸ ಹುಡುಕಿಕೊಂಡು ಬಂದದ್ದಕ್ಕೆ ಸಾರ್ಥಕವಾಯ್ತಲ್ಲ."

"ಕೆಲಸ ಮಾಡಬೇಕು ಎನ್ನೋರಿಗೆ ದೇವರು ಸಹಾಯ ಮಾಡದೆ ಇರುತ್ತಾನೆಯೆ" ಎಂದ ರಾಜಶೇಖರ ತುಂಬು ಹೃದಯದಿಂದ.

"ಇನ್ನಾದರೂ ನಮ್ಮ ಕಷ್ಟ ಕಾರ್ಪಣ್ಯಗಳು ದೂರವಾಗಲಿ."

ಹೃದಯ ತುಂಬಿ ಬಂದಿತು. ಅವನ ಹೃದಯದಿಂದ ಬಂದ ಮಾತು ಅವಳ ಹೃದಯಕ್ಕೆ ಮುಟ್ಟಿತು. ಹೆಣ್ಣು ಹೃದಯ ಕಣ್ಣೀರು ಹಾಕಿತು.

"ಅಳಬೇಡ ನಿರ್ಮಲ! ಎಂಥ ಕಷ್ಟ ಕಾಲದಲ್ಲೂ ಧೈರ್ಯದಿಂದ ಬಾಳು ನಡೆಯಿಸಿಕೊಂಡು ಬಂದಿದ್ದೀಯೆ. ಈಗ ಸುಖ ನಮ್ಮನ್ನು ಬಂದು ಅಪ್ಪಿರುವಾಗ ಕಣ್ಣಿನಲ್ಲೇಕೆ ನೀರು."

ಅಷ್ಟು ಹೊತ್ತಿಗೆ ಮಗು ಪ್ರಸನ್ನಕುಮಾರ

"ಅಮ್ಮ! ನಾನು ಗಾಳೀಪಟ ಹಾರಿಸಿದೆ" ಅಂದುಕೊಂಡು ಬಂದು ತಂದೆತಾಯಿಗಳನ್ನು ಪ್ರಸನ್ನ ಪಡಿಸಿದ.

* * * *

ಒಂದು ದಿನ ಹೇಮಾ ರಾಜಶೇಖನೊಂದಿಗೆ ಹೇಳಿದಳು:

"ನಾಳೆ ನಾವು ನಗರದ ನದಿಗೆ ಊಟಕ್ಕೆ ಹೋಗಬೇಕು. ಬೆಳಗ್ಗೆ ಏಳು ಘಂಟೆಗೆಲ್ಲಾ ಕಾರು ತಂದು ಬಿಡಬೇಕು."

"ಕಾರು ಇಲ್ಲೇ ಗ್ಯಾರೇಜ್‌ನಲ್ಲಿರುತ್ತಲ್ಲಾ ತಾಯಿ."

ಹೇಮ ನಕ್ಕು ನುಡಿದಳು: "ಇಲ್ಲೇ ಇರುತ್ತೆ ಸರಿ. ಸಿದ್ಧತೆಯಾಗಿರಬೇಕೂಂತ ಅರ್ಥ."

"ಆಗಲಿ ಅಮ್ಮಾ."

ಅನೇಕ ದಿನಗಳಿಂದ ಅವರು ಬೆಂಗಳೂರು ತ್ಯಜಿಸಿ ಹೊರಗಡೆ ವಿಹಾರ ಹೊರಟಿರಲಿಲ್ಲ ಬೆಂಗಳೂರಿನ ಪ್ರೇಕ್ಷಣೀಯ ಸ್ಥಳಗಳು ಹಳಸಿದ ಮುದ್ದೆಯಾಗಿದ್ದವು.

ಸಕಲ ಪರಿವಾರ ಸಮೇತ ನಗರಕ್ಕೆ ಪ್ರಯಾಣ ಬೆಳೆಸಿದರು. ಹೇಮಾಳಿಗೆ ನಗರ ಹೊಸ ಊರೇನೂ ಆಗಿರಲಿಲ್ಲ. ತಾನು ಬಾಲ್ಯದಲ್ಲಿ ಕಳೆದ ಊರು. ತನ್ನ ವಿದ್ಯಾಭ್ಯಾಸ ನಡೆದ ಸ್ಥಳ. ಆದರೆ ತನ್ನ ಹೆಸರಿನ ಮನೆ, ಜಮೀನನ್ನು ಮಾರಾಟ ಮಾಡಲ್ಪಟ್ಟಿತ್ತು. ಕಾರನ್ನು ಸೀದಾ ನದಿಯ ದಂಡೆಗೆ ಹೊಡಿಸಲಾಯಿತು. ಪ್ರಹಸನ ಮಾತುಗಳಿಂದ ಪ್ರಯಾಣ ಕಳೆಯಲಾಗಿತ್ತು. ದಾರಿಯಲ್ಲಿ ಆ ಮಕ್ಕಳು ವಿವಿಧ ವಿಷಯಗಳ ಮೇಲೆ ವಿವಿಧ ಪ್ರಶ್ನೆಗಳನ್ನು ಕೇಳುತ್ತಿದ್ದರು. ಅವುಗಳಿಗೆಲ್ಲಾ ಸತಿಪತಿಯರು ಉತ್ತರ ಕೊಟ್ಟು ಸಾಕಾಗಿ ಹೋದರು.

ನದಿಯ ದಂಡೆಯ ಮೇಲೆ ಅಡಿಗೆ ಮಾಡಿದರು. ರಾಜಶೇಖರ, ರೇಣು ಒಂದೆಡೆಗೆ ಸ್ನಾನಮಾಡಲು ಉಪಕ್ರಮಿಸಿದರು. ಇನ್ನೊಂದೆಡೆ ತನ್ನ ಮಕ್ಕಳ ಸಮೇತ ಹೇಮ ಸ್ನಾನ ಮಾಡುತ್ತಿದ್ದಳು. ಆದಿನ ಮಳೆಯಾಗಿದ್ದರಿಂದ ಕೊಂಚ ಕೊಂಚ ಕೊಳಚೆ ನೀರು ಬರುತ್ತಿತ್ತು. ಹೇಮಾ ಕೊಳಚೆಯನ್ನು ಸರಿಸುತ್ತಾ ಮುಂದೆ ಮುಂದೆ ನಡೆದಳು. ಆದರೆ ವಿಧಿಯ ಬರಹವೇ ಬೇರೆ ಇತ್ತು! ಸೆಳವಿಗೆ ಸಿಕ್ಕು ಹರವಿಗೆ ಬಿದ್ದಳು. ದಂಡೆಯ ಮೇಲೆ ಸಾಬೂನು ಹಾಕಿಕೊಳ್ಳುತ್ತಿದ್ದ. ರಾಜಶೇಖರನ ಲಕ್ಷ್ಯಕ್ಕೆ ಇದು ಮೊದಲು ಬಿದ್ದಿತು. ಜಗ್ಗನೆ ನೀರಿಗೆ ಬಿದ್ದನು. ರಾಜಶೇಖರನಾದರೋ ಹಿಂದು ಮುಂದು ಯೋಚಿಸದೆ ಒಡತಿಯ ಸಂರಕ್ಷಣೆಗೆ ಪ್ರವಾಹ ಪತಿತನಾದ. ಅಷ್ಟು ಹೊತ್ತಿಗೆ ಎರಡುಬಾರಿ ಮೇಲಕ್ಕೆದ್ದು ಹೇಮಾ ಮುಳುಗಿದಳು. ರೇಣು ಗಗನ ಸಿಡಿದೇಳುವಂತೆ ಕೂಗಿದ. ಮಕ್ಕಳು ಕಣ್ಣೀರು ಇಂಗುವಂತೆ ಅತ್ತರು!......

ಮೂರನೆಯ ದಿನ ಎರಡು ಫರ್ಲಾಂಗ್ ದೂರದಲ್ಲಿ ಎರಡೂ ಹೆಣಗಳು ಸಿಕ್ಕವು. ರಾಜಶೇಖರ ತನ್ನೊಡತಿಯ ದೇಹವನ್ನು ಅಪ್ಪಿಕೊಂಡಿದ್ದ. "ರಾಜಶೇಖರ ನೀರಿನಲ್ಲಿ ಮುಳುಗಿ ಎತ್ತಲು ಪ್ರಯತ್ನಿಸಿರಬಹುದು. ಹೇಮಾ ಹೆದರಿಕೆಯಿಂದ ಆಲಿಂಗನ ಮಾಡಿ ಸಾವು-ಬದುಕುಗಳ ಮಧ್ಯೆ ಸಂಘರ್ಷಣೆ ಮಾಡಿರಬಹುದು. ಆತನಾದರೋ ಶಕ್ತಿಮೀರಿ ಹೋರಾಟ ನಡೆಯಿಸಿ ಸಾಧ್ಯವಾಗದೆ ತೀರಿದ್ದಾನೆ" ಎಂದು ಪೋಸ್ಟ್‌ಮಾರ್ಟಮ್ ಆಗುವಾಗ ಅಭಿಪ್ರಾಯ ಬಂದಿತು.

* * * *

ನಗರದ ನದಿಗೆ ಹೆಂಡತಿಯನ್ನು ಕಾಣಿಕೆಯಾಗಿಕೊಟ್ಟು ಇದೀಗ ಬೆಂಗಳೂರಿಗೆ ಹಿಂದಿರುಗಿದ್ದಾನೆ ತನ್ನ ಮಕ್ಕಳನ್ನು ಅದೆಂತು ಸಾಕುವುದು ಎಂಬ ಯೋಚನೆ, ಹೇಗೆ ರಾಜಶೇಖರನ ಹೆಂಡತಿಯನ್ನು ಸಂತೈಸುವುದು ಎಂದು ಇನ್ನೊಂದು ಯೋಚನೆ. ಅನುಪಮ, ವಿಜಯ, ರಾಜರನ್ನು ತಬ್ಬಲಿ ಮಾಡಿ ಹೋಗಲು ನಗರದ ಹೊಳೆಗೆ ಬಂದಿದ್ದೆಯಾ–ಎಂದೆಲ್ಲ ವಿಚಾರಗಳು ಹುಟ್ಟುತ್ತಿದ್ದುವು.

"ಅಪ್ಪಾ ಅಮ್ಮ ಎಲ್ಲಿ?" ರಾಜ ಕೇಳುತ್ತಿದ್ದ.

"ಆಕೆ ಯಾವಾಗ ಬರುತ್ತಾಳೆ?" ವಿಜಯ ದೈನ್ಯದಿಂದ ಪ್ರಶ್ನಿಸುತ್ತಿದ್ದ.

"ಅಪ್ಪಾ! ಅಮ್ಮನನ್ನು ಈಗಲೇ ತೋರಿಸು," ಎಂದು ಅನುಪಮ ಬೇಡಿಕೊಳ್ಳುತ್ತಿದ್ದಳು.

ಅವರೆಲ್ಲ ಪ್ರಶ್ನೆಗಳಿಗೆ ಅವನದು ಒಂದೇ ಉತ್ತರ:

"ಅವಳು ಸ್ವರ್ಗದಲ್ಲಿದ್ದಾಳೆ. ಯಾವಾಗ ಬರುತ್ತಾಳೋ ಗೊತ್ತಿಲ್ಲ."

ಬೆಂಗಳೂರಿಗೆ ಬರುತ್ತಲೇ ನಿರ್ಮಲನಿಗೆ ಸುದ್ದಿ ಮುಟ್ಟಿಸಲಾಯಿತು. ಪುನಃ ರೇಣು ಮನಸ್ಸಿನಲ್ಲಿಯೇ ಅಂದುಕೊಂಡ:

"ರಾಜಶೇಖರನ ಹೆಂಡತಿ ಎಂಥವಳೋ? ಏನೆಲ್ಲ ತನಗೆ ಛೀತೂರಿ ಹಾಕುವಳೋ! ನಿನ್ನ ಹೆಂಡತಿಗಾಗಿ ನನ್ನ ಕುಂಕುಮ ಅಳಿಸಿಹೋಯಿತು. ನಿಮ್ಮ ಸಿರಿವಂತಿಕೆಗೆ ಬೆಂಕಿಹಾಕಲಿ. ಯಾವ ಕೆಟ್ಟ ನಕ್ಷತ್ರದಲ್ಲಿ ನನ್ನವರು ನಿಮ್ಮ ಹತ್ತಿರ ಕೆಲಸ ಕೇಳಲು ಬಂದರೋ ನನ್ನ ವಂಶವೇ ಹಾಳಾಗಿ ಹೋಯಿತು."

ಹಜಾರದಲ್ಲಿ ಹುಡುಗರನ್ನು ಜವಾನ ಸಂತೈಸುತ್ತಲಿದ್ದ. ತಿಂಡಿಯ ಆಸೆಯನ್ನು ತೋರಿಸಿ, ತಾಯಿಯ ನೆನಪನ್ನು ಜವಾನ ಗಣಪ್ಪ ಮರೆಸಲು ಯತ್ನಿಸುತ್ತಿದ್ದ. ರಾಜು ಅಳುತ್ತಿದ್ದ. ವಿಜಯ ಅಮ್ಮನ ಬಗೆಗೆ ಪ್ರಶ್ನೆಗಳನ್ನು ಹಾಕುತ್ತಿದ್ದ. ಅನುಪಮ ಕಟೆದ ವಿಗ್ರಹದಂತೆ ಯೋಚಿಸುತ್ತಾ ಕುಳಿತ್ತಿದ್ದಳು. ಆಗ ನಿರ್ಮಲ ಬೋರಿಟ್ಟು ಅಳುತ್ತಾ ಬಂದಳು. ಪತಿದೇವನ ಕೂಡ ಕಳೆದ ಜೀವನದ ಸ್ಮೃತಿಗಳನ್ನು ನೆನೆಸಿಕೊಂಡು ಪ್ರಲಾಪಿಸುತ್ತಿದ್ದಳು. ಅವಳು ಹಜಾರದಲ್ಲಿ ಕಾಲಿಡುತ್ತಲೆ ಮೂವರೂ ಮಕ್ಕಳು "ಅಮ್ಮಾ! ಸ್ವರ್ಗದಿಂದ ಯಾವಾಗ ಬಂದೆ?" ಎಂದು ಪ್ರಶ್ನೆಗಳ ಮಾಲೆಯನ್ನು ಪ್ರಾರಂಭಿಸಿದರು.

"ನೀರಿನಲ್ಲಿ ಮುಳುಗಿ ಹೋಗಿದ್ದೆಯಾ?"

"ನೀರಿನೊಳಗೆ ಸ್ವರ್ಗಕ್ಕೆ ದಾರಿಯಿದೆಯಾ?"

ಎಷ್ಟು ತೆರನ ಪ್ರಶ್ನೆಗಳವು! ಅವರೀ ಪ್ರಶ್ನೆಗಳಿಗೆ ನಿರ್ಮಲ ಅಚ್ಚರಿಪಟ್ಟುಕೊಂಡಳು. ಅವಳ ದುಃಖ ಹೇಳದೆ ಕೇಳದೆ ಓಡಿಹೋಯಿತು.

ವಿಜಯ ರಾಜುಗಳನ್ನು ಎತ್ತಿಕೊಂಡು ಮುದ್ದಾಡಿದಳು. ಅನುಪಮ ಕೇಳಿದಳು: "ಎರಡೇ ದಿನಕ್ಕೆ ನೀನು ಸಣ್ಣಗೆ ಆಗಿರುವೆ. ಹರಕು ಬಟ್ಟೆ ಉಟ್ಟುಕೊಂಡಿದೀಯೆ."

ವಿಜಯ ಬೇಡಿಕೊಳ್ಳುವ ಸ್ವರದಲ್ಲಿ "ಅಮ್ಮಾ! ಇನ್ನುಮೇಲೆ ನಮ್ಮನ್ನು ಹೀಗೆ ಬಿಟ್ಟು ಹೋಗಬೇಡ. ನೀನೆಲ್ಲಿ ಹೋದರೂ ಜತೆಗೆ ಕರೆದುಕೊಂಡು ಹೋಗು," ಎಂದ.

ಹೇಮಾಳ ಮುಖವನ್ನು ತದ್ರೂಪ ಹೋಲುತ್ತಿದ್ದ ಈ ಅಪರಿಚಿತ ವ್ಯಕ್ತಿಯನ್ನು ನೋಡುತ್ತಾ ಗಣಪ್ಪ ಮಂತ್ರಮುಗ್ಧನಾಗಿ ಹೋಗಿದ್ದ. ಹೇಮ ಅದು ಹೇಗೆ ಜೀವಂತಳಾಗಿ ಬಂದಳೆಂದು ಅವನಿಗೆ ಬಿಡಿಸಲಾರದ ಜಟಿಲ ಸಮಸ್ಯೆಯಾಗಿತ್ತು. ಮಾತಾಡಲು ಶಬ್ದಗಳು ಬರುತ್ತಿದ್ದಿಲ್ಲ. ಬಾಯಿದ್ದೂ ಮೂಕನಾಗಿದ್ದ.

ಏತನ್ಮಧ್ಯೆ ಕಾರೊಂದು ಹೊರಗಡೆ ಬಂದು ನಿಂತಿತು. ಕಾರಿನಿಂದ ರೇಣು, ಹಂಪಮ್ಮ ವಗೈರೆ ಕೆಲವು ಜನಗಳು ಇಳಿದರು. ರೇಣು ಗಾಬರಿಯಿಂದ "ರಾಜಶೇಖರರ ಹೆಂಡತಿ ನೀವಾಗಿಯೇ ಇರಬೇಕು" ಎಂದನು.

ನಿರ್ಮಲ ಅಪ್ರತಿಭಳಾಗಿ "ಹೌದು! ಆ ದೌರ್ಭಾಗ್ಯೆ ನಾನು," ಎಂದಳು.

ಹಂಪಮ್ಮ ಏನು "ಮಗಳೇ! ಈಗ ನಿನ್ನನ್ನು ನೋಡುವ ಸುಯೋಗ ಒದಗಿತೇ!" ಎಂದು ಒಂದು ಕಥೆಯನ್ನು ಅಲ್ಲಿ ನೆರೆದವರ ಕೂಡ ಹೇಳಿದಳು. ಅದು ಅಜ್ಜಿ ಕಥೆಯಂತಿದ್ದರೂ ವಿಷಯ ತಥ್ಯವಾಗಿತ್ತು.

"ನಾನು ನಿನ್ನ ಮಗಳೆಂದು ಹೇಗೆ ನಂಬಲಿ. ನೀನು ನನ್ನ ತಂದೆ ತಾಯಿಗಳಿಗೆ ಮಾರಿದ ವಿಷಯ ನಿಜವೆಂದು ಹೇಗೆ ತಿಳಿಯಲಿ?"

"ನಿನ್ನ ತಂದೆತಾಯಿಗಳಿಗೆ ತಂತಿಯನ್ನು ನಿನ್ನೆಯೇ ಕೊಟ್ಟಿದ್ದೆ. ಅವರು ಈಗ ಬರುವ ಎಕ್ಸ್‌ಪ್ರೆಸ್‌ಗೆ ಬರಬಹುದು."

ಅದೇನು ಯೋಗವೋ ನಿರ್ಮಲನ ತಂದೆ ತಾಯಿಗಳು ಸರಿಯಾದ ಹೊತ್ತಿಗೆ ಹಾಜರಾದರು.

ಹಂಪಮ್ಮ ಬಿಕ್ಕಿಸುತ್ತಾ ಮತ್ತೆ ಪ್ರಾರಂಭಿಸಿದಳು:

"......ಸಮಾಜ ಮತ್ತು ನೀವು ಏನಾದರೂ ಅನ್ನಿ. ನಾನು ಹೊಟ್ಟೆಯ ಅನ್ನಕ್ಕೆ ಮಾರಿದ್ದು ನಿಜ. ನಾನು ಪಟ್ಟಪಾಡು ಅಷ್ಟಿಷ್ಟಲ್ಲ. ಕೈಹಿಡಿದಾತ ಸರಿಯಾಗಿ ನಡೆಸಿಕೊಳ್ಳಲಿಲ್ಲ. ಪ್ರೀತಿಸಿದವನು ಕೈಕೊಟ್ಟ. ನಾನು ಬರಗಾಲದಿಂದ ಸಂತ್ರಸ್ತಳಾಗಿ ಅವಳಿ-ಜವಳಿ ಮಕ್ಕಳನ್ನು ಮಾರಿಕೊಂಡ ಮರುದಿನವೇ ನನ್ನ ಗಂಡ ಕೆಲವು ಗೂಂಡಾಗಳ ಜೊತೆಗೆ ಬಂದು ಹೊತ್ತು ಕೊಂಡು ಹೋಗಿ ವಿಚಿತ್ರ ಹಿಂಸೆಗೆ ಗುರಿಪಡಿಸಿದ್ದ. ಬಾಳು ನಡೆಸಲು ಅಸಾಧ್ಯವಾಯಿತು. ಒಂದು ದಿನ ಅವನು ಕುಡಿದು ದಾರಿಯಲ್ಲಿ ಬರು ತ್ತಿದ್ದಾಗ ಮೋಟಾರು ಕೆಳಗೆ ಸಿಕ್ಕಿ ಸತ್ತ. ಎಷ್ಟೋ ವರ್ಷಗಳ ಅನಂತರ ನನ್ನ ಅವಳಿ ಮಕ್ಕಳ ಶೋಧಕ್ಕೆ ತೊಡಗಿ ಪತ್ತೆಹಚ್ಚಿದೆ. ಇಲ್ಲಿಯೇ ಇಬ್ಬರೂ ಇದ್ದಾರೆಂದು ತಿಳಿದು ಬಹಳ ಸಂತೋಷವಾಗಿತ್ತು. ಆದರೆ ಇಲ್ಲಿಗೆ ಬಂದ ಮೇಲೆ ಎದೆ ಒಡೆದುಹೋಗುವಂಥಾ ಸುದ್ದಿ ಕೇಳಿದೆ. ಅಳಿಯ ಮತ್ತೆ ಮಗಳ ಸಾವು. ನಿರ್ಮಲಾ! ನಿನ್ನನ್ನಾದರೂ ಕಣ್ಣಾರೆ ಕಂಡೆ. ಅವಳನ್ನು ಕನಸಿನಲ್ಲೂ ನೋಡುವಂತಿಲ್ಲ."

ನಿರ್ಮಲನ ಸಾಕು ತಂದೆತಾಯಿಗಳೂ ಅಳುತ್ತಿದ್ದರು. ಎಲ್ಲರೂ ಅಶ್ರುಗಳನ್ನು ತೊಟ್ಟಿಕ್ಕಿಸುತ್ತಿದ್ದರು ರೇಣು ಭಾರವಾದ ಹೃದಯದಿಂದ, "ಅವಳನ್ನು ಫೋಟೋದಲ್ಲಿ ನೋಡಿ ತೃಪ್ತಿ ಪಟ್ಟುಕೊಳ್ಳೋದೆ......" ಎಂದಾಗ ಮೇಲೆ ತೂಗಹಾಕಿದ ಭಾವಚಿತ್ರದತ್ತ ಎಲ್ಲರ ಮನಸ್ಸು ಹೋಯಿತು. ಹೇಮಳ ಭಾವಚಿತ್ರವನ್ನು ನೋಡಿ ಹಂಪಮ್ಮನ ದುಃಖ ಕಟ್ಟೆಯೊಡೆದು ಹರಿಯಿತು. ಉಪ್ಪು ನೀರು ಮುಖದಲ್ಲೆಲ್ಲಾ ಹರಿಯಿತು. ಆಗ ಮೂವರು ಮಕ್ಕಳು ಪ್ರಲಾಪಿಸಲು ಪ್ರಾರಂಭಿಸಿದರು:

"ಅಮ್ಮಾ......ಅಮ್ಮಾ ಅಳಬೇಡಮ್ಮ ಸ್ವರ್ಗದಿಂದ ಬಂದೀದಿ ಯಲ್ಲಾ......" ಅನುಪಮನ ಸಮಾಧಾನವಾಗಿತ್ತು.

"ಅಪ್ಪಾಜಿ ಅಮ್ಮನನ್ನು ಸಮಾಧಾನ ಮಾಡು" ಎಂದು ಪಂಚೆಯ ನೆರಿಗೆಗಳನ್ನು ಎಳೆದುಕೊಂಡು ಬಂದ ವಿಜಯ.

"ಅಮ್ಮಾ, ಅಳಬೇಡ ನನಗೂ ಅಳುವಂತಾಗುತ್ತೆ" ಎಂದ ರಾಜು.

ಎಲ್ಲರ ಮುಖಗಳೂ ಅರಳಿದವು. ತನ್ನ ಹೆಂಡತಿ ಹೇಮಳಂತೆಯೇ ನಿರ್ಮಲ ಇದ್ದಳು. ಮೂಗು, ತುಟಿ, ಬಾಯಿ, ಹಣೆ, ತಲೆಯ ಆಕಾರ, ಉದ್ದ ಎಲ್ಲ ಹೇಮಳಂತೆಯೇ ಇದ್ದಳು. ಈ ಹಿನ್ನೆಲೆಯ ಕಥೆ ತಿಳಿಯ ದಿದ್ದರೆ ಮಕ್ಕಳಂತೆ ಆತನೂ ಮತಿಭ್ರಾಂತನಾಗಿ ಅಪ್ಪುತ್ತಿದ್ದನೋ ಏನು ಕಥೆಯೋ! ನಿರ್ಮಲ ತನ್ನ ಸಾಕು ತಂದೆತಾಯಿಗಳಿಂದ ನಿಜ ಸಂಗತಿಯನ್ನು ಕೇಳಿದಳು. ತಮಗೆ ಮಕ್ಕಳಾಗದಿದ್ದುದರಿಂದ ಚೌಡಮ್ಮ ಎಂಬುವಳಿಂದ ಕೊಂಡುಕೊಂಡರಂತೆ ಅಂತೆಯೇ ಹೇಮಾಳ ಸಾಕು ತಂದೆತಾಯಿಗಳೂ ಕೊಂಡುಕೊಂಡಿರಬಹುದೆಂದು ಹೇಳಿದರು, ಅವರ ಊಹೆ ನಿಜವಾಗದೆ ಸುಳ್ಳಾದೀತೆ.

ನಿರ್ಮಲನ ತಂದೆ ಶಿವಲಿಂಗಪ್ಪ ಹೇಳಿದರು:

"ತಬ್ಬಲಿ ಮಕ್ಕಳನ್ನಾಗಿ ಮಾಡಿ ರೇಣೂರ ಹೆಂಡತಿ ಹೋದಳು. ಮಕ್ಕಳಾದರೋ ನಿನ್ನನ್ನೇ ತಾಯಿಯೆಂದು ನಂಬಿ ಮುದ್ದಾಡುತ್ತಿವೆ. ರೇಣುವೂ ಹೇಮಾಳನ್ನು ಕಂಡಷ್ಟೇ ಸಂತೋಷವಾಗಿದ್ದಾನೆ. ದುಃಖದ ಕಾರ್ಮೋಡಗಳಿಂದ ಅವನ ಮುಖ ಆಚ್ಛಾದಿತವಾಗಿ ಕಂಗೆಟ್ಟು ಹೋಗಿತ್ತು. ಈಗ ಲಕಲಕಿ ಹೊಳೆಯುತ್ತಾ ಇದೆ. ಈ ಮನೆ ಬೇರೆಯಲ್ಲ......"

"ನಿನ್ನ ಮನೆ ಬೇರೆಯಲ್ಲ. ಇಬ್ಬರೂ ಅಕ್ಕತಂಗಿಯರೇ ಅಲ್ಲವೇ? ನೀನು ತಬ್ಬಲಿ ಮಕ್ಕಳ ನಿಜವಾದ ತಾಯಿಯಂತೆ ಇದ್ದು ಒಂದು ಸಂಸಾರ ವನ್ನು ಉದ್ಧಾರಮಾಡಿದ ಪುಣ್ಯ ಕೆಲಸಕ್ಕೆ ಭಾಗಿಯಾಗು" ಎಂದು ಶಿವ ಲಿಂಗಪ್ಪನವರ ಮಾತನ್ನು ಮಧ್ಯೆಯೇ ತಡೆದು ಮುಂದುವರಿಸಿ ರೇಣು ಹೇಳಿದ.

ನಿರ್ಮಲ ಬಾಗಿ ಮೂವರು ಮಕ್ಕಳನ್ನೂ ತಬ್ಬಿದಳು. ಎಲ್ಲರ ಮುಖಗಳು ಹೂವಿನ ಹಾಗೆ ವಿಕಸಿತವಾದವು. ಕಣ್ಣುಗಳು ಆನಂದ ಬಾಷ್ಪವನ್ನು ಸುರಿಸಿದವು.

ಸಾರಥಿಯ ದುರಂತ

ರಾಣೋಜಿ ಬೀಡಿಯ ಹೊಗೆಯನ್ನು ಪುಂಖಾನುಪುಂಖವಾಗಿ ಬಿಡುತ್ತಾ ಹೇಳಿದ: "ರಾತ್ರಿಯೆಲ್ಲಾ ನಿದ್ದೆಯೇ ಇಲ್ಲಣ್ಣ. ಬೆಂಗಳೂರಿನಿಂದ ಲಾರಿ ಬಿಟ್ಟದ್ದು ಸೀದಾ ಗಬ್ಬೂರು ಮುಟ್ಟುವ ತನಕ ಹೊಡೆದುಕೊಂಡು ಬಂದೆ."

"ಗಬ್ಬೂರಿನಲ್ಲಿ ನಿದ್ದೆ ಮಾಡಲಿಲ್ಲವೆ?" ಸಾಹುಕಾರ ರೇವಣ್ಣ ತನ್ನ ಲಾರಿ ಚಾಲಕನೊಡನೆ ಪ್ರಶ್ನಿಸಿದ.

"ಇಲ್ಲವಣ್ಣ. ಬೆಳಕು ಹರಿಯುತ್ತಲೆ ಸಾಮಾನು ಹಾಕಿಕೊಂಡು ನಿಮ್ಮ ಜೊತೆಗೆ ಬಂಡೂರಿಗೆ ಬರಲಿಲ್ಲವೆ."

"ಇರಬಹುದು ರಾಣೋಜಿ. ಸುಸಮಯ ಬಿಟ್ಟುಕೊಡಬಾರದು. ನಮ್ಮ ಖಾಯಂ ಗಿರಾಕಿಗಳಿಗೆ ನಾವಿಲ್ಲ ಅನ್ನಬಾರದು. ಊರಿಗೆ ಹೋದ ಮೇಲೆ ನಾನೆಲ್ಲಾ ಕೊಡುತ್ತೇನೆ. ಈಗ ಒಂದು ರೂಪಾಯಿ ತೆಗೆದುಕೋ. ಎರಡು ಬಿಟ್ಟು ನಾಲ್ಕು ಲೋಟ ಚಹ ಕುಡಿ. ಬಿಡು ಗಾಡಿ."

ಸಾಹುಕಾರ ರೇವಣ್ಣನ ಒತ್ತಾಯಕ್ಕೆ ಕಟ್ಟುಬಿದ್ದು ರಾಣೋಜಿ ಒಪ್ಪಿಕೊಂಡ. ಕ್ಲೀನರ್ ರಾಮುಸಿಂಗನನ್ನಾದರೂ ಜತೆಗೆ ಕರೆದುಕೊಂಡು ಬಂದಿದ್ದರೆ ಒಳಿತಾಗುತ್ತಿತ್ತೆಂದು ನೆನೆದ. ತನಗೆ ತೀರ ಆಯಾಸವಾದಾಗ ಚಾಲನೆ ಮಾಡಲು ಕುಳ್ಳಿರಿಸಬಹುದಿತ್ತು. ಮಿತಿಮೀರಿದ ಬಿಟ್ಟಿ ಕೆಲಸದಿಂದ ಅವನಿಗೂ ಹಾಳಾದ ಕಾಯಿಲೆ. ಒಳ್ಳೆಯ ಮಾಲಕ......ಒಳ್ಳೆಯ ಕೆಲಸ!......ಹ್ಞೂ! ಬೇಗ ಗಬ್ಬೂರಿಗೆ ಹೋದರೆ ನವಜಾತ ಕೂಸನ್ನಾದರೂ ನೋಡಬಹುದು. ಹಿಂದಿನ ದಿನವೇ ಅವಳನ್ನು ವಾರ್ಡಿಗೆ ಸೇರಿಸಿದೆ. ಈಗ ತುಂಬಾ ನೋವು ತಿನ್ನುತ್ತಿರಬಹುದು. ಮೊದಲ ಹೆರಿಗೆ ಯಾವಾಗಲೂ ಕೊಂಚ ತ್ರಾಸದಾಯಕವಂತೆ. ಅವಳ ಹೆರಿಗೆ......ಕುಲವರ್ಧಕ ಹುಟ್ಟುತ್ತಾನೋ ಅಥವಾ ಕುಲವರ್ಧಕಳೋ! ಎಂದೆಲ್ಲಾ ಯೋಚಿಸಿ ನುಡಿದ. "ಆಗಲಿ ಅಣ್ಣ. ಅಕ್ಕಿ ಚೀಲ ಹೇರಿಸಿಬಿಡು. ಹೊರಟು ಬಿಡೋಣ. ಆಗಲೇ ಎಷ್ಟು ಹೊತ್ತಾಗಿದೆಯಲ್ಲಣ್ಣ!"

"ಈಗಿನ್ನೂ ಒಂದು ಘಂಟೆ!" ಎಂದು ರೇವಣ್ಣ ಅಪ್ರತಿಭನಾಗದೆ.

ಒಂದು ಘಂಟೆ ಅಷ್ಟೇನೂ ಹೊತ್ತಲ್ಲ ಎಂಬ ಭಾವ ಅವನ ಮುಖದಲ್ಲಿ ಮೂಡಿತ್ತು. ರಾಣೋಜಿ ಒಪ್ಪಿದ್ದೇ ತಡ ಮಾಲಕ ರೇವಣ್ಣ ಅಕ್ಕಿ ಮೂಟೆಗಳನ್ನು ಹೇರಿಸಿದ. ಅವರಿಬ್ಬರೂ ನಾಟಕ ಮಂದಿರದ ಬಳಿ ಬಂದು ತಿಂಡಿ ಕಾಫಿಯನ್ನು ಮತ್ತೊಂದು ಸಾರಿ ತೆಗೆದುಕೊಂಡರು. ರೇವಣ್ಣ ಕಾಫಿ ಕುಡಿದು ಸಿಗರೇಟು ಕೊಡುತ್ತಾ, "ಹೊಡೆದು ಬಿಡು. ಸೀದಾ ಗಬ್ಬೂರಿನಲ್ಲೇ ನಿಲ್ಲಿಸಬೇಕು" ಎಂದ.

ಲಾರಿಯೊಳಗೆ ಕುಳಿತಿದ್ದ ರಾಣೋಜಿ ತುಂಬಾ ವೇಗವಾಗಿ ಗಾಡಿ ನಡೆಸುತ್ತಿದ್ದ. ನಿದ್ದೆಯಿಲ್ಲದ ಕೆಂಪಡರಿದ ಕಣ್ಣುಗಳು, ಗರ್ಭಿಣಿ ಹೆಂಡತಿಯ ಬಗೆಗೆ ಯೋಚನೆ, ಹಣದ ಮುಗ್ಗಟ್ಟು........ಒಂದೇ ಎರಡೇ! ಕೈ ಯಾಂತ್ರಿಕವಾಗಿ ಸ್ಟೀರಿಂಗ್ ವ್ಹೀಲನ್ನು ಸುತ್ತಿಸುತ್ತಿತ್ತು. ಮಧ್ಯೆ ಮಧ್ಯೆ ಆಳವಾದ ಆಕಳಿಕೆ. ಭಾರವಾದ ತಲೆ. ಅಂತೂ ಗಾಡಿ ಹೋಗುತ್ತಿತ್ತು. ಪಕ್ಕದಲ್ಲಿ ರೇವಣ್ಣ ತೂಕಡಿಸುತ್ತಾ ಒರಗಿಕೊಂಡು ಕುಳಿತಿದ್ದ. ಸ್ಪೀಡೋ–ಮೀಟರ್ ಐವತ್ತು ಅರವತ್ತರ ವರೆಗೆ ತೋರಿಸುತ್ತಿತ್ತು. ಮೈಲುಗಲ್ಲುಗಳು ಫರ್ಲಾಂಗ್ ಕಲ್ಲಿನ ಹಾಗೆ ಸುಳಿದು ಸುಳಿದು ಹಿಂದೆ ಹೋಗುತ್ತಿದ್ದವು. ನಿರ್ಜನ ರಸ್ತೆಯಲ್ಲಿ ಲಾರಿಯೊಂದೇ ಗುಂಯ್ ಗುಟ್ಟಿಕೊಂಡು ಹೋಗುತ್ತಲೇ ಇತ್ತು. ಇಲ್ಲಸಲ್ಲದ ಯೋಚನೆಗಳು ಆ ಶಾಂತ ವಾತಾವರಣದಲ್ಲಿ ಮುತ್ತಿ ಅವನನ್ನು ಬಸವಳಿಸುತ್ತಿದ್ದುವು. ತಲೆಕೆಟ್ಟು ರಾಡಿಯಂತಾಗಿ ಹೋಗಿತ್ತು. ದಾರಿ ತುಂಬಾ ಸವೆದ ಮೇಲೆ ಮೆಲ್ಲಗೆ ಹೇಳಿದ.

"ಅಣ್ಣಾ ನಿದ್ದೆ ಬಹಳ ಬರುತ್ತಾ ಇದೆ."

"............"

ರೇವಣ್ಣ ಪೂರ್ಣ ನಿದ್ದೆಹೋಗಿದ್ದ. ಅವನೇನು ರಾಣೋಜಿಯಂತೆ ಹಿಂದಣ ರಾತ್ರಿ ಪೂರ್ತಿ ನಿದ್ದೆಗೆಟ್ಟಿರಲಿಲ್ಲ. ಆದರೂ ಪ್ರಕೃತಿಯ ನಿಯಮದಂತೆ ನಿದ್ದೆಯ ಆಳಕ್ಕೆ ಇಳಿದಿದ್ದ. ಲಾರಿ ತನ್ನ ಮುಂದಣ ದಾರಿಗೆ ಬೆಳಕು ನೀಡುತ್ತಾ ವಾಯುವೇಗದಲ್ಲಿ ಹೊರಟಿತು. ಇನ್ನೂ ಮೂವತ್ತು ಮೈಲುಗಳು ಉಳಿದಿರಬಹುದು. ರಾಣೋಜಿಗೆ ತಡೆಯಲಸಾಧ್ಯವಾದ ಆಯಾಸ, ಕಣ್ಕಟ್ಟುವ ನಿದ್ದೆ — ಕಣ್ಣಿನ ರೆಪ್ಪೆಗಳನ್ನು ಯಾರಾದರೂ ಪಕ್ಕದಲ್ಲಿ ನಿಂತುಕೊಂಡು ಎತ್ತಿ ಹಿಡಿದುಕೊಂಡರೆ ಮಾತ್ರ ಸಾಧ್ಯ ಎಂದೆನ್ನಿಸಿತು. ಲಾರಿಯ ವೇಗವನ್ನು ಕಡಮೆ ಮಾಡಿ ತಟ್ಟನೆ ನಿಲ್ಲಿಸಿದ. ಒಂದೇ ಬಾರಿಗೆ ನಿಲ್ಲಿಸಿದ್ದರಿಂದ ರೇವಣ್ಣನ ದೇಹ ಮುಂದಕ್ಕೆ ತೊನೆದು ಹಿಂದಕ್ಕೆ ಬಡಿಯಿತು.

ತಲೆಗೆ ಕೊಂಚ ಏಟು ಬಿತ್ತು. ನಿದ್ದೆಯ ಆಳದಿಂದ ಎದ್ದು ಬಂದು ರೇವಣ್ಣ ಗೊಂದಲದ ಧ್ವನಿಯಲ್ಲಿ ಹೇಳಿದ.

"ಯಾಕೋ ರಾಣೋಜಿ?"

"ತಗ್ಗಿನಕೇರಿ ಬಂದಿತಣ್ಣ."

"ಬಂದರೆ ಏನು ಮಾಡಬೇಕು"

"ನಿದ್ದೆ ತಡೆಯುವುದಕ್ಕೆ ಸಾಧ್ಯವಿಲ್ಲಣ್ಣ. ಕೊಂಚ ಹೊತ್ತು ಇಲ್ಲೇ ವಿಶ್ರಾಂತಿ ತೆಗೆದುಕೊಂಡು ನಸುಬೆಳಕು ಹರಿದಾಗ ಹೋದರಾಯಿತು."

"ಒಳ್ಳೇ ದರಿದ್ರ ಸಿಕ್ಕಿದಲ್ಲೋ. ಈ ಛಳಿಗೆ ಈ ಗಾಡಿ ಧಡಕಿಗೆ ನಿದ್ದೆಯನ್ನಾದರೂ ಹೇಗೆ ಮಾಡುತ್ತೀರೋ ನಾ ಬೇರೆ ಕಾಣೆ."

"ನಾನೆಲ್ಲಾ ಮಾಡುತ್ತೇನಣ್ಣ. ಗಾಡಿಯನ್ನು ನಿಲ್ಲಿಸಿದರೆ ಧಡಕು ಎಲ್ಲಿಯದು"

"ಅದೆಲ್ಲಾ ಸಾಧ್ಯವಿಲ್ಲ. ಬೆಳಗ್ಗೆ ಗಾಡಿ ಮತ್ತೆ ಹೊರಡಬೇಕು. ನೀ ಬರದಿದ್ದರೆ ಮಲಗಿಕೊಳ್ಳುವೆಯಂತೆ. ರಾಮಸಿಂಗನನ್ನಾದರೂ ಕಳುಹಿಸಿದ ರಾಯಿತು.

"ಛಿ! ನನಗಂತೂ ಸಾಧ್ಯವೇ ಇಲ್ಲ......" ತುಂಬಾ ನಿರ್ಧಾರದ ಧ್ವನಿಯಲ್ಲಿ ಉಸುರಿದ.

ರೇವಣ್ಣನಿಗೆ ಮಿತಿಮೀರಿದ ಕೋಪ ಉಕ್ಕಿ ಹರಿಯಿತು. ಬಂಡೂರಿನಲ್ಲಿ ಇದೇ ಮಾತು ಆಡಿದ್ದರೆ ಒಂದೇಟು ಕೊಟ್ಟುಬಿಡುತ್ತಿದ್ದೆ. ಎಂಬ ನೋಟದಿಂದ ಅವನನ್ನು ನೋಡಿದ. ನಿದ್ದೆಯ ಗುಂಗಿನಲ್ಲಿ ಮುಳುಗಿದ್ದ ರಾಣೋಜಿ ಅವನ ಕಣ್ಣಿನಾಳದಲ್ಲಿದ್ದ ಅಂಶವನು, ಗ್ರಹಿಸಲಿಲ್ಲ. ಆದರೂ ಸಾಹುಕಾರರ ಆಜ್ಞೆ! ಬೇರೆ ನುಡಿಯದೆ ಆಕ್ಸಿಲೇಟರ್ ಮೇಲೆ ಕಾಲಿಟ್ಟು ಲಾರಿ ಬಿಟ್ಟ. ಕನಸಿನಲ್ಲಿ ಲಾರಿಯನ್ನು ನಡೆಸುತ್ತಿದ್ದಂತೆ ತೋರುತ್ತಿತ್ತು. ಕಣ್ಣೆಳೆಯುತ್ತಿತ್ತು, ತಲೆ ಮಂಕಾಗಿತ್ತು, ಹೃದಯ ಭಾರವಾಗಿತ್ತು. ಸ್ಪೀಡೋಮೀಟರ್ ತನ್ನ ದ್ರುತಗತಿಯನ್ನು ತೋರಿಸುತ್ತಿತ್ತು.

ಪುನಃ ಕೆಲವು ಮೈಲಿಗಳು ಹಿಂದೆ ಹೋದುವು.

ರಾಣೋಜಿ ತಿರುಗಿ ತನ್ನ ತೀರಲಾಗದ ಬಯಕೆಯನ್ನು ಹೇಳಲೋ ಬೇಡವೋ ಎಂದು ಮೆಲುಧ್ವನಿಯಲ್ಲಿ ಪ್ರಕಟಪಡಿಸಿದ.

"ಅಣ್ಣಾ! ಒಂದು ಫರ್ಲಾಂಗ್ ದೂರವೂ ಬಿಡುವುದಕ್ಕಾಗುವುದಿಲ್ಲ. ಕಣ್ಣು ಬಹಳ ಎಳೆಯುತ್ತಾ ಇದೆ ಬೆಳಕು ಹರಿಯುವ ತನಕ ಇಲ್ಲೇ ಮುಂದೆ ಬರುವ ಊರಿನಲ್ಲಿ ನಿಲ್ಲಿಸೋದು. ಒಂದು ಘಳಿಗೆ ನಿದ್ದೆ ಮುಗಿದ ನಂತರ ಬಿಟ್ಟರಾಯಿತು."

ಆತ ಅಷ್ಟು ಹೇಳಿದ್ದೇ ಅಲ್ಲದೆ ಬ್ರೇಕು ಹಾಕಿ ನಿಲ್ಲಿಸಿಯೇ ಬಿಟ್ಟ. ರೇವಣ್ಣ ತನ್ನ ಅರೆನಿದ್ದೆಯಿಂದ ಎಚ್ಚೆತ್ತು ಕೆಳಗಿಳಿದು ಸಿಗರೇಟು ಹಚ್ಚಿದ ಮತ್ತು ಹೇಳಿದ:

"ಒಂದು ತಟ್ಟೆ ಅನ್ನ ಉಣ್ಣು ಹೋಗು. ನಿಮ್ಮಂಥವರನ್ನು ಕಟ್ಟಿ ಕೊಂಡು ಉದ್ಧಾರವಾದಂತೆಯೆ."

"ಇಲ್ಲ......ಅಣ್ಣ!"

"ಏನಿಲ್ಲ, ನಿನ್ನ ತಲೆ! ಹೋಗು ಹಿಂದೆ ಮಲಗಿಕೋ ಹೋಗು"

ರಾಣೋಜಿ ಶಾಂತಸ್ವರದಲ್ಲಿ ಹೇಳಿದ: "ಹಾಗಾದರೆ ಹೊಡೆಯುತ್ತೇನೆ ಬಿಡಣ್ಣ."

"ಸುಮ್ಮನೆ ಮಲಗಿಕೋ ಹೋಗು. ನನಗೇನು ಗಾಡಿ ಚಾಲೂ ಮಾಡುವುದಕ್ಕೆ ಬರುವುದಿಲ್ಲೇನು. ಅದೇನು ಮಹಾ ವಿದ್ಯೆ."

ರೇವಣ್ಣ ಮುನಿಸಿಗೆ ಪಿಟ್ಟೆನ್ನದೆ ಅಕ್ಕಿ ಚೀಲಗಳ ಬದಿಗೆ ಮಲಗಿದ. ಲಾರಿ ಮತ್ತೆ ಹೊರಟಿತು ತೀರ ಆಯಾಸಪಟ್ಟಿದ್ದ ರಾಣೋಜಿಗೆ ಕಣ್ಣು ಹತ್ತಿತು.

'ಲಾರಿ ನಡೆಸುವುದೊಂದು ದೊಡ್ಡ ವಿದ್ಯೆಯೆ? ಮಹಾ ವಿದ್ಯೆಯೆಂದು ಈ ಚಾಲಕರಿಗೆ ಗರ್ವ. ಇಂತಹ ಚಾಲಕರು ನನ್ನ ಬಳಿ ಎಷ್ಟು ಜನ ಆಗಿ ಹೋಗಿಲ್ಲ ಆಗಾಗ ಬಿಡುವು ಮಾಡಿಕೊಂಡು ನಾನೇ ಲಾರಿ ನಡೆಸಿದರಾಯಿತು. ಅಭ್ಯಾಸವೂ ಆದಂತಾಗುತ್ತದೆ. ಮೇಲಾಗಿ ಇವರ ಗರ್ವದ ಹೆಚ್ಚಳ ಕಡಮೆಯಾದಂತಾಗುತ್ತದೆ......ಹ್ಞ!...... ವೀರಬಸಪ್ಪ ಹಣ ಕೊಟ್ಟರೆ? ಇಲ್ಲ......ಹಿಹಿಹಿ ಕೊಟ್ಟರು. ಮೊದಮೊದಲು ಹಿಂದು ಮುಂದು ನೋಡಿದರು. ಆ ಮೇಲೆ ಒತ್ತಾಯದ ನಂತರ......'

ರೇವಣ್ಣನ ವಿಚಾರ ಹರಿದು ಎಲ್ಲೆಲ್ಲಿಗೋ ಹೋಗುತ್ತಿತ್ತು ಸ್ಟೇರಿಂಗ್ ವ್ಹೀಲನ್ನು ಯಾಂತ್ರಿಕವಾಗಿ ತಿರುಗಿಸುತ್ತಿದ್ದ. ವೀರ ಬಸಪ್ಪ ಬಾಡಿಗೆಯ

ಹಣ ಪೂರ್ಣ ಕೊಟ್ಟರೋ ಇಲ್ಲವೋ ಎಂದು ಸಿಗರೇಟು ಕಚ್ಚಿಕೊಂಡು ಒಳಜೇಬಿಗೆ ಕೈ ಹಾಕಿದ. ಆದರೆ ಮುಂದೆ ನಿಮಿಷಾರ್ಧದಲ್ಲಿನ ಘಟನೆ ಅವನ ಕಣ್ಣು ಮುಸಕು ಮಾಡಿತು. "ಟರರ್...ಗಟ್...ಗಟ್" ಶಬ್ದದೊಡನೆ 'ಅವ್ವಾ' ಎಂಬ ದೀರ್ಘಯಾತನಾಮಯ ಸ್ವರವೂ ಕೇಳಿ ಬಂದಿತು. ಲಾರಿ ಹಾದಿ ತಪ್ಪಿ ರಸ್ತೆಯ ಬಲಭಾಗದ ದಿಣ್ಣೆಗೆ ವಾಲಿ ಬಿದ್ದಿತ್ತು. ಸಿಗರೇಟು ತುಂಡು ಒಗೆದು ತಡವರಿಸುತ್ತ ಇಳಿದ. ತನಗೆ ಮಾತ್ರ ಏನೂ ಆಗಿಲ್ಲವೆಂಬ ಸಂತೋಷ.

—ರಾಣೋಜಿಯ ನರಳುವಿಕೆಯ ಧ್ವನಿ ಕೇಳಿ ಬರುತ್ತಿತ್ತು. ಮುಸುಕಾದ ಕತ್ತಲೆಯಲ್ಲಿ ಲಾರಿಗೆ ಏನಾಗಿದೆಯೆಂದು ನೋಡಲೆತ್ನಿಸಿದ. ಆದರೆ ಏನೂ ಕಾಣದು. ಮತ್ತೆ ರಾಣೋಜಿಯ ಕೂಗು ಅವನ ಕಿವಿಯನ್ನು ಕೊರೆಯಿತು. ಹಿಂದುಗಡೆ ಹತ್ತಿ ನೋಡುತ್ತಾನೆ–ಚೀಲಗಳಲ್ಲಿ ಕೆಲವು ನೆಲದ ಮೇಲೆ ಹಾಗೂ ರಾಣೋಜಿಯ ಮೇಲೆ ಬಿದ್ದಿದ್ದುವು. ಆದಷ್ಟು ಶೀಘ್ರ ಅವನ ಮೇಲಿನ ಚೀಲಗಳನ್ನೆಲ್ಲಾ ತನ್ನ ಇಡೀ ದೇಹದ ಶಕ್ತಿಯನ್ನು ಉಪಯೋಗಿಸಿ ಪಕ್ಕಕ್ಕೆ ಎಳೆದು, ಅಲ್ಲಿಂದಲೇ ಕೆಳಕ್ಕೆ ಹಾರಿ ಕಾಲಿಗೆ ಬುದ್ಧಿ ಹೇಳಿದ.

"ಅವ್ವಾ.......ಅವ್ವಾ.......ನೀರು ನೀರು!" ಎಂಬ ಆರ್ತನಾದ ತನ್ನ ಕಿವಿಗೆ ಕೇಳಿ ಬರದೇ ಇರುವ ಜಾಗದವರೆಗೆ ದೆಯ್ಯ ಬಡಿದವರಂತೆ ಓಡಿದ ....ಕಲ್ಲು ಕತ್ತಲು ಎನ್ನದೆ ಓಡಿಯೇ ಓಡಿದ!

ಇದಾದಾಗ ಮಬ್ಬು ಬೆಳಕು!......

ಬೆಳ್ಳಿಚಿಕ್ಕಿ 'ಮಿಣಕ್ ಮಿಣಕ್' ಎಂದು ಈ ಹೃದಯ ವಿದ್ರಾವಕ ಘಟನೆಯನ್ನು ನೋಡಲು ಹೊರಬಂದಿತ್ತು. ಶೀತ ಹವೆ ತೀಡುತ್ತಿತ್ತು. ಗಳೆ ಕಟ್ಟಿಕೊಂಡು ಅಲ್ಲೊಬ್ಬ ಇಲ್ಲೊಬ್ಬ ರೈತರು ಹೊಲಗಳಿಗೆಬರುತ್ತಿದ್ದರು. ಎತ್ತುಗಳಿಗೆ ಬೈದು ಜಾನಪದ ಹಾಡುಗಳನ್ನು ಕುರುಕುತ್ತಾ ದೂರದಲ್ಲಿ, ಬಹುದೂರದಲ್ಲಿ ಬರುವ ಶಬ್ದ ರಾಣೋಜಿಗೆ ಸ್ಪಷ್ಟವಾಗಿ ಕೇಳಿ ಬರುತ್ತಿತ್ತು; ಜೊತೆಗೆ ಎತ್ತುಗಳ ಕೊರಳ ಗಂಟೆಗಳ ನಿನಾದವೂ ಸಹ. ಆದರೆ ರಾಣೋಜಿಯ ಕೂಗು ವ್ಯರ್ಥಾಲಾಪ......ಬೆಳಕು ಹರಿಯುವ ವೇಳೆಗೆ ಅವನ ನರಳುವಿಕೆಯನ್ನು ಕೇಳಿ ರೈತರು ಅಕ್ಕಪಕ್ಕದ ಹೊಲಗಳಿಂದ ಗುಂಪು ಕೂಡಿದರು. ನೀರು ಕುಡಿಸಿದರು. ಕಾಲನ್ನು ಮೃದುವಾಗಿ ಮುಟ್ಟಿ ನೋಡಿದರೆ—ಎಲುಬು ಮುರಿದು ಹೋಗಿ ನರಕಯಾತನೆಯನ್ನು ಕೊಡುತ್ತಿತ್ತು.

ಸಾಹುಕಾರ ರೇವಣ್ಣ ತಾನು ಗಬ್ಬೂರಿನಲ್ಲಿ ಇದ್ದನೆಂದೂ ಗಾಡಿಯ ಅಘಾತದ ಸುದ್ದಿ ತನಗೆ ಅದೇ ತಾನೆ ತಿಳಿದು ಘಾತ ನಡೆದ ಸ್ಥಳಕ್ಕೆ ಬರುವವನಾಗಿದ್ದನೆಂದೂ, ರಾಣೋಜಿಯನ್ನು ಗಬ್ಬೂರಿಗೆ ಹೇರಿಕೊಂಡು ಬಂದಿದ್ದ ರೈತರಿದುರಿಗೆ ಸುಳ್ಳು ಕುಟ್ಟಿದ. ರಾಣೋಜಿ ಪ್ರತಿಭಟಿಸಿ ಬಯಲಿಗೆಳೆದಾಗ ರೇವಣ್ಣ ನುಡಿದ.

"ಇಲ್ಲಿ ನೋಡು ರಾಣೋಜಿ.......ನಿನಗೇನೂ ಆಗದಂತೆ ನೋಡಿಕೊಳ್ಳುತ್ತೇನೆ. ಬ್ರೇಕ್ ಇನ್ಸ್ಪೆಕ್ಟರಿಗೆ ಹೇಳಿ ಎಲ್ಲಾ ಸರಿ ಮಾಡುತ್ತೇನೆ. ನಿನಗೆ ಜೀವನಾಂಶ ಕೊಡುವೆ. ಮಾನ ಉಳಿಸು. ಉಪ್ಪಿಟ್ಟೋನಿಗೆ ಎರಡಾಡಬೇಡ."

ಅದೇ ಆಸ್ಪತ್ರೆಯಲ್ಲಿ ಹೆಂಡತಿ ತುಂಬು ಪ್ರಸವವೇದನೆಯಿಂದ ನರಳುತ್ತಿದ್ದಳು. ಮನೆಯವರು ಆ ಕೋಣೆಗೂ ತನ್ನ ಕೋಣೆಗೂ ಕಕ್ಕಾಬಿಕ್ಕಿಯಾಗಿ ಓಡಾಡುತ್ತಿದ್ದರು. ಡಾಕ್ಟರರು ಆ ದಿನ ಕಟ್ಟುಹಾಕಿ ಮಾಡಬೇಕಾದ ಉಪಚಾರಗೈದರು. ನೂರನೆಯ ದಿನ ಅಣ್ಣನೊಡನೆ ಸಾಹುಕಾರನ ಅಭಿಪ್ರಾಯ ತಿಳಿಸಿದ.

"ರಾಣೂ ನಿನಗೆ ಒಂದು ಸೂಜಿ ಮೊನೆಯಷ್ಟಾದರೂ ಬುದ್ಧಿಯಿಲ್ಲೋ. ಈ ಸಾಹುಕಾರ ಬಡ್ಡೀಮಗ ಏನೆಲ್ಲ ಮೋಸ ಜನರಿಗೆ ಮಾಡಿದ್ದಾನೆಂದು ಗೊತ್ತಿದ್ದರೆ ಹೀಗೆ ಹೇಳುತ್ತಿರಲಿಲ್ಲ. ನನ್ನ ಅಭಿಪ್ರಾಯ ಕೇಳುತ್ತಿರಲಿಲ್ಲ. ರಾತ್ರಿಯಲ್ಲೇ ಓಡಿ ಬಂದು ಗಬ್ಬೂರು ಸೇರಿಕೊಂಡನಲ್ಲಾ, ಸ್ವಲ್ಪ ನೀರು ಸುರಿದು ಓಡಿ ಬಂದಿದ್ದರೆ ಕೈಸವೆಯುತ್ತಿತ್ತಾ!... ..."

"ಹಾಗಾದರೆ ಅವನೇ ಕೆಡವಿದಾಂತ ಹೇಳಲೆ?"

"ಮತ್ತೆ ಪ್ರಶ್ನೆ ಮಾಡುತ್ತೀಯಲ್ಲ. ಅಂಥವನಿಗೆ ಉಪಕಾರ ಮಾಡುತ್ತೀಯಾ? ಥೆ! ಎಂದೆಂದಿಗೂ ಬೇಡ."

ಅಣ್ಣನ ಆಜ್ಞೆಗೆ ಓಗೊಟ್ಟು ರೇವಣ್ಣನ ವಿರುದ್ಧ ನಿಂತ. ರೇವಣ್ಣನೇ ಲಾರಿ ಕೆಡವಿದನೆಂದು ನಿಜಸ್ಥಿತಿಯ ಹೇಳಿಕೆ ಕೊಟ್ಟಾಗ ರೇವಣ್ಣ ಒಪ್ಪಲಿಲ್ಲ. ರೇವಣ್ಣ ಬ್ರೇಕ್ ಇನ್ಸ್ಪೆಕ್ಟರರ ಕೈ ಬಿಸಿಮಾಡಿ ತಿರುಗಿಸಿಕೊಂಡಿದ್ದ.

"ಬ್ರೇಕ್ ಸಡಿಲವಿದ್ದುದರಿಂದ ರಾಣೋಜಿಯೇ ಲಾರಿ ಕೆಡವಿ ತಪ್ಪು ಹೊರಿಸುತ್ತಾ ಇದ್ದಾನೆ. ಉಪಕಾರ ಮಾಡಿದವನಿಗೆ ಅಪಕಾರ ಮಾಡುತ್ತಾನೆ ಭ್ರಷ್ಟ" ಎಂದು ಬ್ರೇಕ್ ಇನ್ಸ್ಪೆಕ್ಟರರು ಹೇಳಿದರು.

"ಅಣ್ಣಾ ! ಅಂಥಾ ಪಾಪಿ ನನಗೆ ಜೀವನಾಂಶ ಕೊಡುವುದು ಬೇಡ ಯಾರೋ ರಕ್ತ ಸುರಿಸಿದ ಶ್ರಮದಿಂದ ಹಣಗಳಿಸುತ್ತಾನೆ ಆ ರೀತಿ ಮೋಸ, ವಂಚನೆಯಿಂದ ಗಳಿಸಿದುದನ್ನು ನಾನು ಮುಟ್ಟಬಾರದು."

ಅಣ್ಣ ಶಿವಾಜಿ ಕಾಲು ವಾಸಿಯಾಗುವವರೆಗೆ ಹಣವನ್ನು ನೀರಿನಂತೆ ಸುರಿದ. ಮನೆಯಲ್ಲಿನ ಭಾಂಡೆ ಸಾಮಾನುಗಳನ್ನು ಒತ್ತೆಯಿಟ್ಟ. ಹಲವನ್ನು ಮಾರಿದ. ಅಂತೂ ನೆಟ್ಟಗಿದ್ದ ಕಾಲು ವಾಸಿಯಾದಾಗ ಹೆಳವಾಗಿತ್ತು! ರೇವಣ್ಣನ ಬಳಿ ಇದ್ದುದಕ್ಕೆ ನೆನಪಿನ ಬುತ್ತಿಯಾಗಿ ಆಜೀವಪರ್ಯಂತ ನೆನೆಸಿಕೊಳ್ಳಲು ಕಾಲು ಹೆಳವಾಗಿತ್ತು. ವಾರ್ಡಿನಿಂದ ಒಂದು ದಿನ ಬಿಡುಗಡೆಯಾಗಿ ಕುದುರೆ ಗಾಡಿಯಲ್ಲಿ ಮನೆಗೆ ಹೋದ.

"ಎಲ್ಲಿಯಣ್ಣ ಕೂಸು? ಕೂಸು ನೋಡ್ತೇನೆ. ಆಸ್ಪತ್ರೆಗೆ ತಂದು ತೋರಿಸಿದ್ದರೆ ಏನು ದೃಷ್ಟಿ ಆಗುತ್ತಿತ್ತಾ?"

ಒಳಗಿದ್ದ ಹೆಂಡತಿಗೆ ಗಂಡನ ಮಾತು ಕೇಳಿ ಅದೇಕೆ ಸಹಸಾ ಹೃದಯ ಕ್ರಿಯೆ ನಿಂತು ಹೋಗಬಾರದೆನ್ನಿಸಿತು.

"ಕೂಸು!.......ಹ್ಞೂ! ಮಣ್ಣಿನ ಕೂಸು ಮಣ್ಣಿಗೆ ಹೋಯಿತು ರಾಣಾ......ನೀನು ದುರ್ಭಾಗ್ಯ! ಇಲ್ಲಿಯವರೆಗೂ ಮುಚ್ಚಿಕೊಂಡಿದ್ದನ್ನು ಕ್ಷಮಿಸು."

ರಾಣೋಜಿಯ ಅಣ್ಣ ಬಿಗಿದ ಕಂಠ, ನೀರು ತುಂಬಿದ ಕಣ್ಣಿನಿಂದ ಹೇಳಿದ.

ಜಯಂತಿ

ಜಯಂತಿ ಇಂದುಧರರಾಯರ ಏಕಮಾತ್ರ ಪುತ್ರಿ. ಸತಿ ಸುಶೀಲಮ್ಮನವರು ಅಶ್ವತ್ಥಕಟ್ಟೆಪೂಜೆ, ಬನ್ನಿಮಹಂಕಾಳಿ ಪೂಜೆ ಇತ್ಯಾದಿಗಳನ್ನು ಐದಾರು ವರ್ಷಗಳು ಸತತ ಮಾಡಿದನಂತರ ಪಡೆದಿದ್ದರು. ಗಂಡು ಹುಟ್ಟಿದರೆ ಇತರರು ಎಷ್ಟು ಸಂತೋಷ ಪಡುತ್ತಾರೋ ಅದಕ್ಕೂ ಇಮ್ಮಡಿ ಮುಮ್ಮಡಿ ಸಂತೋಷ ಪಟ್ಟಿದ್ದರು. ರಸಿಕ ದಂಪತಿಗಳು ! ಅವರ ಮನೆಯಲ್ಲಿ ಒಂದು ವೀಣೆ ಮತ್ತು ಹಾರ್ಮೋನಿಯಮ್ ಇದ್ದುದಕ್ಕೆಂದೇ ರಸಿಕರು ಎಂದು ಹೇಳದಿದ್ದರೆ ತಪ್ಪಾದೀತು. ಇಂದುಧರರಾಯರ ತಂದೆ ಜಗನ್ನಾಥರಾಯರು ಖ್ಯಾತನಾಮ ಸಂಗೀತಗಾರರಾಗಿದ್ದರು. ಅಲ್ಲದೆ, ಸ್ವಯಂನಾಟಕಕಾರರಾಗಿ ತಾವೂ ಪಾತ್ರ ವಹಿಸುತ್ತಿದ್ದುದೂ ಇತ್ತು. ಜಗನ್ನಾಥರಾಯರು ತೀರಿದ ಅನಂತರ ಇಂದುಧರರಾಯರು ವೀಣೆ, ಹಾರ್ಮೋನಿಯಂಗಳನ್ನು ಮೂಲೆಗೆ ಸೇರಿಸಿದರು. ಸುಶೀಲಮ್ಮನವರಿಗೆ ವಾದ್ಯಗಳನ್ನು ಬಾರಿಸುವುದಕ್ಕೆ ಬಾರದು ಇಂದುಧರರಾಯರು ಲಹರಿ ಬಂದಾಗ ಒಂದೆರಡು ಶಾಸ್ತ್ರೋಕ್ತ ಹಾಗೂ ಒಂದೆರಡು ಚಲಚ್ಚಿತ್ರ ಗೀತೆಗಳನ್ನು ಬಾರಿಸುತ್ತಿದ್ದುದು ಎಷ್ಟೋ ಅಷ್ಟೆ! ಸರಿ ಮುಚ್ಚಿಟ್ಟ ನಂತರ ಧೂಳು ಹೊಡೆಯುವ ಗೊಡವೆಗೆ ಹೋಗುತ್ತಿದ್ದಿಲ್ಲ —ಲಹರಿ ಬರುವವರೆಗೂ.

ಆದರೆ ಜಯಂತಿ ಹುಟ್ಟು ಕಲಾವಿದೆಯಾಗುವ ಲಕ್ಷಣವನ್ನು ತನ್ನ ಮೂರನೆಯ ವರ್ಷದಲ್ಲಿ ತೋರಿಸಿದಳು. ಕಿವಿಗೆ ಬಿದ್ದ ಹಾಡುಗಳನ್ನು ಕುರುಕುತ್ತಿದ್ದಳು. ಹಾಡಿನ ತುಣುಕನ್ನು ತೆಗೆದುಕೊಂಡು ರಾಗಾಲಾಪನೆ ಮಾಡುತ್ತಿದ್ದಳು.

"ಎಲ್ಲಿ ಜಯಾ, ಆ ಹಾಡು ಹೇಳು," ತಾಯಿ ಸುಶೀಲಮ್ಮ ಗಂಡ ನೆದುರಿಗೆ ಊಟಮಾಡಿ ಕುಳಿತಾಗ ಹೇಳುತ್ತಿದ್ದಳು.

"ಲಂಬೋದರ ಲಕುಮಿಕರ ಅಂಬಾಸುತ ಅಮರವಿನುತ......"

ರಾಗವಾಗಿ ಮುದ್ದು ಮುದ್ದಾಗಿ ಹೇಳುತ್ತಿದ್ದುದನ್ನು ತಂದೆ ಕೇಳಿದಾಗ ಉಬ್ಬಿ ಹೇಳುತ್ತಿದ್ದರು: "ತಂದೆಯ ಸಂಗೀತ ಜ್ಞಾನ ಮಗುವಿನಲ್ಲಿ ಬೇರೂರಿದೆ,

ಕಲೆ, ಸಾಹಿತ್ಯ ಯಾವಾಗಲೂ ಮಕ್ಕಳಿಗೆ ಲಭಿಸದೆ ಮೊಮ್ಮಕ್ಕಳಿಗೆ ಲಭಿಸು ತ್ತದೆ—ಎಂದು ತಿಳಿದವರು ಹೇಳುವುದರಲ್ಲಿ ಅರ್ಥವಿದೆ."

—ಯಾರೂ ಹೇಳಿಕೊಡದೆ ತಾನು ತಾನಾಗಿಯೇ ಹಾಡುಗಳನ್ನು ಹೇಳುತ್ತಿರುವುದನ್ನು ಕೇಳಿ ಅಕ್ಕಪಕ್ಕದವರೂ ಸೋಜಿಗ ಪಡುತ್ತಿದ್ದರು. ಮಗಳ ಸಂಗೀತ ಪ್ರೇಮವನ್ನು ಕಂಡು ಇಂದುಧರರಾಯರು ಜಯಂತಿಯ ಆರನೆಯ ವರ್ಷದಲ್ಲಿ ಸಂಗೀತ ಉಪಾಧ್ಯಾಯಿಯನ್ನು ಗೊತ್ತು ಮಾಡಿದರು. ಹತ್ತನೆಯ ವರ್ಷದಲ್ಲಿ ಎಲ್ಲಕೀರ್ತನೆಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದಳು.

"ನನ್ನಲ್ಲಿರುವ ಸಕಲ ವಿದ್ಯೆಯನ್ನು ಧಾರೆ ಎರೆದಿದ್ದೇನೆ. ಇನ್ನು ವಿದ್ವಾಂಸರಿಂದ ಕಲಿಸಬೇಕು. ಇಲ್ಲಿಗೇ ವಿದ್ಯೆಯನ್ನು ನಿಲ್ಲಿಸಬೇಡಿ. ಮುಂದೆ ಪ್ರಸಿದ್ಧ ವಿದುಷಿಣಿ ಆಗುವ ಲಕ್ಷಣ ತೋರಿಸುತ್ತಾ ಇದಾಳೆ" ಎಂದು ತಮ್ಮ ಸಂತೋಷ ದ್ಯೋತಕಪಡಿಸಿ ಶಿಷ್ಯೆಯನ್ನು ಹಾಡಿ ಹರಸಿದರು.

ಶಾಲೆಯ ಪಾಠಗಳಲ್ಲೂ ಜಯಂತಿ ಹಿಂದಾಗಿರಲಿಲ್ಲ. ಮನೆಯಲ್ಲಿ ಮಾಡಿ ತೋರಿಸಲು ಕೊಡುತ್ತಿದ್ದ ಗಣಿತ ಇತ್ಯಾದಿಗಳನ್ನು ಮನೆಗೆ ಬರುತ್ತಲೆ ಮಾಡಿ ಮುಗಿಸಿ ಹಾಡುತ್ತಾ ಕುಳಿತುಕೊಳ್ಳುವಳು. ನಿತ್ಯ ಚಿಕ್ಕ ಮಗಳ ಸಂಗೀತವಾಹಿನಿಯನ್ನು ತಾಯಿ ಸುಶೀಲಮ್ಮ ಕೇಳುತ್ತಾ ಕುಳಿತುಕೊಳ್ಳು ವಳು. ರಾಗಾಲಾಪನೆ, ಸಂಗೀತ ಜ್ಞಾನಕ್ಕೆ ಸುಶೀಲಮ್ಮ ಆನಂದ ಬಾಷ್ಪ ಗಳನ್ನು ಸುರಿಸುತ್ತಿದ್ದರು.

ಈ ಮಧ್ಯೆ ಜಯಂತಿಗೆ ಸಹೋದರನೊಬ್ಬ ಹುಟ್ಟಿ ಮನೆ ಬೆಳಗಿಸಿದ. ಪುಟ್ಟಕೂಸು ರಾಘವೇಂದ್ರ ಅಕ್ಕನ ಸಂಗೀತ ಧ್ವನಿಯನ್ನು ಲಾಲಿಸುತ್ತಾ ಮೈ ಮರೆಯುತ್ತಿದ್ದ. ಸಂಪಿಗೂರಿನ ನಾಗರಿಕರಿಗೆ ಜಯಂತಿಯ ಸಂಗೀತ ಜ್ಞಾನ ತಿಳಿಯಲು ಹೆಚ್ಚು ಸಮಯ ಬೇಕಾಗಲಿಲ್ಲ. ಊರಿಗೆ ರಾಜಕೀಯ ನಾಯಕರು, ನಾಯಕಮಣಿಗಳು, ಸಾಹಿತಿಗಳು ಬಂದಾಗ ಜಯಂತಿಯ ಸಂಗೀತ ಕಛೇರಿ ನಡೆಯದಿದ್ದರೆ ಶೋಭೆಗೊಡುತ್ತಿದ್ದಿಲ್ಲ. ಮಂಗಳ ಸಮಯ ದಲ್ಲಿ ಜಯಂತಿಯ ಹಾಡುಗಾರಿಕೆ ಇರದಿದ್ದರೆ ಕಳೆಗೊಡುತ್ತಿದ್ದಿಲ್ಲ.

ಒಂದುಬಾರಿ ಸಂಸ್ಕೃತಿ ಕಾರ್ಯಕ್ರಮದ ಅಂಗವಾಗಿ ದೇವಸ್ಥಾನದಲ್ಲಿ ಉಪನ್ಯಾಸವಿತ್ತು. ಆಗ ಜಯಂತಿಯ ಸುಶ್ರಾವ್ಯಗಾನಲಹರಿಯನ್ನು ಆಲಿಸಿದ ಸಂಗೀತ ಶಿರೋಮಣಿ ವರದರಾಜರಾಯರು ತುಂಬಾ ಮೆಚ್ಚಿಕೊಂಡರು.

ಇಂದುಧರರಾಯರೆದುರಿಗೆ ತಮ್ಮ ಮೆಚ್ಚುಗೆಯ ಮಾತುಗಳನ್ನು ತೋರ್ಪಡಿಸಿದಾಗ.

"ತಾವು ಅವಳಿಗೆ ಸಂಗೀತದ ಪೂರ್ಣಜ್ಞಾನವಮಾಡಿ ಪುಣ್ಯ ಕಟ್ಟಿಕೊಳ್ಳಬೇಕು. ಕರ್ನಾಟಕಕ್ಕೆ ರತ್ನಪ್ರಾಯಳಾಗಬೇಕೆಂತ ಈ ಅಲ್ಪನ ಆಸೆ."

"ನೋಡಿ ರಾಯರೇ, ನನ್ನ ದೃಷ್ಟಿಯಲ್ಲಿ ಕಲೆಗೆ ಸಿದ್ಧಿಯೇ ಇಲ್ಲ. ಕಲಾವಿದ ಆಜನ್ಮಪರ್ಯಂತ ಸಾಧಕನೇ ವಿನಾ ಸಿದ್ಧಿ ಪುರುಷನಾಗುವುದಿಲ್ಲ."

ಇಂದುಧರರಾಯರು ಮಧ್ಯೆ ಬಾಯಿ ಹಾಕಿ, "ಅದು ಹೇಗೆ?" ಎಂದರು.

"ಈ ವಿದ್ಯೆಯನ್ನು ವಿಶಾಲ ಸಮುದ್ರಕ್ಕೆ ಹೋಲಿಸಬಹುದು. ನಾವೆಷ್ಟು ಉಪಯೋಗಿಸಿದರೂ ಅದು ಖರ್ಚಾಗಬಲ್ಲದೆ!"

"ನೀವು ಹೇಳುವುದರಲ್ಲಿಸತ್ಯವಿದೆ ಸ್ವಾಮಿ. ತುಂಬಿದಕೊಡ ತುಳುಕುವುದಿಲ್ಲ ಎಂಬ ಗಾದೆ ಬರಿದೆ ಹೇಳುವುದಕ್ಕೆ ಮಾಡಿಲ್ಲ. ಒಂದೆರಡು ಸಿನಿಮಾ ಹಾಡುಗಳನ್ನು ಕಲಿತ ಈಗಿನ ಹುಡುಗರು ಅಭಿನವ ತಾನಸೇನರಂತೆ ಮಾಡುತ್ತಿರೋದು ನೋಡಿ ಆಶ್ಚರ್ಯವಾಗುತ್ತದೆ."

ವರದರಾಜರಾಯರಿಗೆ ಅಭಿನವ ತಾನಸೇನರ ಬಗೆಗೆ ಮಾತಾಡುವುದಕ್ಕೆ ಇಷ್ಟವಿರಲಿಲ್ಲ. ಅವರು ಆ ವಿಷಯವನ್ನು ಮಾತಾಡಲು ತಮಗೆ ಇಷ್ಟವಿಲ್ಲವೆಂದು ಮುಖದ ಭಾವದಿಂದಲೇ ಹೊರಗೆಡವಿದರು. ಪುನಃ ತಡೆದು ಅನುಮಾನದ ಧ್ವನಿಯಲ್ಲಿ ಹೇಳಿದರು:

"ನಾನು ಬೆಂಗಳೂರಿನಲ್ಲಿ ವಾಸ. ಅದು ಹೇಗೆ ನಿಮ್ಮ ಹುಡುಗಿಗೆ ಪಾಠಾರಂಭ ಮಾಡಲಿ?"

"ನನ್ನ ಮನೆಯಲ್ಲೇ ಇದ್ದುಕೊಂಡು ತಾವು ಬೋಧಿಸಬೇಕು. ತಮಗೆ ಯಾವುದೇ ಅಡಚಣೆ ಆಗದಂತೆ ನೋಡಿಕೊಳ್ಳುತ್ತೇನೆ."

ಒಂದು ಸುಮುಹೂರ್ತದಲ್ಲಿ ಪಾಠಾರಂಭವಾಯಿತು. ಆಯಾಯ ದಿನ ಹೇಳಿಕೊಡುತ್ತಿದ್ದುದನ್ನು ಜಯಂತಿ ಮರುದಿನ ಒಪ್ಪಿಸುತ್ತಿದ್ದಳು.

ಕಾಲಚಕ್ರ ತಿರುಗುತ್ತಿತ್ತು! ಕಾಲಚಕ್ರದ ಪ್ರತಿಸ್ಪರ್ಧೆಯಂತೆ ಇವಳ ಸಂಗೀತ ಜ್ಞಾನ ದಿನದಿನಕ್ಕೂ ಹುಣ್ಣಿಮೆಯ ಚಂದ್ರಮನಂತೆ ಬೆಳೆಯುತ್ತಿತ್ತು. ಮುಖದಲ್ಲಿ ಅತುಲನೀಯ ಶೋಭೆ ಕಂಗೊಳಿಸುತ್ತಿತ್ತು.

ಕರ್ನಾಟಕ ಸಂಗೀತ ವಿಶಾರದೆಯನ್ನಾಗಿ ಮಾಡಿ ಸಂಗೀತ ವಿದ್ವಾಂಸರು ತಮ್ಮ ಹೊರೆಯನ್ನಿಳಿಹಿಕೊಂಡರು.

ಜಯಂತಿ ಗುರುದಕ್ಷಿಣೆಯಾಗಿ ಎರಡು ಸಾವಿರ ರೂಪಾಯಿ, ಜರತಾರಿ ಸಂಚೆ, ಬೆಲೆಬಾಳುವ ಉತ್ತರೀಯ ಹಾಗೂ ಶಾಲು ಸಮರ್ಪಿಸಿದಳು. ಒಂದು ದಿನ ಗುರುಗಳು ತಮ್ಮಿಂದ ತಾವೇ ಪ್ರೇಷಿತರಾಗಿ ಬೆಂಗಳೂರಿಗೆದಯ ಮಾಡಿಸಿದರು.

ಒಂದು ದಿನ ರಾಘವೇಂದ್ರ ಆದಾರೋ ಅಪರಿಚಿತರನ್ನು ಮನೆಗೆ ಕರೆತಂದ. ಇಂದುಧರರಾಯರು ಜಗ್ಗನೆ ಎದ್ದು ಆದರದಿಂದ ಬರಮಾಡಿ ಕೊಂಡರು. ರಾಘವೇಂದ್ರ ಮುಂದಾಗಿ "ಇವರು ಜಯದೇವನ್ ಎಂದ. ಪತ್ರಿಕೋದ್ಯೋಗಿಗಳು. ಜಯಂತಿಯ ಖ್ಯಾತಿಯನ್ನು ಕೇಳಿ ಕಾಣ ಬಂದಿದ್ದಾರೆ" ಎಂದನು.

ಶಿಷ್ಟ ಸಂಪ್ರದಾಯಕ್ಕನುಸರಿಸಿ ಅಲ್ಪೋಪಹಾರವಾಯಿತು. ಜಯದೇವನ್‌ರ ಪರಿಚಯವನ್ನು ಜಯಂತಿ ಮಾಡಿಕೊಂಡಳು. ತುಟಿಯಲ್ಲಿಯೇ ನಗೆಯನ್ನು ತೋರಿಸುತ್ತಾ ಜಯದೇವನ್ ಹೇಳಿದರು.

"ನಿಮ್ಮಂತಹ ಕಲಾವಿದೆಯರ ಭೆಟ್ಟಿಯಾದುದಕ್ಕೆ ನಾನು ತುಂಬಾ ಸಂತೋಷಪಡುತ್ತೇನೆ."

"ಅದಕ್ಕಾಗಿ ಧನ್ಯವಾದಗಳು. ತಾವು ಕೃಪೆಮಾಡಿ ಇಲ್ಲಿಗೆ ಬಂದುದಕ್ಕೆ ನನಗೆ ಹಿಡಿಸಲಾರದಷ್ಟು ಸಂತೋಷವಾಗಿದೆ." ತದನಂತರ ಪತ್ರಿಕೋದ್ಯೋಗಿಯ ಪ್ರಶ್ನೆಗಳು ಪ್ರಾರಂಭವಾದುವು.

"ತಾವು ಯಾವಾಗಿನಿಂದ ಸಂಗೀತದಲ್ಲಿ ಆಸ್ಥೆ ತಳೆದಿದ್ದೀರಿ."

"ತೀರ ಚಿಕ್ಕವಳಾಗಿದ್ದಾಗಿಂದಲೇ......ಅಂದರೆ ಸುಮಾರು ಮೂರು ವರ್ಷವಿದ್ದಾಗಲೇ ಸಂಗೀತದ ಮೇಲೆ ಪ್ರೇಮವಿತ್ತೆಂದು ನನ್ನ ತಾಯಿ ಹೇಳುತ್ತಾರೆ. ಅಲ್ಲವೇನಮ್ಮ?" ಎಂದು ಹೇಳಿ ತಾಯಿ ಕಡೆ ದೃಷ್ಟಿ ಬೀರಿದಳು.

"ಅವಳು ಹುಟ್ಟುತ್ತಲೇ ಸಂಗೀತಪ್ರೇಮ ತೊಗೊಂಡೇ ಬಂದಳು." ಎಂದು ತಾಯಿ ಎಂದಳು ತುಷ್ಟಿಯಿಂದ.

ಇಂದುಧರರಾಯರು ಸಂಭಾಷಣೆಗಳನ್ನು ಆಲಿಸುತ್ತಿದ್ದರು.

"ನಿಮಗೆ ಯಾವ್ಯಾವ ರಾಗಗಳು ಪ್ರಿಯ?"

"ಕರಹರಪ್ರಿಯ, ಕಲ್ಯಾಣಿ."

ತದನಂತರ ಕರ್ನಾಟಕ ಸಂಗೀತಕ್ಕೆ ಮುತ್ತುಸ್ವಾಮಿ ದೀಕ್ಷಿತರು, ತ್ಯಾಗರಾಜರು ಮಾಡಿರುವ ಅಳಿಸದ ಕಾರ್ಯವನ್ನು ನೆನೆದಳು. ತನ್ನ ಇಚ್ಛಿಕ ಸಂಗೀತಗಾರರ ಹೆಸರನ್ನು ಹೇಳಿ ಪ್ರಶಂಸೆ ಮಾಡಿದಳು.

"ತಮ್ಮ ಗಾನಸೌರಭವನ್ನು ಕೇಳುವ ಪುಣ್ಯ ನನಗಿದೆಯೆ?" ಎಂದು ಅರ್ಥಗರ್ಭಿತವಾಗಿ ಹೇಳಿದಾಗ,

"ತಾವು ಸಂತೋಷದಿಂದ ನನ್ನ ಹಾಡನ್ನು ಕೇಳುವುದೂ ನನ್ನ ಭಾಗ್ಯ ವೆಂದು ನಾನು ನಂಬುತ್ತೇನೆ." ಎಂದು ಜಯಂತಿ ಅರ್ಥವತ್ತಾಗಿ ಹೇಳಿದಳು. ಆನಂತರ ತನ್ನ ಪ್ರಿಯವಾದ ಹಾಡುಗಳನ್ನು ನುಡಿಸಿದಳು. ಜಯದೇವ ರಾಯರು ಅವಳ ಗಾನಸೌರಭದಲ್ಲಿ ಮಿಂದು ಭಾವಪರವಶರಾಗಿದ್ದರು. ವೀಣೆ ಯೊಂದಿಗೆ ಹಾಡಲು ಕುಳಿತಾಗ ಒಂದು ಭಾವಚಿತ್ರವನ್ನು ತೆಗೆದುಕೊಂಡರು. ಸಂಗೀತ ಮುಗಿದ ನಂತರ ಪುನಃ ಕಾಫಿ ಬಂದಿತು.

"ಭಾರತೀ ಪತ್ರಿಕೆಯಲ್ಲಿ ವಿಸ್ತೃತ ಪರಿಚಯ ಮಾಡುತ್ತೇನೆ. ಇಂಥ ರತ್ನ ಸಂಪಿಗೂರಿನಲ್ಲಿ ಪ್ರಕಾಶಿಸುತ್ತಿದೆ ಎಂದು ನಾಡಿನ ಜನತೆಗೆ ತಿಳಿದಿರ ಬೇಕು. ಬೆಂಗಳೂರಿನಲ್ಲೂ ತಮ್ಮಂಥ ಕಲಾವಿದೆಯರು ಕಡಮೆ" ಎಂದು ಹೊರಡಲನುವಾದರು. ಇಂದುಧರರಾಯರೂ ಸುಶೀಲಮ್ಮನವರೂ ಔಪ ಚಾರಿಕವಾಗಿ ನಾಲ್ಕು ಮಾತುಗಳನ್ನು ಆಡಿ ಬೀಳ್ಕೊಟ್ಟರು.

ಒಂದು ವಾರದ ನಂತರ ಭಾರತೀ ವಿಶೇಷ ಸಂಚಿಕೆಯು ಇಂದುಧರ ರಾಯರ ಕೈಸೇರಿತು. ಜಯಂತಿಯ ಭಾವಚಿತ್ರ ತನ್ನ ವಿಸ್ತೃತ ಪರಿಚಯ ದೊಡನೆ ಕಂಗೊಳಿಸುತ್ತಿತ್ತು. ರಾಘವೇಂದ್ರ ಎಲ್ಲರೆದುರಿಗೆ ಮೂರು ನಾಲ್ಕು ಬಾರಿ ಓದಿ ಕುಣಿದಾಡಿ ಬಿಟ್ಟ.

ಭಾರತೀ ಪತ್ರಿಕೆಯ ಮುಖಾಂತರ ಬೆಳಕು ಕಂಡ ಜಯಂತಿಗೆ ದಿನವೂ ಪತ್ರಿಕಾಲಯಗಳಿಂದ, ಕಲಾಸಂಸ್ಥೆಗಳೆಡೆಯಿಂದ, ಆಕಾಶವಾಣಿಯಿಂದ ಕಾಗದ ಬರುತ್ತಿದ್ದುವು. ಪತ್ರಿಕೆಗಳು ಲೇಖನ ಬೇಡುತ್ತಿದ್ದುವು. ಆಕಾಶ ವಾಣಿ ಮತ್ತು ಸಂಘ ಸಂಸ್ಥೆಗಳು ಸಂಗೀತ ಕಾರ್ಯಕ್ರಮದಲ್ಲಿ ಭಾಗವಹಿ ಸಲು ಕೇಳಿಕೊಂಡಿರುತ್ತಿದ್ದುವು.

ಇದರಿಂದಾಗಿ ನಾಡಿನೆಡೆಯಲ್ಲೆಲ್ಲಾ ತಿರುಗುವ ಸುಸಮಯ ಜಯಂತಿಗೆ ಸಿಕ್ಕಿತು. ಆಕಾಶವಾಣಿಯ ಮುಖಾಂತರ ಬಾನುಲಿ ಶ್ರೋತೃಗಳಿಗೆ ಪರಿಚಿತಳಾದಳು. ಜನಿವಾರ್ಸ್ಮರ ಇಂದುಧರರಾಯರ ಪುತ್ರ ರಾಘವೇಂದ್ರ ಅಕ್ಕನ ಪ್ರಯಾಣದೊಂದಿಗೆ ತಾನೂ ಇರುತ್ತಿದ್ದ. ಅವನೀಗ ಎಸ್. ಎಸ್. ಎಲ್. ಸಿ.ಯಲ್ಲಿ ತೇರ್ಗಡೆಯಾದ ಹುಡುಗ.

ಬೆಂಗಳೂರಿಗೆ ಬಂದಾಗಲೆಲ್ಲಾ ಗುರುಗಳಾದ ವರದರಾಜರಾಯರ ಮನೆಯಲ್ಲಿ ಉಳಿದುಕೊಳ್ಳುತ್ತಿದ್ದಳು. ಇದರಿಂದಾಗಿ ಬೆಂಗಳೂರಿನ ಕಲಾ ಸಂಸ್ಥೆಗಳ ಪರಿಚಯವಾಯಿತು.

ಒಮ್ಮೆ ಬೆಂಗಳೂರಿಗೆ ಬಂದಾಗ ತಾರಾ ಚೌಧರಿಯ ನೃತ್ಯದ ಏರ್ಪಾಟಾಗಿತ್ತು. ವರದರಾಜರೊಂದಿಗೆ ನೃತ್ಯ ಸವಿಾಕ್ಷಣಕ್ಕೆ ತಾನೂ ಹೋದಳು, ತಾರಾ ಚೌಧರಿಯ ವಿವಿಧ ತೆರನ ನೃತ್ಯಗಳನ್ನು ಕಣ್ಣು ಬಿಡದೆ ನೋಡಿದಳು. ಅಲರಿಪ್ಪು, ಜತಿಸ್ವರ, ತುಮ್ರಿನೃತ್ಯ, ತಿಲ್ಲಾನ, ತಾರಾಲಾಸ್ಯ, ಕಲೈತೂಕಿ ನೃತ್ಯಗಳನ್ನೂ ಅವಳ ಅಂಗ ಸೌಷ್ಠವವನ್ನೂ ನೋಡಿ ಮಂತ್ರಮುಗ್ಧಳಾದಳು.

"ಕಲೆಯಿಂದ ನಿಜವಾಗಲೂ ಮನಸ್ಸಿಗೆ ತೃಪ್ತಿಯಿದ್ದರೆ ಅದು ನೃತ್ಯದಿಂದಲೇ ಸರಿ" ಎಂದುಕೊಂಡಳು. ಗುರುಗಳೊಂದಿಗೆ ತನ್ನ ನೃತ್ಯ ಅಭ್ಯಾಸ ಪ್ರೇಮವನ್ನು ತೋರಿಸಿದಾಗ ಹೇಳಿದರು:

"ಯಾವುದಕ್ಕೂ ಸಮಯವಿಲ್ಲ. ದೇವರು ಒಂದಿನ್ನೂರು ವರ್ಷ ಪಾಲಿಸಿದ್ದರೆ ಎಲ್ಲ ಅಭ್ಯಾಸ ಮಾಡಬಹುದಾಗಿತ್ತು" ಎಂದರು.

"ಅಕ್ಕಾ ನಿನಗೆ ವಯಸ್ಸಾಯಿತು. ಲಗ್ನ ಮಾಡಿಕೊಂಡು ಪತಿದೇವರ ಮುಂದೆ ಹೇಳಿಕೊಳ್ಳುತ್ತಾ ಇರು. ಎಷ್ಟು ದಿನ ಕಲಿಯೋದು. ಕಲಾವಿದರಿಗೆ ಸಿದ್ಧಿಯೇ ಇಲ್ಲ. ಗುರುಗಳ ಪ್ರಕಾರ ನಿನಗೆ ಸಂಗೀತದಲ್ಲೂ ಸಿದ್ಧಿ ದೊರಕಿಲ್ಲ" ಎಂದು ಆಸೆಗೆ ಬಿಸಿನೀರು ಹಾಕಿದನು.

ಜಯಂತಿಗೆ ತಂದೆಯ ಪ್ರೋತ್ಸಾಹವೂ ಸಿಕ್ಕಲಿಲ್ಲ. ಒಷೋ೯ಪತ್ತು ಕಳೆಯುತ್ತಲೇ ಹಾವೇರಿಯಲ್ಲಿನ ವರನೊಬ್ಬನಿಗೆ ಕೊಟ್ಟು ವಿವಾಹವನ್ನು ವಿಜೃಂಭಣೆಯಿಂದ ಮಾಡಿದರು. ವರನು ಸುಲಕ್ಷಣ ಹಾಗೂ ಬಿ. ಇ. ಪದವೀಧರನಿದ್ದ. ತಕ್ಕಮಟ್ಟಿಗೆ ಆಸ್ತಿವಾನನೂ ಆಗಿದ್ದ. ಆದರೆ ಕೊಂಚ

ಗೂಗಿ ಮನಸ್ಸುಳ್ಳವನಾಗಿದ್ದನು. ವಧು ಪರೀಕ್ಷೆಗೆ ಬಂದಾಗ ನೃತ್ಯ ಸಂಗೀತವೆಂದರೆ ತುಂಬಾ ಪ್ರಾಣವೆಂದು ಕೊಚ್ಚಿಕೊಂಡಿದ್ದ. ಎಲ್ಲರೊಡನೆ ಜನಬಳಕೆಯ ಮನುಷ್ಯನಂತೆ ನಡೆದುಕೊಂಡಿದ್ದ. ಆದರೆ ಗೂಗಿ ಮನೋ ಪ್ರವೃತ್ತಿ ಬೆಂಗಳೂರಿನಲ್ಲಿ ಮನೆಮಾಡಿದ ಮೇಲೆ ಹೊರಬೀಳಲು ಪ್ರಾರಂಭ ವಾದುವು. ಆತ ಮನೆಯನ್ನೇ ಮರ್ಫಿಟೌನ್ ಹತ್ತಿರ ಮಾಡಿದ್ದ. ನಿತ್ಯ ಬೆಳಗ್ಗೆ ಕಾರ್ಖಾನೆಗೆ ಹೋಗುವುದು ಸಾಯಂಕಾಲ ಬರುತ್ತಲೇ ಕದ ಹಾಕು ವುದು; ಪುನಃ ಬೆಳಗ್ಗೆ ಕದವನ್ನು ಹೋಗುವಾಗ ತೆರೆಯಲಾಗುತ್ತಿತ್ತು.

"ಪುಟ್ಟಣ್ಣ ಚೆಟ್ಟಿಟೌನ್ ಹಾಲಿನಲ್ಲಿ ಕಮಲಳ ನೃತ್ಯ ಪ್ರದರ್ಶನವಿದೆ" ಎಂದಾಗ ಹೇಳುತ್ತಿದ್ದ—

"ಜಯಂತಿ! ಕುಣಿಯೋದು ಏನು ನೋಡುತ್ತೀಯೆ. ಇಲ್ಲೇ ನಿನ್ನ ವೀಣಾ ಬಾರಿಸುತ್ತಾ ಕುಳಿತುಕೋ"

ಜಯಂತಿ ವೀಣೆಯನ್ನು ತೆಗೆದು ಒಂದು ಹಾಡು ಪೂರೈಸುವಷ್ಟರಲ್ಲಿ ನಗುತ್ತಾ ಹೇಳುತ್ತಿದ್ದ.

"ಸಾಕು. ಇಷ್ಟರಿಂದಲೇ ನನಗೂ ನಿನಗೂ ಮನರಂಜನೆಯಾದಂತಾ ಯಿತು. ಧೂಳು ಹೊಡೆದು ಮುಚ್ಚಿಡು."

"ಯಾಕೆ?......ಇಷ್ಟು ಬೇಸರ? ಸಿಡುಕಿನಿಂದಲ್ಲ ಮೃದುವಾಗಿ ಇಳಿದ ಧ್ವನಿಯಲ್ಲಿ ಪ್ರಶ್ನಿಸುತ್ತಿದ್ದಳು.

"ನನಗೂ ಯಂತ್ರದ ವಿಷಯಗಳ ಕುರಿತು ಓದುವುದಿದೆ."

ಆಗ ಜಯಂತಿ ಇದ್ದರೂ ಇರಬಹುದು ಎಂದು ಸುಮ್ಮನಾಗುವಳು. ಮತ್ತೊಂದು ದಿನ, "ಬಸಂತ್ ಬಹಾರ್ ಚಿತ್ರವಿದೆ. ಕಲಾವಿದರು ನೋಡ ತಕ್ಕದ್ದು" ಎಂದಳು.

"ಹೋಗೋಣಂತೆ ಒಂದು ದಿನ" ಎಂದು ಸುಮ್ಮನಿರಿಸಿದ್ದ.

ತಿಂಗಳುಗಳು ಕಳೆದರೂ "ಹೋಗೋಣ ಹೋಗೋಣ" ಎನ್ನುತ್ತಲೇ ದಬ್ಬುತ್ತಿದ್ದ. ಎರಡು ವರ್ಷ ಎನ್ನುವ ಹೊತ್ತಿಗೆ ಜಯಂತಿಯ ಜೀವನ ಬೇಸರಿಸಿತು. ಆತ ಸಂಪಿಗೂರಿಗೆ ಎರಡು ಮೂರು ಬಾರಿ ಕಳುಹಿಸಿದ್ದರೂ ಬೇಗ ಕರೆಯಿಸಿಕೊಂಡಿದ್ದ. ತಂದೆ ತಾಯಿಗಳು ಅವಳ ಕಷ್ಟ ಸುಖಗಳನ್ನು ಕೇಳುವ ಗೋಜಿಗೆ ಹೋಗಲಿಲ್ಲ. ಇಬ್ಬರಿಗೂ ಮಾನಸಿಕ ಹೊಂದಿಕೆ ಇದೆ– ಎಂದು ತಿಳಿದಿದ್ದರು. ಜಯಂತಿಯೂ ಯಾವುದಕ್ಕೂ ಹೇಳಲಿಲ್ಲ.

ಬಾಗಿಲು ತೆರೆದು ಹೊರಗೆ ನಿಂತುಕೊಳ್ಳಲೂ ಜಯಂತಿಗೆ ಬೆದರಿಕೆ. ತನ್ನ ಸುಂದರಿ ಹೆಂಡತಿಯನ್ನು ಯಾರಾದರೂ ನೋಡಿಬಿಟ್ಟಾರು, ಪರಿಣಾಮ ದೃಷ್ಟಿಯಾದೀತು ಎಂದು ಹೊರಗಡೆಗೂ ಕಳುಹಿಸುತ್ತಿರಲಿಲ್ಲ. ಮುಗ್ಧ ಮನಸ್ಸಿನ ಜಯಂತಿ ಮೊಟ್ಟಮೊದಲು ಹೀಗೆಯೇ ತಿಳಿದುಕೊಂಡಿದ್ದಳು. "ನಾರಾಯಣ ಮೂರ್ತಿಗಳೇ ಇದ್ದೀರಾ ಮನೆಯಲ್ಲಿ" ಎಂದು ಯಾರಾದರೂ ಪರಿಚಿತರು ಕೇಳಿಕೊಂಡು ಬಂದರೆ ಅಡಿಗೆ ಮನೆಯ ಕದ ಇಕ್ಕಿ ಬಾಗಿಲು ತೆಗೆಯುತ್ತಿದ್ದ. ಅವರಿನ್ನೂ ರಸ್ತೆಗೆ ಹತ್ತಿಕೊಂಡಿದ್ದ ಮೆಟ್ಟಲುಗಳನ್ನು ಇಳಿಯುತ್ತಿದ್ದಂತೆಯೇ 'ದಪ್' ಎಂದು ಬಾಗಿಲು ಹಾಕಿಕೊಳ್ಳುತ್ತಿದ್ದ. ಅವರು ಅಲ್ಲಿ ವಾಸಿಸಲು ಪ್ರಾರಂಭಿಸಿ ಮೂರು ವರ್ಷಗಳು ಸಂದರೂ ಅಕ್ಕ ಪಕ್ಕದವರು ಎಂದೂ ಅಪ್ಪಿದಪ್ಪಿ ಹೊರಬಾಗಿಲಿನ ಆ ಕಡೆ ಏನು ಇದೆ ಎಂಬುದನ್ನೂ ನೋಡಿರಲಿಲ್ಲ.

ಇದರಿಂದ ನೆರೆಹೊರೆಯವರಿಗೆ ಬೇಸರ ಉಂಟಾಗಲು ಉಪಕ್ರಮಿಸಿತು. ಹೊರಗಡೆಯ ಬಿಸಿಲನ್ನೂ ಕಾಣದ ಜಯಂತಿ ಕಿಟಕಿಯ ಮುಖಾಂತರ ಗಂಡನ ನಿರೀಕ್ಷಣೆಯನ್ನು ಮಾಡುತ್ತಿದ್ದಳು. ತಮ್ಮ ಮನೆಗೆ ಸಮೀಪದಲ್ಲಿದ್ದ ನರಸಿಂಹಯ್ಯ ಎಂಬುವರ ಜೊತೆಗೆ ಅವರ ಗೆಳೆಯರು ಹೊರಟಿದ್ದರು. ಅವರ ಗೆಳೆಯರು "ಈ ಮನೆಯಲ್ಲಿ ಯಾರಾದರೂ ಇದ್ದಾರೊ?" ಎಂದರು.

"ಇದ್ದಾರೆ. ಯಾಕೆ?"

"ಯಾವಾಗಲೂ ಕದ ಮುಚ್ಚಿರುತ್ತದೆ. ನಾನು ಇಷ್ಟು ಬಾರಿ ನಿಮ್ಮ ಮನೆಗೆ ಬಂದಿದ್ದೇನೆ. ಒಮ್ಮೆಯಾದರೂ ಅವರ ಮನೆಬಾಗಿಲು ತೆರೆದಿರುವುದನ್ನು ನೋಡಿಲ್ಲ"

"ಆದ್ದರಿಂದ ನೀವು ಊಹಿಸಿರಬಹುದು."

ಇವರೀರ್ವರ ಸಂಭಾಷಣೆಗಳು ಕಿಟಕಿಯ ಖೈದಿಯಂತೆ ಹಣಿಕಿ ಹಾಕುತ್ತಿದ್ದ ಜಯಂತಿಗೆ ಕೇಳಿಸಿದುವು ನಾರಾಯಣಮೂರ್ತಿಯ ಎದುರಿಗೆ ಪ್ರಸ್ತಾಪವೆತ್ತಿದಾಗ ಗಂಭೀರವಾಗಿ ಹೇಳಿದ.

"ನೋಡೆ, ನಮಗೆ ಯಾರದೇನು ಹಂಗು. ಮುನ್ನೂರು ರೂಪಾಯಿ ಸಂಬಳ ಹೇಗಿದ್ದರೂ ಬರುತ್ತದೆ. ಯಾರು ಏನಾದರೂ ಮಾತಾಡಿಕೊಳ್ಳಲಿ."

ಎದುರು ಮನೆ ಇಂಟರ್ ವಿದ್ಯಾರ್ಥಿ ವೇಕಟೇಶ ನಾಯಿಡು "ಬಾಡಿಗೆ ಶವ" ಎಂದು ನಾರಾಯಣ ಮೂರ್ತಿಗೆ ಹೆಸರಿಟ್ಟಿದ್ದ. ನಾರಾಯಣಮೂರ್ತಿ ಎಡಗಡೆ ಕಿವಿಯಲ್ಲಿ ಕೇಳಿ ಬಲಗಡೆ ಕಿವಿಯಲ್ಲಿ ಬಿಡುತ್ತಿದ್ದ!

ಒಂದು ದಿನ ನಾರಾಯಣ ಮೂರ್ತಿ ತಲೆನೋವು ಎಂದು ಮಧ್ಯಾಹ್ನವೇ ಬಂದ. ಹಿಂದಿನ ಮನೆ ಸುನೀತಿಯ ಮನೆಗೆ ಜಯಂತಿ ಹೋಗಿದ್ದಳು.

"ಅಪರೂಪಕ್ಕೆ ಬಂದಿದ್ದೀರಿ" ಎಂದು ಕಾಫಿ ಮಾಡಿ ಯೋಗಕ್ಷೇಮ ವಿಚಾರಿಸಿ, ಬೇಸರ ಕಳೆಯಲು ಒಂದು ಕಾದಂಬರಿಯನ್ನೂ ಕೈಯಲ್ಲಿಟ್ಟು ಕಳುಹಿಸಿದ್ದಳು. ಗೂಗಿ ಬುದ್ಧಿಯ ನಾರಾಯಣಮೂರ್ತಿ ಅವಾಚ್ಯ ಶಬ್ದ ಗಳನ್ನು ಆಡಿ ದಂಡಿಸಿದ.

"ಬೇರೆಯವರ ಮನೆಗೆ ಹೋಗುವುದು ಪತಿವ್ರತೆಯರ ಲಕ್ಷಣವಲ್ಲ." ಕಣ್ಣೀರನ್ನು ಧುಮುಕಿಸುತ್ತಾ ಜಯಂತಿ ಎಂದಳು.

"ಸಚ್ಚಾರಿತ್ರ್ಯ ಉಳ್ಳ ಸುನೀತಿಯಂಥವರ ಮನೆಗೆ ಹೋಗುವುದೂ..."

"ಸುನೀತಿ ಒಳ್ಳೆಯವಳೆಂದು ಹೇಗೆ ಗೊತ್ತು ಹಚ್ಚಿದ್ದೀಯೆ. ಅವಳ ಹೃದಯವನ್ನು ಸೀಳಿ ದೀಪ ಹಚ್ಚಿ ನೋಡಿ ಅರ್ಥಮಾಡಿಕೊಂಡಿದ್ದಿಯಾ. ಏನು ಮಾತು ಏನು ಕಥೆ!"

ಮಾತು ಮುಂದುವರಿಸಿದರೆ ತೀರ ವಿರಸಕ್ಕೆ ಇಟ್ಟುಕೊಳ್ಳುತ್ತದೆ ಎಂದು ಪೂರ್ಣವಿರಾಮ ಇಟ್ಟಳು.

ಸಂಪಿಗೂರಿನ ರಥೋತ್ಸವಕ್ಕೆ ಹೋದಾಗ ತಂದೆ ತಾಯಿಗಳಿಗೆ ಅವಳ ಸಂಸಾರದ ಕಥೆ ತಿಳಿಯಿತು. ಅವರೂ ನೊಂದುಕೊಂಡರು. ಕಾಗದದ ಮುಖೇನವಾಗಲೀ, ಮುಖತಃ ಆಗಲಿ ತಿಳಿಸೋಣವೆಂದರೆ ಅಳಿಯ ಬೇರೆ ತಿಳಿದುಕೊಂಡು ಇನ್ನೂ ಕಾಠಿಣ್ಯವಾಗಬಹುದು. ತಾವೇ ವಿರಸಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ ಎಂದು ಯೋಚಿಸಿ ನೀತಿ ಚಿಂತಾಮಣಿಯಲ್ಲಿನ ನೀತಿಗಳನ್ನು ಹೇಳಿದರು. ರಥೋತ್ಸವದ ಅನಂತರ ಬೆಂಗಳೂರಿಗೆ ಹೋಗು ವಾಗ, "ಗಂಡನ ಮನಸ್ಸನ್ನು ಅರಿತುಕೊಂಡು ಅದರಂತೆ ಅನುಸರಿಸುವುದು ಹೆಂಡತಿಯ ಧರ್ಮ. ಹೇಗೋ ಹೊಂದಿಕೊಂಡು ಹೋಗಬೇಕು" ಎಂದರು.

"ಅಪ್ಪಾಜಿ, ಕಲೆಯೇ ನನ್ನ ಉಸಿರು ಎಂದು ಸೇವೆ ಮಾಡಬೇಕೆಂ

ದಿದ್ದೆ. ಆದರೆ ನನಗೆ ಎಲ್ಲರಂತೆ ಬಾಳುವುದಕ್ಕೂ ಆಗುತ್ತಿಲ್ಲ. ಜೈಲಿನ ಜೀವನವನ್ನು ಅನುಭವಿಸುತ್ತಿದ್ದೇನೆ" ಹೀಗೆ ಹೇಳಿ ಬೋರಿಟ್ಟು ಅತ್ತಳು.

"ಮಗೂ! ಸಮಾಧಾನಮಾಡಿಕೋ. ಮುಂದೆ ಆತನ ನಡತೆ ಬದಲಾಯಿಸಬಹುದು" ಎಂದು ಕಳುಹಿಸಿಕೊಟ್ಟರು.

ಇಂದುಧರ ರಾಯರ ಮನಸ್ಸಿನಲ್ಲಿ ಗುಂಗೀ ಹುಳದಂತೆ ಯೋಚನೆಯೊಂದು ಹೊಕ್ಕು ಕೊರೆಯುವುದಕ್ಕೆ ಹತ್ತಿತ್ತು. ಇದೇ ಭ್ರಮೆಯಲ್ಲಿ ಕಾಗದ ಹಾಕಿದರು. ನಾರಾಯಣ ಮೂರ್ತಿ ನೋಡಿ ಕಾಗದದ ವಿಷಯಕ್ಕೆ ವ್ಯಂಗ್ಯೋಕ್ತಿಗಳನ್ನು ಆಡಿದ.

ಇತ್ತೀಚೆಗೆ ಜಯಂತಿ ಒಂದೂ ಕೀರ್ತನೆಯನ್ನೂ ಎಂದೂ ಹೇಳಿರಲಿಲ್ಲ. ವಾದ್ಯಗಳನ್ನು ಮುಟ್ಟಿರಲಿಲ್ಲ. ಸದಾ ಮಂಕು ಬಡಿದವರಂತೆ ಕದ ಮುಚ್ಚಿಕೊಂಡು ಮನೆಯಲ್ಲಿರುತ್ತಿದ್ದಳು.

ಈ ಹೊತ್ತಿಗೆ ವರದರಾಜರಾಯರು ನೃತ್ಯಮೇಳವನ್ನು ಕೂಡಿಸಿದ್ದರು. ಅವರ ಮಂಡಳಿಯವ ನೃತ್ಯಗಳು ಸಾಕಷ್ಟು ಖ್ಯಾತಿಯನ್ನು ತಂದಿದ್ದುವು. ನೃತ್ಯ ಮಂಡಳಿಯ ಮಾಲಕರು ಮತ್ತು ಸಂಗೀತ ನಿರ್ದೇಶಕರು ವರದರಾಜರಾಯರಾಗಿದ್ದರು. ಬೆಂಗಳೂರಿನಲ್ಲಿ ಸಾಕಷ್ಟು ಪ್ರದರ್ಶನಗಳನ್ನು ಮಾಡಿ ಮದ್ರಾಸಿಗೆ ಹೋಗಬೇಕೆಂದು ಯೋಚಿಸಿದ್ದರು. ತನಗೆ ಸಂಗೀತ ವಿದ್ಯೆಯನ್ನು ಧಾರೆಯೆರೆದು ಓರ್ವ ಕಲಾವಿದೆಯನ್ನಾಗಿ ಮಾಡಿದ ವರದರಾಜರಾಯರನ್ನು ಕಾಣುವಂತಿರಲಿಲ್ಲ. ನಾರಾಯಣ ಮೂರ್ತಿಯ ವಿಚಿತ್ರ ಮನಸ್ಸನ್ನು ನಿತ್ಯವೂ ಜಯಂತಿ ಅಭ್ಯಾಸ ಮಾಡಿದರೆ ಸಾಲದು. ನಿತ್ಯ ಹೊಸ ಹೊಸ ವಿಚಿತ್ರ ಭಾವನೆಗಳನ್ನು ನೋಡುತ್ತಿದ್ದಳು. ಸುತ್ತು ಮುತ್ತಲಿನ ಜನಗಳು ಟೀಕೆ ಮಾಡುವುದರಲ್ಲೂ ಸತ್ಯವಿದೆ ಎಂದು ಜಯಂತಿಗೂ ಅನಿಸುತ್ತಿತ್ತು. ದೇವರ ಕೃಪೆಯಿಂದ ಒಂದು ಹೆಣ್ಣು ಕೂಸಾಗಲೀ ಗಂಡು ಕೂಸಾಗಲೀ ಜನನವಾಗಿದ್ದರೆ ಅದರ ಆಟಪಾಟಗಳಲ್ಲಿ ತಮ್ಮ ದಾಂಪತ್ಯ ಜೀವನವನ್ನು ಸುಖಮಯವನ್ನಾಗಿ ಮಾಡಬಹುದಿತ್ತು.

ನಾರಾಯಣ ಮೂರ್ತಿ ಮನೆಯಲ್ಲಿ ಜಯಂತಿಯೊಡನೆ ನಾಲ್ಕು ಲಲ್ಲೆ ಮಾತುಗಳನ್ನಾದರೂ ಹರಟುತ್ತಿದ್ದಿಲ್ಲ. ಸಾಯಂಕಾಲದ ಫಲಹಾರದ ಅನಂತರ ಯಾಂತ್ರಿಕ ಸಂಬಂಧದ ಹೊತ್ತಿಗೆಗಳನ್ನು ಹಿಡಿದುಕೊಂಡು ಕುಳಿತುಕೊಳ್ಳುತ್ತಿದ್ದ. ಮಲಗುವ ಹೊತ್ತಿಗೆ ನಾಲ್ಕು ಮಾತು ಗಂಭೀರವಾಗಿ ಆಡಿ

ದರೆ ಅದೇ ಹೆಚ್ಚು. ತಾನೂ ಹೊರಗಡೆ ಹೋಗುತ್ತಿರಲಿಲ್ಲ. ಕೆಲಸ ದಿಂದ ಸಾಯಂಕಾಲ ಮನೆ ಸೇರಿದವನು ಮರುದಿನ ಬೆಳಗ್ಗೆ ಹೊರಗಿನ ಬೆಳಕನ್ನು ನೋಡುತ್ತಿದ್ದ. ಆದಿತ್ಯವಾರವೂ ಹೊರಗಡೆ ಬರುತ್ತಿರಲಿಲ್ಲ. ಕಥೆ ಕಾದಂಬರಿಗಳನ್ನು ಓದಲೂ ಅವಳಿಗೆ ತಡೆಮಾಡುತ್ತಿದ್ದ. ಗಂಡನ ಮನೆ ಸೇರಿದ ಐದು ವರ್ಷಗಳಲ್ಲಿ ಹೃಷ್ಟಪುಷ್ಟ ಜಯಂತಿ ಗಳುವಿನಂತಾದಳು. ಮುಖ ಬಿಳಿಚಿಕೊಂಡಿತು.

ಒಂದು ದಿನ ಜಯಂತಿ ರಾತ್ರಿಯಲ್ಲಿ ಕನಸು ಕಂಡಳು. ತಾನು ಯಾರೋ ಪ್ರಸಿದ್ಧ ಸಂಗೀತ ವಿದೂಷಿಣಿಯೊಂದಿಗೆ ಸ್ಪರ್ಧೆಗೆ ಕುಳಿತಂತೆ. ಆ ಸ್ಪರ್ಧೆಯಲ್ಲಿ ತಾನು ಗೆದ್ದಂತೆ. ಕನಸು ಇನ್ನೂ ಸಾಗಿತು.

"ಏನೇ ಏನೇ!..........." ಎಂದು ಗಂಡ ಮಧ್ಯೆ ರಾತ್ರಿಯಲ್ಲಿ ಎಚ್ಚರಿಸಿದ.

"ಆ್ಞ!......"

"ಏನಿದು ನಿನ್ನ ರಾಗಾಲಾಪನೆ ಮಧ್ಯ ರಾತ್ರಿಯಲ್ಲಿ. ರಾತ್ರಿಯಲ್ಲಿ ಹಾಡು ಗೊಣಗುಟ್ಟುವುದಕ್ಕೆ ಸೂಳೇರ ಮನೆ ಕೆಟ್ಟು ಹೋಯಿತೆ."

"ನಾನೆಲ್ಲಿ ಹೇಳಿದೆ. ನನಗೆ ಯಾವುದೋ ಕನಸು ಬಿದ್ದಿತ್ತು."

"ಸರಿ ಕನಸಿನಲ್ಲಿ ಹೇಳಿದೇಂತ ಅರ್ಥವಾಯಿತು. ಕನಸಿನಲ್ಲಿ ಹೇಳಿದ್ದುದು ಹೇಗೆ ಗೊತ್ತಾಗಬೇಕು."

ತಾನು ಕನಸಿನಲ್ಲಿ ಹಾಡುಗಳನ್ನು ಹೇಳಿದ್ದು ತಿಳಿದೂ ಸಹನೆ ತೆಗೆದು ಕೊಳ್ಳದೆ "ಸೂಳೆ ಮನೆ ಕೆಟ್ಟು ಹೋಯಿತೆ" ಎಂದರು—ಎಂಬ ಭಾವನೆ ಬಂದು ಮನದಲ್ಲಿಯೇ ಒದ್ದಾಡಿದಳು.

"ಇನ್ನು ಮೇಲೆ ಹೇಳೋದಿಲ್ಲ" ಎಂದು ದೀಪ ಆರಿಸಿ ಮಲಗಿದಳು. ಬೆಳಕು ಹರಿಯುವ ವರೆಗೂ ನಿದ್ದೆ ಬರಲಿಲ್ಲ. ಕಣ್ಣು ಕೆಂಪಗಾಗಿದ್ದುವು ಅದರಲ್ಲೇ ತಿಂಡಿ ತೀರ್ಥ ಮಾಡಿ ಗಂಡನನ್ನು ಉಪಚರಿಸಿದಳು. ಮನೆಯ ಬೀಗದ ಕೈಯನ್ನು ನಾರಾಯಣ ಮೂರ್ತಿ ಒಳಗಡೆ ಇದ್ದಾಗ ಹೊರಗಡೆ ಬಂದು ಕೋಟಿನ ಜೇಬಿನಲ್ಲಿ ಹಾಕಿದಳು.

ನಾರಾಯಣ ಮೂರ್ತಿ ಕೆಲಸಕ್ಕೆ ಹೋಗುತ್ತಲೂ ಕಾಗದ ಒಂದನ್ನು ಬರೆದು ಮೇಜಿನ ಮೇಲಿಟ್ಟು ತುಂಬಿ ಬಂದ ದುಃಖವನ್ನು ಹತ್ತಿಕ್ಕಿಕೊಳ್ಳುತ್ತಾ ಬೀಗವನ್ನು ಒತ್ತಿ ಹೊರಟು ಹೋದಳು. ಎಲ್ಲಿಗೆ......?

ಎಲ್ಲಿ ನನ್ನಲ್ಲಿ ಸುಪ್ತವಾಗಿದ್ದ ಕಲೆಯನ್ನು ಜಾಗೃತಗೊಳಿಸಿ, ಕಲೆಯನ್ನೇ ಬಾಳ ಉಸಿರನ್ನಾಗಿಸಲು ಮಾಡಲು ಸಾಧ್ಯವೋ ಅಲ್ಲಿಗೆ!

ನಾರಾಯಣಮೂರ್ತಿ ಕೆಲಸದಿಂದ ಬರುತ್ತಲೂ ದಿಗ್ಭ್ರಮೆಗೊಂಡ. ಬಾಗಿಲಿಗೆ ಬೀಗ ಹಾಕಲ್ಪಟ್ಟಿತ್ತು. ಮಧ್ಯಾಹ್ನ ಕಿಸೆಯಲ್ಲಿ ಬೀಗದ ಕೈ ಸಿಕ್ಕಿದ್ದಕ್ಕೂ ಈಗ ಬೀಗ ಝಡಿಸಿರುವುದಕ್ಕೂ ಅರ್ಥವಿದೆ ಎಂದು ಹೊಳೆಯಿತು. ಒಳಗೆ ಬರುತ್ತಲೂ ಮೇಜಿನ ಮೇಲಿದ್ದ ಕಾಗದ ಸಿಕ್ಕಿತು. ಅದರಲ್ಲಿ ಜಯಂತಿ ಹೃದಯ ತೋಡಿಕೊಂಡಿದ್ದಳು.

ಸ್ವಾಮಿ,

ನಾನು ನಿಮಗೆ ಅನರ್ಹಳಾದ ಪತ್ನಿ. ಅದು ಯಾವ ಯೋಗದಿಂದಲೋ ವಿವಾಹವಾಯಿತು. ನಾನು ಕಲಾರಾಧಕಳು. ಹುಟ್ಟುತ್ತಲೇ ನನ್ನ ನರ ನರಗಳಲ್ಲೂ ಕಲೆಯ ಪ್ರೇಮ ಹರಿಯುತ್ತಿತ್ತು. ಅದನ್ನು ನನ್ನ ಶ್ರಮ, ಸಾಧನೆಯಿಂದ ಮುಂದುವರಿಸಿ ಸಾಧಿಸಿದೆ. ಮತ್ತು ಅದಕ್ಕಾಗಿಯೇ ಜೀವ ಸವೆಸಬೇಕೆಂದು ಮಾಡಿದ್ದೆ. ಇದು ಅವಿವಾಹಿತಳಾಗಿದ್ದಿದ್ದರೆ ಸಾಧ್ಯವಾಗುತ್ತಿತ್ತು, ಇಲ್ಲವೆ ನನ್ನ ಮನಸ್ಸಿಗೆ ಹೊಂದಿಕೊಳ್ಳುವ ಕಲಾರಾಧಕನೊಡನೆ ವಿವಾಹವಾಗಿದ್ದಿದ್ದರೆ ಸಾಧ್ಯವಾಗುತ್ತಿತ್ತು. ವಿಧಿಯಾಣಕದಿಂದ ನನ್ನ ತಂದೆ ತಾಯಿಗಳು ಹಾಗೂ ದುಡುಕಿದೆವು. ನನ್ನನ್ನು ಕ್ಷಮಿಸಿರಿ. ನಾನು ನಿಮ್ಮಿಂದ ದೂರ ಹೊರಟಿದ್ದೇನೆ.

ತಮ್ಮ,

ಜಯಂತಿ.

ಇಲ್ಲಿ ನಾರಾಯಣಮೂರ್ತಿ ಕಾಗದ ಓದುತ್ತಿದ್ದಾಗ, ಅಲ್ಲಿ ವರದರಾಜರಾಯರು ವಿಯೋಗಿ ಜಯಂತಿಯನ್ನು ಸಮಾಧಾನಗೊಳಿಸುತ್ತಿದ್ದರು.

ಕಲಾತಪಸ್ವಿ

ಸಿದ್ಧೇಶ್ವರ ಗುಡ್ಡದಲ್ಲಿನ ಸಿದ್ಧೇಶ್ವರ ಸ್ವಾಮಿಯ ರಥೋತ್ಸವ ಸುತ್ತ ಮುತ್ತಲಿನ ರಥೋತ್ಸವಗಳಿಗಿಂತ ವಿಜೃಂಭಣೆಯಿಂದ ನಡೆಯುತ್ತದೆಂದು, ಪ್ರೇಕ್ಷಕರು ಮತ್ತು ಭೃತ್ಯಾದಿಗಳಿಗೆ ಅನಿಸಿರಲಿಕ್ಕೆ ಸಾಕು. ಆದರೆ ಆ ಗುಡ್ಡದ ತುದಿಯಲ್ಲಿ ಜೋಗಿಯಂತೆ ವಾಸಿಸುವ ಶರ್ಮಾ ಹುಟ್ಟು ಕಲಾವಿದ; ಆತನು ಅಲ್ಲಿ ಐದಾರು ವರ್ಷಗಳಿಂದ ವಾಸಿಸುತ್ತಿರುವನೆಂದು ವರ್ಷಕ್ಕೊಂದು ಬಾರಿ ನೆರೆಯುವ ಜನ ಸಂದಣಿಗೆ ತಿಳಿಯುವ ವಿಧಾನವಾದರೂ ಹೇಗೆ? ಆತನ ಜೀವನದ ವಿಷಯವಾಗಿ ಶ್ರೀ ಸಿದ್ಧೇಶ್ವರ ದೇವರ ಅರ್ಚಕ ಆರಾಧ್ಯ ಮತ್ತು ಹಸುಗಳನ್ನು ಮೇಯಿಸಲು ಬರುತ್ತಿದ್ದ ಹೈಕಳುಗಳಿಗೆ ಅಲ್ಪಸ್ವಲ್ಪ ಪರಿಚಯ ಉಂಟು.

ಶರ್ಮ ನೋಡಲಿಕ್ಕೆ ಸನ್ಯಾಸಿಯಂತೆಯೇ ಇದ್ದ. ನೀಳವಾದ ಕೋಲು ಮುಖದಲ್ಲಿ ಕಪ್ಪನೆಯ ಗಡ್ಡ, ಕೊಂಚ ಡೊಂಕಾದ ಮೂಗು, ಕಾಂತಾಶಕ್ತಿಯನ್ನು ಹೊರಸೂಸುತ್ತಿವೆಯೋ ಏನೋ ಎಂಬಂತಿರುವ ಹೊಳಪು ಕಣ್ಣುಗಳು, ಅಗಲವಾದ ಹಣೆ, ತಲೆಯ ಮೇಲಿನ ಉದ್ದನೆಯ ಕೇಶರಾಶಿ–ಇವೆಲ್ಲವನ್ನು ನೋಡುವವರ ಕಣ್ಣಿಗೆ ಅವನಬಗೆಗೆ ಅತ್ಯಂತಗೌರವ ಭಾವ ತಳೆಯುವಂತೆ ಮಾಡುತ್ತಿದ್ದವು.

ಆ ಕಲಾವಿದ ಇತ್ತೀಚಿನ ವರ್ಷಗಳಲ್ಲಿ ಪೂರ್ಣ ಏಕಾಂತ ಪ್ರಿಯ ನಾಗಿದ್ದ

ಆತನೇನೂ ಕಲ್ಲುಗಳನ್ನು ಕಡೆದು ಸುಂದರ ವಿಗ್ರಹಗಳನ್ನು ಮಾಡುವ ಹೆಸರಾಂತ ಶಿಲ್ಪಿಯಾಗಿರಲಿಲ್ಲ. ಅವನಿಗೆ ಬಾಲ್ಯದಿಂದಲೇ ಚಿತ್ರ ಕಲೆಯಲ್ಲಿ ತುಂಬಾ ಅಭಿರುಚಿ. ಶರ್ಮ ಸೃಷ್ಟಿಸಿದ್ದ ತೈಲ ಚಿತ್ರಗಳು ದೇಶಾದ್ಯಂತ ಪ್ರಚಲಿತವಿದ್ದವು. ನಗರದಲ್ಲಿ ವಾಸಿಸುತ್ತಿದ್ದಾಗ ಆತನ ಹೆಸರು ಖ್ಯಾತವಾಗಿತ್ತು.

ಆತನಿಗೆ ಹಣದ ಅವಶ್ಯಕತೆಯೂ ಅಷ್ಟಾಗಿರಲಿಲ್ಲ. ಆದರೂ ಅವಶ್ಯ ವೆನಿಸಿದಾಗ ಎಂದಾಗರೊಮ್ಮೆ ಭಿಕ್ಷುಕನಂತೆ ಹತ್ತಿರದ ನಗರಕ್ಕೆ ಯಾವು

ದಾದರೂ ಚಿತ್ರದೊಡನೆ ಹೋಗಿ, ತನ್ನ ಆತ್ಮೀಯ ಗೆಳೆಯ ಆನಂದ ಕಂದನ ಮೂಲಕ ವಿಕ್ರಯಮಾಡಿಸಿ ಬಂದಷ್ಟು ಹಣದಲ್ಲಿ ತೃಪ್ತಿ ಹೊಂದುತ್ತಾನೆ.

ಅವನಿಗೆ ನನ್ನದೆಂಬುವ ಸಂಸಾರವೂ ಇರಲಿಲ್ಲ. ಹೇಗೆ ಬಂದನೋ ಹಾಗೆಯೇ ಇನ್ನೂ ಇದ್ದಾನೆ ಆದರೆ ಆ ಕಲಾವಿದನಿಗೆ ಪುರುಷ ಸಹಜವಾದ ಮೋಹ ಆಗಾಗ ಕೆರಳಿ ನಿಲ್ಲುತ್ತಿತ್ತು. ಆದರಿಂದ ಅವನೇನೂ ಮುಕ್ಕ ನಾಗಿರಲಿಲ್ಲ ಆದುದರಿಂದ ಹೆಣ್ಣಿನ ಹಂಬಲದಿಂದಾಗಿ ಆಸೆಯ ಮರೀಚಿಕೆಯ ಬೆಂಗಡೆ ಬಿದ್ದು ನಗರಕ್ಕೇನೂ ಬರುತ್ತಿದ್ದಿಲ್ಲ. ಹಾಗಾದರೆ ಅವನೇನು ಮಾಡುತ್ತಿದ್ದ ?......

......ತನ್ನ ಕಲ್ಪನೆಯ ಭವ್ಯರಂಗದಲ್ಲಿ ಚಾರುತಮ ರಮಣಿಯನ್ನು ಸೃಷ್ಟಿಸಿಕೊಳ್ಳುತಿದ್ದ. ಕಲಾವಿದ ಸೃಜಿತ ಕಲ್ಪನಾರಾಜ್ಯದ ವಾಮ ಪ್ರಪಂಚದ ಸೌಂದರ್ಯವೇ ಮೈವೆತ್ತು ಬಂದಿದೆಯೋ ಎನ್ನುವಂತೆ ಭಾಸ ವಾಗುವ ವಾಸ್ತವ ಪ್ರಪಂಚದಲ್ಲಿನ ಅಭಿರಾಮಾಳಿಗೆ ಎಳ್ಳಷ್ಟಾದರೂ ಕಡಮೆ ಯಿರುತ್ತಿದ್ದಿಲ್ಲ! ಆಗವನು ಕಲ್ಪನೆಯ ಪರಮಾವಧಿಯನ್ನು ಮುಟ್ಟಿ, ಬಾಹ್ಯ ಪ್ರಪಂಚದಿಂದ ನಿರ್ಲಿಪ್ತನಾಗಿ ಅವಳೊಡನೆ ಮಾತಾಡುತ್ತಿದ್ದ, ರಮಿಸುತ್ತಿದ್ದ. ವಿಕೃತ ರೀತಿಯಲ್ಲಿ ತನ್ನ ಹಸಿವನ್ನು ತುಷ್ಟಿ ಮಾಡಿ ಕೊಳ್ಳುತ್ತಿದ್ದ.......

ಒಮ್ಮೆ ಸಿದ್ಧೇಶರ ದೇವಾಲಯದ ಪೂಜಾರಿ ಅವನ ಏಕಾಂತ ಪ್ರಿಯತೆ ಯನ್ನು ಕಂಡು ಮನಮರುಗಿ ಹೇಳಿದ್ದ:

“ಇಗೋ ಶರ್ಮಾ, ದೇವಾಲಯದ ಈ ಎಡ ಪಾರ್ಶ್ವದಲ್ಲಿ ನೀನಿದ್ದು ಬಿಡು. ಪ್ರಪಂಚದಲ್ಲಿನ ವ್ಯವಹಾರದ ಬಗೆಗೆ ಹೇಸಿರಬಹುದು; ಇಲ್ಲವೆ ಬೇರೆ ಏನಾದರೂ ಕಾರಣವಿರಬಹುದು ನಿನ್ನೀಸ್ಥಿತಿಗೆ. ಅದಕ್ಕಾಗಿ ಹೀಗೆ ಹುಚ್ಚು ಅಲೆತಬೇಡ. ಮತ್ತೆ ಆ ನೆಲಮಾರ್ಗದ ಕಡೆಗೂ ಹೋಗಬೇಡ. ಅದು ದುಷ್ಟ ಜಂತುಗಳ ತವರ್ಮನೆ ಆಗಿದೆ.”

ಅಂದಿನಿಂದ ಅವನು ಗುಡ್ಡದಲ್ಲಿ ಸಿಕ್ಕಾಪಟ್ಟೆ ಅಲೆಯುವುದನ್ನು ಬಿಟ್ಟು ದೇವಾಲಯದ ಎಡ ಪಾರ್ಶ್ವದಲ್ಲಿನ ಚಿಕ್ಕ ಕೋಣೆಯಲ್ಲಿ ವಾಸಿಸುತ್ತಿದ್ದ ನಾದರೂ ಗುಡ್ಡದ ಹಿಂಭಾಗದಲ್ಲಿದ್ದ ಸುರಂಗ ಬಳಿ ಹೋಗುವುದನ್ನು ಬಿಡುತ್ತಿದ್ದಿಲ್ಲ ಏಕೋ ಏನಿತೋ ಆ ಸುರಂಗ ದ್ವಾರದ ಕಲ್ಲಿನ ಮೇಲೆ ಕುಳಿತುಕೊಂಡು ತನ್ನ ಕಳೆದು ಹೋದ ದಿನಗಳಲ್ಲಿನ ರಸ ಮತ್ತು ವಿಷ

ಘಳಿಗೆಗಳನ್ನು ನೆನಸಿಕೊಂಡರೇನೆ ತೃಪ್ತಿ. ಅಲ್ಲಿಯೂ ಬೇಸರವೆನಿಸಿದರೆ ಗುಡ್ಡದ ತುದಿಯಲ್ಲಿ ನಿಂತುಕೊಂಡು ಪ್ರಕೃತಿ ಸೌಂದರ್ಯದ ಉಪಾಸಕ ನಾಗುತ್ತಿದ್ದ.

ಸಿದ್ಧೇಶ್ವರ ಗುಡ್ಡದ ಕೆಳಗಡೆಯ ರಸ್ತೆಯಮೇಲೆ ನಡೆದು ಹೋಗುವ ಜನಗಳು ಬೊಂಬೆಯಂತೆ ಕಾಣುತ್ತಾರೆ. ದೃಷ್ಟಿಯನ್ನು ಪಶ್ಚಿಮದ ಕಡೆ ಹಾಯಿಸಿದರೆ ನದಿಯೊಂದು ಹರಿಯುವುದು ಕಾಣಬರುತ್ತದೆ. ಪೂರ್ವದತ್ತ ವೀಕ್ಷಿಸಿದಾಗ ಅರ್ಚಕನ ಚಿಕ್ಕಹಳ್ಳಿ ದೃಗ್ಗೋಚರವಾಗುವುದು. ಆ ಹಳ್ಳಿ ಗುಡ್ಡದಿಂದ ಮೂರು ಮೈಲಿಗಳು ದೂರದಲ್ಲಿದ್ದರೂ ತಪ್ಪಲಿಗೆ ಹತ್ತಿಕೊಂಡಿ ದೆಯೇನೋ ಎಂಬಂತಿದೆ. ಸುತ್ತಲೂ ಹರಿತ ದೃಷ್ಟಿಯನ್ನು ಹರಿಸಿದಾಗ ಎಲ್ಲೆಲ್ಲೂ ಹಸರು ಪೈರು ಪಚ್ಚೆಗಳು, ಹೊಲದ ಪಕ್ಕದಲ್ಲಿನ ಮೇರೆಗಳು ಅತಿ ಸ್ಪಷ್ಟವಾಗಿ ಕಾಣ ಬರುತ್ತವೆ.

ಗುಡ್ಡದ ಹಿಂಭಾಗಕ್ಕೆ ಹತ್ತಿಕೊಂಡಿದ್ದ ನೆಲಮಾರ್ಗ ಅರ್ಧ ಮೈಲಿ ಕೊರೆಯಲ್ಪಟ್ಟಿತ್ತು. ಅದರ ಇನ್ನೊಂದು ದ್ವಾರ ಅಂಬಾಭವಾನಿ ಗುಡಿಯ ಬಲ ಪಾರ್ಶ್ವದಲ್ಲಿತ್ತು. ಮತ್ತೆ ಸುತ್ತಮುತ್ತಲಿನ ಜನಗಳಲ್ಲಿ ಈ ನೆಲಮಾರ್ಗದ ಬಗ್ಗೆ ಒಂದು ದಂತ ಕಥೆಯಿತ್ತು. ಈ ಹಿಂದೆ ಸಿದ್ಧೇಶ್ವರ ದೇವರು ಅಂಬಾ ಭವಾನಿಯ ದೇವಸ್ಥಾನಕ್ಕೆ ಈ ಸುರಂಗದ ಮಾರ್ಗವಾಗಿ ಹೋಗುತ್ತಿತ್ತೆಂದೂ, ಅಂಬಾಭವಾನಿಯು ಸಿದ್ಧೇಶ್ವರನ ಗುಡಿಗೆ ವರ್ಷಕ್ಕೊಂದು ಬಾರಿ ಇದೇ ಮಾರ್ಗವಾಗಿ ಕ್ರಮಿಸಿ ಬರುತ್ತಲಿತ್ತೆಂದೂ ಹೇಳುತ್ತಾರೆ. ಆ ಎರಡೂ ಗುಡ್ಡಗಳು ಒಂದಕ್ಕೊಂದು ಹತ್ತಿಕೊಂಡಿದ್ದು ಎರಡು ದೇವಸ್ಥಾನಗಳನ್ನು ಹೊಂದಿದ್ದವು.

ಇತ್ತೀಚೆಗೆ ಅಂಬಾ ಭವಾನಿಯ ಉತ್ಸವಾದಿಗಳು ನಡೆಯುತ್ತಿರಲಿಲ್ಲ. ಆದರೆ ಸಿದ್ಧೇಶ್ವರ ದೇವರ ರಥೋತ್ಸವ ಅಂಬಾಭವಾನಿಯ ಉತ್ಸವಮೂರ್ತಿ ದಯಮಾಡಿಸದಿದ್ದರೆ ನಡೆಯುತ್ತಿದ್ದಿಲ್ಲ. ಹಾಗೆಂದು, ಅಂಬಾ ಭವಾನಿಯು ಇತ್ತೀಚಿನ ದಿನಗಳಲ್ಲಿ ಈ ಸುರಂಗ ಮಾರ್ಗದಲ್ಲಿ ಬರುತ್ತಿದ್ದಿಲ್ಲ.

ಆ ಸುರಂಗ ಬೆಳಕಿಲ್ಲದೆ ಅನೇಕ ಹುಳಗಳು, ನಾನಾ ವಿಧದ ಹಕ್ಕಿಗಳು, ಗೊಬೆಗಳಿಗೆ ವಾಸಸ್ಥಾನವಾಗಿತ್ತು. ಆದ್ದರಿಂದ ಯಾರೂ ಅಲ್ಲಿ ಕಾಲಿಡು ತ್ತಿದ್ದಿಲ್ಲ. ಕೆಲವರಂತೂ ಅಲ್ಲಿ ಬ್ರಹ್ಮರಾಕ್ಷಸ ವಾಸವಾಗಿದೆ ಎನ್ನುವ ತನಕ ಬಂದಿದ್ದರು. ಇಂಥ ಒಂದು ಸ್ಥಳವನ್ನು ಹುಡುಕಿಕೊಂಡೇ ಬಂದಿದ್ದ

ಶರ್ಮನಿಗೆ ಅನಾಯಾಸವಾಗಿ ಆ ನೆಲಮಾರ್ಗ ದೊರೆಯಿತು. ಹೇಗಾದರೂ ಮಾಡಿ ತನ್ನ ಚಿತ್ರಕಲೆಯನ್ನು ಆ ಸುರಂಗದ ಇಕ್ಕೆಡೆಗಳಲ್ಲಿನ ಗೋಡೆಗಳ ಮೇಲೆ ಚಿತ್ರಿಸಬೇಕು, ಎಂದು ಹಳಹಳಿಸುತ್ತಿರುವಷ್ಟರಲ್ಲಿ ಎರಡು ವರ್ಷಗಳು ಸಂದುವು. ಆ ಹೊತ್ತಿಗೆ ಅರ್ಚಕ ಆರಾಧ್ಯ, ಸರಿಹಳ್ಳಿಯ ಹಸುಮೇಯಿಸುವ ತನಿಯ ಸಾಕಷ್ಟು ಪರಿಚಿತರಾಗಿದ್ದರು. ತನ್ನ ಚಿತ್ರಕಲೆಯ ಬಗೆಗೆ ಅವರಿಗೂ ಪೂರ್ಣ ವಿಚಾರ ತಿಳಿದಿತ್ತು. ಆತನಿಳಿದಿದ್ದ ಪೌಳಿಯಲ್ಲಿನ ರಂಗುರಂಗಿನ ಚಿತ್ರಗಳನ್ನು ನೋಡಿ ಅವರು ಬೆರಗಾಗಿದ್ದರು; ಶರ್ಮ ಕೇವಲ ಸಾಮಾನ್ಯ ಮನುಷ್ಯನಲ್ಲ, ದೇವಾಂಶಸಂಭೂತ ಎಂದುಕೊಂಡಿದ್ದರು.

ಸಿದ್ಧೇಶ್ವರ ದೇವಾಲಯದಲ್ಲಿನ ಪೌಳಿಯಂತಹ ಕೋಲಿಯಲ್ಲಿ ತನ್ನ ಚಿತ್ರಕಲೆಯ ಸಕಲ ಪರಿಕರಣಗಳನ್ನು ಇಟ್ಟುಕೊಳ್ಳುತ್ತಿದ್ದ. ಅನೇಕ ಚಿತ್ರಗಳು ಗಳುವಿನ ಸಹಾಯದಿಂದ ತೂಗು ಹಾಕಿಕೊಂಡಿದ್ದ. ಒಂದೆಡೆಗೆ ಜಗುಲಿಯ ಮೇಲೆ ವೀಣಾಪಾಣಿ ಸರಸ್ವತಿಯ ತೈಲಚಿತ್ರ ಮನಮೋಹಕವಾಗಿ ಚಿತ್ರಿಸಲ್ಪಟ್ಟಿದ್ದು, ಅದನ್ನೇ ನಿತ್ಯವೂ ಪೂಜೆ ಮಾಡುತ್ತಿದ್ದ. ಶರ್ಮ ತಾನು ಚಿತ್ರಿಸಿದ್ದ ಆ ಶಾರದಾಂಬೆಯ ಚಿತ್ರಕ್ಕೆ ಪೂರ್ಣ ಮನಸೋತಿದ್ದ. ಇನ್ನು ತನ್ನ ಜೀವಮಾನದಲ್ಲಿ ಅಂತಹದಿನ್ನೊಂದನ್ನು ತಯಾರಿಸಲಾರೆನೆಂದು ಕೊಳ್ಳುತ್ತಿದ್ದ. ಹಾಗಾದರೆ ಹೇಗೆ ಅದು ಹುಟ್ಟಿ ಬಂತು. ಆ ಜಗನ್ಮಾತೆ ಶಾರದೆಯೇ ಕುಂಚ ನಡೆಸಿದ್ದಾಳೆಯೇ? ಇದ್ದರೂ ಇರಬಹುದು. ಸಾಮಾನ್ಯ ಮಾನವನಿಂದ ಸೃಜಿಸಲಾಗದ ಭವ್ಯ ಕಲಾಕೃತಿ ಅದು, ಎಂದು ಚಿತ್ರದ ಪಾದದಡಿ ಕುಳಿತು ಆನಂದ ಬಾಷ್ಪಗಳನ್ನು ಎಷ್ಟೋ ದಿನ ಸುರಿಸಿದ್ದೂ ಉಂಟು. ಆ ಭಾವಚಿತ್ರವನ್ನಿಟ್ಟುಕೊಂಡು ದಿನವೂ ಏಕಾಗ್ರತೆಯಿಂದ ಉಪಾಸನೆ ಮಾಡುತ್ತಿದ್ದ. ಮೊದಮೊದಲು ಆ ಶಾರದೆಯ ಚಿತ್ರದ ಸುತ್ತಲೂ ಸುವರ್ಣ ಛಾಯೆ ಹುಟ್ಟುತ್ತಿತ್ತು. ತದನಂತರ ಆ ಛಾಯೆ ದೇವಿಯ ಭಾವಚಿತ್ರವನ್ನು ತುಂಬು ಆವರಿಸಿ ಅತುಲನೀಯ ಸಂತುಷ್ಟಿಯ ತರಂಗಗಳನ್ನು ಹೃದಯಾಂತರಾಳದಲ್ಲಿ ವಿಕಸಿತ ಮಾಡಿದಾಗಲೇ ಆ ಕಲಾವಿದ ಉಪಾಸನೆಯಿಂದ ಎಚ್ಚೆತ್ತು, ಸಾಷ್ಟಾಂಗ ನಮಸ್ಕಾರ ಮಾಡಿ ಹೊರಗಡೆ ಬಂದು ನಿಂತುಕೊಂಡು ಸೃಷ್ಟಿ ಸೌಂದರ್ಯವನ್ನು ನೋಡುತ್ತ ತಲ್ಲೀನನಾಗುತ್ತಿದ್ದ.

ಒಂದು ದಿನ ದೇವಿಯ ಉಪಾಸನೆಯಿಂದ ಮನಸ್ಸು ಹರ್ಷಗೊಂಡಿತ್ತು. ಕುಳಿರ್ಗಾಳಿ ತೀಡುತ್ತಿತ್ತು. ಶಾರದಾಂಬೆಯ ತೈಲ ಚಿತ್ರದ ಬಗ್ಗೆ ಹಿಂದೆ ನಡೆದಿದ್ದ ಘಟನೆಯೊಂದು ಮನೋಪಟಲದಲ್ಲಿ ನೆರಳಿನಂತೆ ಮೂಡಿತು

ತಾನು ಪಟ್ಟಣದಲ್ಲಿದ್ದಾಗ ಅದೇ ಚಿತ್ರ ನಗರದಲ್ಲಿನ ಗಣ್ಯ ವ್ಯಕ್ತಿ ಸಾಹುಕಾರ್ ರಾವಸಾಹೇಬರ ಕಣ್ಣಿಗೆ ಬಿದ್ದು, ಅದನ್ನು ತಮಗೆ ಮಾರಲು ಎಷ್ಟು ಒತ್ತಾಯ ಮಾಡಿದ್ದರು. ಚಿತ್ರವನ್ನು ಕೊಡಲು ನಿರಾಕರಿಸಿದ್ದಕ್ಕೆ ಎಂಥ ಹಿಂಸೆ ಕೊಟ್ಟರು! ಹೌದು, ಆ ಪಟ್ಟಣವನ್ನು ಬಿಡಲಿಕ್ಕೆ ಅದೂ ಒಂದು ಕಾರಣ.

ಓರ್ವ ಪ್ರತಿಭಾವಂತ ಕಲಾವಿದನಿಗೆ ಜನತೆ ತೋರಿಸಿದ ಆದರ ಈ ರೀತಿಯಿತ್ತು!

ಆ ಹಿಂದಣ ಸಂಗತಿಯನ್ನು ಆದಷ್ಟು ಬೇಗ ಮರೆಯಬೇಕಿತ್ತು. ಒಳಗಡೆ ಒಂದು ಅಲ್ಪೋಪಹಾರ ಮಾಡಿ ಚಿತ್ರ ರಚನೆಯ ಪರಿಕರಣ ಗಳೊಡನೆ ನೆಲಮಾರ್ಗದ ಕಡೆ ಹೊರಟ.

"ಇಂದು ಸೋಮವಾರ. ಆರಾಧ್ಯರು ಪೂಜೆಗೆ ಬರುತ್ತಾರೆ. ದೇವಸ್ಥಾನ ದೂರವೆಂದು ವಾರಕ್ಕೊಂದು ಬಾರಿ ಮಾತ್ರ ಬರುತ್ತಾರೆ. ತನಿಯ ಇಂದು ಬರದಿದ್ದರೆ ನಟರಾಜನ ಚಿತ್ರ ಅರ್ಧಕ್ಕೇ ನಿಲ್ಲುತ್ತದೆ. ಚಿತ್ರರಚನೆಯ ಪರಿಕರಗಳನ್ನು ತರಲು ನಗರಕ್ಕೆ ಇನ್ನೊಂದೆರಡು ದಿನಗಳಲ್ಲಿ ಹೋಗದೇ ಇದ್ದರೆ ಕೆಲಸವನ್ನು ಪೂರ್ಣ ನಿಲ್ಲಿಸಬೇಕಾಗುತ್ತದೆ" ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಾ ನೆಲಮಾರ್ಗಕ್ಕೆ ಬಂದು ಅರ್ಧ ರಚಿಸಿದ್ದ ನಟರಾಜನ ಚಿತ್ರದ ಬಳಿ ಕುಳಿತುಕೊಂಡ. ತನಿಯ ಬರುವ ಹೊತ್ತೂ ಆಗಿತ್ತು.

ಚಿತ್ರದ ಕೆಳಗಡೆ ಕುಳಿತು ದೃಷ್ಟಿ ಹಾಯಿಸುವಷ್ಟು ದೂರ ನೆಲಮಾರ್ಗ ವನ್ನು ದಿಟ್ಟಿಸಿದ. ದೃಷ್ಟಿ ಹೋಗುತ್ತ ಹೋಗುತ್ತ ಕತ್ತಲು ಕಂಡರೂ ಸ್ವಚ್ಛವಾಗಿತ್ತು, ಆ ವಾತಾವರಣ ಶಾಂತವಾಗಿತ್ತು.

ಅಂಧಕಾರದ ಆಲಯದಂತಿದ್ದ ನೆಲಮಾರ್ಗವನ್ನು ತನಿಯ, ಆರಾಧ್ಯ, ಶರ್ಮ ಮೂವರೂ ಕೂಡಿಕೊಂಡು ವಿಶಿಷ್ಟವಾದ ಸೊಪ್ಪಿನ ಹೊಗೆಯನ್ನು ಒಂದು ಕಡೆಯ ಬಾಗಿಲಿಗೆ ಹಾಕಿ ವಿಷಜಂತುಗಳಿಗೆ, ನಾನಾವಿಧ ಕ್ರಿಮಿಕೀಟ ಗಳಿಗೆ ನಿವಾಸಸ್ಥಾನವಾಗಿದ್ದ ನೆಲಮಾರ್ಗವನ್ನು ತೆರವು ಮಾಡಿದರು. ಅಂಬಾ ಭವಾನಿ ದೇವಸ್ಥಾನದ ಬಳಿಯ ಬಾಗಿಲಿನಿಂದ ಅವೆಲ್ಲವೂ ಹೊರಟು ಹೋದ ಅನಂತರ ಸೂಟೆ ಉರಿಸಿಕೊಂಡು ನೆಲಮಾರ್ಗವನ್ನು ಗುಡಿಸಿದರು. ನೆಲ ಮಾರ್ಗದ ಮೇಲೆ ಹತ್ತಿ ಬಾವಾಳಗಳನ್ನು ರಚಿಸಿದರು. ಎರಡೂ ಪಾರ್ಶ್ವದ ಗೋಡೆಗಳಿಗೆ ಸುಣ್ಣ ಬಳಿದರು. ಈ ಮುಂಚೆಯೇ ಕಲ್ಲಿನ ಗೋಡೆಗೆ ವಜ್ರ

ಚೂರ್ಣವನ್ನು (ಸಿಮೆಂಟ್) ಯಾರೋ ಹಿಂದಿನವರು ಮಾಡಿಸಿದ್ದರು. ಇದೊಂದು ಇವರೀಕಾರ್ಯ ಸುಗಮವಾಗಲು ಅನುವಾಯಿತು. ಎರಡು ಮೂರು ವರ್ಷಗಳ ಚಿರಂತನ ದುಡಿಮೆಯಿಂದ ಒಂದು ಕಡೆಯ ಗೋಡೆ ಭಾರತದ ಚರಿತ್ರೆಯನ್ನು ಹೇಳುವಂತಾಯಿತು. ಇನ್ನೊಂದು ಗೋಡೆ ಶಿವನ ಎಲ್ಲಾ ವಿಧದ ಲೀಲೆಗಳನ್ನು ದ್ಯೋತಕಪಡಿಸುವಂತಾಯಿತು. ತನಿಯನೊಬ್ಬ, ನಿಲ್ಲದಿದ್ದರೆ ಕಲಾವಿದನ ಕನಸು ನನಸಾಗುತ್ತಿದ್ದಿಲ್ಲ. ಆತ ಪರಿಚಯವಾಗಿದ್ದು ಶಾರದಾಂಬೆಯ ಅನುಗ್ರಹ ಬಲದಿಂದಲೇ ಎಂದು ಹೇಳಬೇಕು. ಶರ್ಮಾ ತನ್ನ ತೈಲಚಿತ್ರಗಳ ವಿಕ್ರಯದಿಂದ ಬಂದ ಹಣದಲ್ಲಿ ತನ್ನ ಕೆಲಸಕ್ಕೆ ನೆರವಾದ ತನಿಯನಿಗೂ ಕೊಡುತ್ತಿದ್ದ. ಇಲ್ಲದಿದ್ದರೆ ಸದಾ ತನ್ನ ಕೆಲಸದಲ್ಲಿ ಭಾಗಿಯಾಗುತ್ತಿದ್ದ ಆ ಬಡವನ ಬಾಳೂ ಸಾಗಬೇಕಲ್ಲ. ಉಮಾಪತಿಯ ಲೀಲೆಗಳನ್ನು ರಚಿಸಲಿಕ್ಕೆ ತನಿಯ ರೂಪದರ್ಶಿಯಾಗದಿದ್ದರೆ ಎಂದೂ ಅದು ಕೈಗೂಡುತ್ತಿದ್ದಿಲ್ಲ.

ಮುನ್ನಾದಿನ ಯೋಚಿಸಿದಂತೆ ನಗರಕ್ಕೆ ಚಿತ್ರಣದ ಪರಿಕರಗಳನ್ನು ತರಲು ಶರ್ಮಾ ಹೋದ. ಆತನಿಗೆ ಆಗಾಗ ನೆರವು ನೀಡುತ್ತಿದ್ದ ಮಿತ್ರ ಆನಂದಕಂದ ಬೆಟ್ಟಿಯಾದ. ಆತನೂ ಸಂಗೀತಗಾರ. ಗಣ್ಯ ಸಂಗೀತಗಾರರ ಶ್ರೇಣಿಯಲ್ಲಿ ಆತನ ಹೆಸರೂ ಕೇಳಿ ಬರುತ್ತಿತ್ತು. ಅದಕ್ಕೆಂದೇ ಆ ಕಲಾವಿದ ಚಿತ್ರ ಕಲಾವಿದನನ್ನು ಪ್ರೀತಿಸುತ್ತಿದ್ದ. ಕಲಾವಿದನ ಕಷ್ಟಗಳನ್ನು ಅವನೂ ತನ್ನ ಜೀವನದಲ್ಲಿ ಊಟಮಾಡಿದ್ದ.

ಆನಂದ ಕಂದ ಹೇಳಿದ:

"ಶರ್ಮಾ, ಗುಡ್ಡಕಾಡುಗಳಲ್ಲಿ ಕುಳಿತುಕೊಂಡು ಯಾವ ಪುರುಷಾರ್ಥ ಸಾಧನೆ ಮಾಡಬಲ್ಲೆ. ಯಾವುದಾದರೂ ದೊಡ್ಡ ನಗರಕ್ಕೆ ಹೋಗಿ ನಿನ್ನ ಪ್ರತಿಭೆಯನ್ನು ಬೆಳಗಿಸು."

"ಈ ನಗರಗಳ ರುಚಿ ನನಗೇನೂ ಗೊತ್ತಿಲ್ಲವೆನ್ನಬೇಡ. ನನ್ನ ಆತ್ಮ ಸಂತೃಪ್ತಿಗೆಂದು ಅಮರ ಕಲಾಕೃತಿಗಳ ರಚನೆಯನ್ನು ಎಂದೋ ಸಿದ್ಧೇಶ್ವರ ಗುಡ್ಡದಲ್ಲಿ ಚಿತ್ರಿಸುತ್ತಿದ್ದೇನೆ. ಈ ಪಟ್ಟಣಗಳ ಜಂಜಾಟ ನನಗೆ ಬೇಡ."

"ನಿಜವಾಗಿಯೂ ಚಿತ್ರಿಸುತ್ತಿದ್ದಿಯಾ?.......ಅಣ್ಣಾ! ಒಮ್ಮೆಯಾದರೂ ಹೇಳಿರಲಿಲ್ಲವಲ್ಲ."

"ಆನಂದು, ನನ್ನ ಹುಟ್ಟು ಸ್ವಭಾವವನ್ನು ನೀನರಿಯೆಯಾ? ಕೆಲಸ ಪೂರೈಸದ ಮುನ್ನ ಹೇಳಿಕೊಳ್ಳುವ ಸ್ವಭಾವ ನನ್ನದಲ್ಲವೆಂದು."

ಈ ಬಾರಿ ನಟರಾಜನ ಚಿತ್ರ–ಒಂದನ್ನು ಮಾಡಿಕೊಂಡು ಬಂದಿದ್ದ. ಅರಿವೆಯಲ್ಲಿ ಮುಚ್ಚಿದ್ದುದನ್ನು ತೆಗೆದು ಆನಂದಕಂದನಿಗೆ ತೋರಿಸಿದ.

ಕೈಲಾಸವಾಗಿ ಜಟಾಧಾರಿ ಶಂಕರನು ತಾಂಡವ ನೃತ್ಯ ಮಾಡುತ್ತಿದ್ದಾನೆ. ಆತನು ತನ್ನಲ್ಲಿಯೇ ಲೀನವಾಗಿ ಕೈಲಾಸ ಪರ್ವತವೇ ನಡುಗುವಂತೆ ನೃತ್ತಿಸುತ್ತಿದ್ದಾನೆ. ನಟರಾಜನ ತೈಲಚಿತ್ರವನ್ನು ನೋಡಿ ಆನಂದ ಬಾಷ್ಪಗಳನ್ನು ಸುರಿಸುತ್ತ ಆನಂದಕಂದ ಮೆಲುಧ್ವನಿಯಲ್ಲಿ ಹೇಳಿದ:

"ಶರ್ಮಾ ನೀನು ಅಮರ ಕಲಾವಿದ. ಪರಂತು ನಿನಗೆ ಸರಿಯಾದ ಪ್ರೋತ್ಸಾಹವಿಲ್ಲ. ನಿನ್ನ ಕೃತಿಗಳು ಹೊರಬರದೇ ಇರುವುದನ್ನು ತಿಳಿದ ಜನಗಳು ನೀನು ಎಲ್ಲಿಯೋ ಸತ್ತು ಹೋಗಿದ್ದೀಯೆಂದು ತಿಳಿದುಕೊಂಡಿದ್ದಾರೆ. ಅನೇಕ ಪತ್ರಿಕೆಗಳು ನಿನ್ನ ಭಾವಚಿತ್ರವನ್ನು ಪ್ರಕಟಿಸಿ ನಿನ್ನ ಆತ್ಮಕ್ಕೆ ಶಾಂತಿಯನ್ನು ಕೋರಿದ್ದಾರೆ. ಆದರೆ "ಕಲಾತಪಸ್ವಿ ಎಂಬ ಹೆಸರಿನಿಂದ ಬರುವ ಇತ್ತೀಚಿನ ಕೃತಿಗಳು ನಿನ್ನವೆಂದು ಅವರಿಗೆ ಗೊತ್ತಿಲ್ಲ. ಎಲ್ಲೆಲ್ಲೋ ನಿನ್ನ ಪುಣ್ಯ ದಿನಾಚರಣೆಗಳು ನಡೆದವು. ಆದರೆ ನೀನು......ನೀನು......"

– ಮುಂದೆ ಮಾತಾಡದಾದ ಆನಂದಕಂದ. ಕಣ್ಣೀರು ಧಾರಾಕಾರವಾಗಿ ಹರಿಯುತ್ತಿತ್ತು. ಕಂಠ ಬಿಗಿದು ಬಂದಿತ್ತು.

"ಆನಂದೂ......'ಬದುಕಿದಾಗ ಮುಳ್ಳಿನ ಹಾಸಿಗೆ ಬದುಕಿನ ಬಳಿಕ ಹೂವಿನ ಹಾಸಿಗೆ' ಎಂದು ಸಾಹಿತಿಗಳೊಬ್ಬರು ಗಾಂಧೀಜಿಯವರ ಬಗೆಗೆ ಹೇಳಿದ್ದಾರೆ. ಅದೇ ಮಾತು ಈ ಕಲಾವಿದನಿಗೂ ಅನ್ವಯಿಸುತ್ತದೆ. ಹೇಗೆಂದರೆ ಕಲಾವಿದನನ್ನು ಬದುಕಿದ್ದಾಗ ಮುಳ್ಳಿನ ಹಾಸಿಗೆಯಲ್ಲಿ ಜನತೆ ಕೂರಿಸುತ್ತದೆ. ಆದರೆ ಅದೇ ಸತ್ತನಂತರ ಹೂವಿನ ಹಾಸಿಗೆಯ ಮೇಲೆ ಎಂತು ಕೂರಿಸುತ್ತಾರೆ ಎಂಬುದಕ್ಕೆ ಇದೀಗ ನೀನು ಹೇಳಿದ ಮಾತುಗಳು ಸಜೀವ ಉದಾಹರಣೆಗಳು. ನನ್ನ ಬಾಳಿನಲ್ಲಿ ಇಷ್ಟಾಗಬೇಕಿತ್ತು. ಆಗಿ ಹೋಯಿತು. ಇರಲಿ ಈ ಮಾತು, ನಾನು ಚಿತ್ರಿಸುತ್ತಿರುವ ಕೃತಿಗಳನ್ನು ನೋಡಲು ಗುಡ್ಡಕ್ಕೆ ಒಂದು ದಿನ ಬರುತ್ತೀ ತಾನೇ?"

"ಅವಶ್ಯ ಬರುವೆ ಮಿತ್ರ. ನೀನು ಕರೆಯುವುದು ಹೆಚ್ಚೋ, ನಾನು ಬರುವುದು ಹೆಚ್ಚೋ."

"ನಾನು ಬರಲೇ?"

"ಈ ಚಿತ್ರವನ್ನು ಸರಿಯಾದವರಿಗೆ ಸಮಯ ನೋಡಿ ಮಾರು
ಈಗ ಕೆಲವಂಶ ಋಣ ಕೊಟ್ಟಿರುತ್ತೇನೆ. ತೆಗೆದುಕೊಂಡು ಹೋಗು."

"ಆನಂದೂ, ನಾನು ಯಾವಾಗ ಈ ಋಣವನ್ನು ತೀರಿಸಲಿ......"

"ದಯವಿಟ್ಟು ಹಾಗೆನ್ನಬೇಡ. ದೇಶವೇ ನಿನಗೆ ಚಿರಋಣಿಯಾಗಿ
ನಾನೊಬ್ಬ ಅಲ್ಪ ಮಾನವ. ಸೂಚಿಯ ಮೊನೆಯಷ್ಟು ಕೆಲಸ ಮಾಡಿಕೊಟ್ಟ
ಕೈಯೇನೂ ಸವೆಯುವುದಿಲ್ಲ."

ಆನಂದ ಕಂದನ ಬಳಿ ಹಣ ಪಡೆದು, ಆತನಿಂದಲೇ ಸಾಮಾಗ್ರಿಗಳನ
ಕೊಂಡು ತರಿಸಿ ಸಿದ್ಧೇಶ್ವರ ಗುಡ್ಡಕ್ಕೆ ಹಿಂದಿರುಗಿದ.

ಪುನಃ ಮಾರನೆಯ ದಿನ ತನಿಯ ನೆಲಮಾರ್ಗಕ್ಕೆ ಬಂದ. ಶರ್ಮ ಅಧ
ನಿಲ್ಲಿಸಿದ. ನಟರಾಜನ ಚಿತ್ರವನ್ನು ಪಕ್ಕದಲ್ಲಿ ಕೂರಿಸಿಕೊಂಡು ಬರೆಯ
ಹತ್ತಿದ. ಎರಡು ಮೂರು ಘಂಟೆಗಳ ದುಡಿಮೆಯಾದ ನಂತರ,

"ತನಿಯ, ನೀನು ಸಾಕ್ಷಾತ್ ಪರಶಿವನ ರೂಪವನ್ನೇ ಹೋಲುತ್ತೀ
ನೀನೇ ಆ ಶಿವರೂಪಿ ತನಿಯನಲ್ಲವಲ್ಲ" ಎಂದ.

ತನಿಯ ಆಗ ಮುಗುಳ್ನಕ್ಕ.

ಶರ್ಮ ಕುಂಚ ಕೆಳಗಿಟ್ಟು ನಖಶಿಖಾಂತ ನೋಡುತ್ತಿದ್ದ. ಹರವಾದ
ಎದೆ, ಸಮತೂಲ ಬಾಹುಗಳು, ಪ್ರಸನ್ನವದನ, ನೀಳವಾದ ಮೂಗು
ಗುಂಗುರು ಕೂದಲು ಸಾಕ್ಷಾತ್ ಉಮಾಪತಿಯ ಪ್ರತಿರೂಪದಂತಿದ್ದ
ತನಿಯ. ಹೌದು! ಅದೇ ತನಿಯ ನೆಲಮಾರ್ಗವನ್ನು ದೇವಸ್ಥಾನವನ್ನಾಗಿ
ಮಾಡಲು ಕಾರಣನಾಗಿದ್ದ. ಶಿವನ ಚಿತ್ರಕ್ಕೆ ರೂಪದರ್ಶಿಯಾಗಿದ್ದ. ಶರ್ಮ
ಎವೆಯಿಕ್ಕದೆ ನೋಡುತ್ತಿದ್ದು ಪುನಃ ಕಾರ್ಯದಲ್ಲಿ ಮಗ್ನನಾದ.

ಕೆಲವು ಘಳಿಗೆಗಳ ಅನಂತರ ನಟರಾಜನ ಚಿತ್ರ ಮೈವೆತ್ತು ನಿಂತಿತು.
ಸಾಕ್ಷಾತ್ ನಟರಾಜನೆ ಚಿತ್ರರೂಪದಲ್ಲಿ ತಾಂಡವ ನೃತ್ಯದ ಭಂಗಿಯಲ್ಲಿ
ನಿಂತುಕೊಂಡಿದ್ದಾನೆ. ಅಲ್ಲಿಗೆ ಚಿತ್ರಿಸಬೇಕಾಗಿದ್ದ ಎಲ್ಲಾ ಚಿತ್ರಗಳು ಮುಗಿ
ದುವು. ಆ ನೆಲಮಾರ್ಗದಲ್ಲಿ ಚಿತ್ರಿಸಿದ್ದ ಚಿತ್ರಗಳಲ್ಲೆಲ್ಲಾ ನಟರಾಜನ ಚಿತ್ರ
ಸುಂದರ ಹಾಗೂ ಭವ್ಯವಾದದ್ದು. ಕಲಾವಿದ ಶರ್ಮ. ಬಣ್ಣದ ಕುಂಚ
ವನ್ನು ಕೆಳಗಿಟ್ಟು ಕಲಾವಿದರು ತನ್ನ ಅದ್ಭುತ ಕಲಾಕೃತಿಯನ್ನು ತಾನೇ ಮೈ
ಮರೆತು ನೋಡಿ ವಿಜಯಾನಂದವನ್ನು ಅನುಭವಿಸುವಂತೆ ಪ್ರಫುಲ್ಲವದನ

ಾಗಿ ನೋಡಿದ. ಕಲಾವಿದನ ತಪಸ್ಸು ಸಿದ್ಧಿಸಿತ್ತು. ಶರ್ಮನ ಮೈ
ೋಮಾಂಚನಗೊಂಡಿತು. ಮುಖ ಒಮ್ಮೆಲೆ ಮೆಟ್ಟಲಾಗಿ ತನಗರಿಯದಂತೆ
ಮೇಲೆ ಮೇಲಕ್ಕೆ ಹೋಗಿ ಒಂದು ತೆರನ ಭಂಗಿಯಲ್ಲಿ ನಿಂತಿತು. ಎರಡು
ಾಹುಗಳು ಬಿಲ್ಲಿನಂತೆ ಮುಂದೆ ಬಗ್ಗಿದುವು.

ಆ ಹೊತ್ತಿಗಾಗಲೇ ಸಾಯಂಕಾಲವಾಗಿತ್ತು. ಮಳೆಯ ಮೋಡ
ಳು ದಟ್ಟಣಿಗೊಂಡಿದ್ದು ಗುಡುಗು ಆರ್ಭಟಿಸುತ್ತಿತ್ತು. ಜಗ್ಗನೆ ಮಿಂಚು
ುಂಚಿ ನಟರಾಜನ ಕೃತಿಗೆ ಅವರ್ಣನೀಯ ಕಾಂತಿಯನ್ನು ಕೊಟ್ಟಿತು.

ತನಿಯ, ಕಲಾವಿದನ ಸ್ಥಿತಿಯನ್ನು ನೋಡಿ, ಕಕ್ಕಾಬಿಕ್ಕಿಯಾದ.
ರ್ಮನ ಕಣ್ಣುಗಳು ವಿಜಯ ಪ್ರಕಾಶವನ್ನು ಸೂಸುತ್ತಿದ್ದವು. ಬಾಹ್ಯ
ಪ್ರಪಂಚದ ಅರಿವೇ ಅವನಿಗಿರಲಿಲ್ಲ. ಮತ್ತೆ ಅವನಿಗೆ ಅದೇನು
ೇಳಿಸುತ್ತದೆ?

ಸಾಕ್ಷಾತ್ ನಟರಾಜನ ಡಮರುವಿನ ಧ್ವನಿ ದಿಗ್ಭಿತ್ತಿಗಳಿಂದ ಕೇಳಿಸುತ್ತ
ಿದೆ. ರುದ್ರನಂತೆ ತ್ರಿಶೂಲಧಾರಿಯಾಗಿ ತಾಂಡವ ನೃತ್ಯವನ್ನಾಡುತ್ತಿದ್ದಾನೆ,

"ಪ್ರಭೋ! ಪ್ರಭೋ!. ಕರೆದುಕೊ ಕರೆದುಕೋ!!." ಎಂದು ಕೈ
ೕಡಿ ಒಮ್ಮೆಲೇ ನೆಲದ ಮೇಲೆ ಬಿದ್ದ. ಈ ಭಯಾನಕ ದೃಶ್ಯವನ್ನು ನೋಡ
ಾರದೆ ತನಿಯನೂ ನಡುಗುತ್ತಿದ್ದ. ಗುಡುಗು ಸಳೆಮಿಂಚು ನಿಂತು ಮಳೆ
ಹೊರಗಡೆ ಆಗಲೇ ಪ್ರಾರಂಭವಾಗಿತ್ತು.

ಅದೇ ದಿನ ಸಿದ್ಧೇಶ್ವರ ದೇವಾಲಯಕ್ಕೆ ಧರ್ಮದರ್ಶಿಗಳೂ ಮುಜ
ಾಯಿ ಇಲಾಖೆಯ ಆಢಳಿತ ವರ್ಗದವರೂ ವರ್ಷಕ್ಕೊಂದು ಬಾರಿ ಬರು
ಂತೆ ಲೆಕ್ಕ ತಪಾಸಣೆಗೆ ಬಂದಿದ್ದರು. ಈ ಮುನ್ನ ಆಢಳಿತ ವರ್ಗದವ
ಗೆ ಶರ್ಮನ ವಿಚಾರವಾಗಿ ಆನಂದಕಂದ ನಗರದಲ್ಲಿ ಸೂಕ್ಷ್ಮವಾಗಿ
ೇಳಿದ್ದ ದೇವಸ್ಥಾನಕ್ಕೆ ಬಂದ ಮೇಲೆ ಆರಾಧ್ಯರೂ ತಿಳಿಸಿದರು. ಎಲ್ಲರೂ
ಾಕತಾಳ ನ್ಯಾಯದಂತೆ ಸುರಂಗದ ಬಾಗಿಲಬಳಿ ಬಂದರು. ತನಿಯ
ರಾಧ್ಯರ ಬಳಿ ಗಾಬರಿಯಿಂದ ಓಡಿ ಬಂದು ಶರ್ಮ ಮೂರ್ಛೆ ಹೋಗಿ
ದ್ದಾನೆಂದು ಅರುಹಿದ.

ಎಲ್ಲರೂ ಶ್ವರ್ಯದಲ್ಲಿ ಬಂದು ಆ ಹೃದಯವಿದ್ರಾವಕ ದೃಶ್ಯವನ್ ನೋಡಿದರು. ಶರ್ಮ ಕೆಳಗಡೆ ಬಿದ್ದಿದ್ದಾನೆ. ಮಳೆಯ ಇರಚಲು ಹನ ಗಳು ಶರೀರಾದ್ಯಂತ ಬಿದ್ದು ತಪ್ಪಡಿ ಮಾಡಿವೆ. ಆನಂದಕಂದ, ತನಿಯ ಅವನನ್ನು ಮಾರ್ಗದ ಸುರಕ್ಷಿತ ಭಾಗಕ್ಕೆ ಒಯ್ದು ಒಣಬಟ್ಟೆಯಿಂದ ಒರೆಸಿ ನಾಡಿಯನ್ನು ಪರೀಕ್ಷಿಸಿದರು. ನಾಡಿ ತಣ್ಣಗಿತ್ತು ಹೃದಯದ ಮೇಲ ಕೈಯಿಟ್ಟು ನೋಡಿದರು. ಅದು ತೀರ ಮೌನವಾಗಿತ್ತು. ಕಲಾವಿದನಿಗ ಅಮರ ಶಾಂತಿ ಲಭಿಸಿತ್ತು.

* * * *